
ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಫ್ಯಾಷನ್ ಸಪ್ತಾಹ
ಮುಂಬೈನಲ್ಲಿ ಶನಿವಾರ ನಡೆದ ಎಫ್‌ಡಿಐಸಿ ಎಕ್ಸ್ ಲ್ಯಾಕ್ಮೆ ಫ್ಯಾಷನ್ ಸಪ್ತಾಹದಲ್ಲಿ ಬಾಲಿವುಡ್ ನಟಿ ತಾರಾ ಸುತಾರಿಯಾ ಅವರು ಹೆಜ್ಜೆ ಹಾಕಿದರು



ಭಾನುವಾರ, ಅಕ್ಟೋಬರ್ 16, 2022 | ₹ 6.00 • www.prajavani.net /prajavani.net @prajavani /+prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಮಿತಾ ಮೋಡಿ

ಬೆಂಗಳೂರಿನಲ್ಲಿ ಶನಿವಾರ 'ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್' ಆಯೋಜಿಸಿದ್ದ ಭೂಮಿಕಾ ಕ್ಲಬ್‌ನ 2ನೇ ಕಾರ್ಯಕ್ರಮದಲ್ಲಿ ಗಾಯಕಿ ಶಮಿತಾ ಮಲ್ನಾಡ್ ಅವರು ಹಾಡಿ ರಂಜಿಸಿದರು



ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಾಯಿಬಾಬಾ ಖುಲಾಸೆ ಆದೇಶ ರದ್ದು

ನವದೆಹಲಿ (ಪಿಟಿಐ): ಮಾಜಿ ಪ್ರಾಧ್ಯಾಪಕ ಜಿ.ಎನ್. ಸಾಯಿಬಾಬಾ ಅವರನ್ನು ಖುಲಾಸೆಗೊಳಿಸಿ ಬಾಂಬೆ ಹೈಕೋರ್ಟ್ ನೀಡಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ಶನಿವಾರ ರದ್ದುಗೊಳಿಸಿದೆ. 4

ಕ್ರಿಕೆಟ್: ಭಾರತಕ್ಕೆ ಮಹಿಳಾ ಏಷ್ಯಾಕಪ್

ಸಿಲೆಟ್, ಬಾಂಗ್ಲಾದೇಶ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡವು ಏಳನೇ ಸಲ ಏಷ್ಯಾ ಕಪ್ ಜಯಿಸಿತು. ಶನಿವಾರ ನಡೆದ ಫೈನಲ್ ಪಂದ್ಯದಲ್ಲಿ ಭಾರತ, 8 ವಿಕೆಟ್‌ಗಳಿಂದ ಶ್ರೀಲಂಕಾ ವಿರುದ್ಧ ಜಯಗಳಿಸಿತು. 9

ಚಿನಕುರಳಿ

ಪ್ರಕಾಶ್ ಶೆಟ್ಟಿ



ರಾಜ್ಯದಲ್ಲೂ ವ್ಯಾಪಕವಾಗಿ ಹರಡಿದ ಚರ್ಮಗಂಟು ರೋಗ

ನಲುಗಿದ ‘ಕಾಮಧೇನು’

ಒಳನೋಟ

ಹೈನು ಉದ್ಯಮ ಪ್ರಪಾತಕ್ಕೆ

ಪ್ರತಿಕ್ರಿಯಿಸಿ: 9606038256
feedback@prajavani.co.in

• ಶ್ರೀಕಾಂತ ಕಲ್ಲಮ್ಮನವರ



ಚರ್ಮಗಂಟು ರೋಗಕ್ಕೆ ತುತ್ತಾದ ಜಾನುವಾರು

ಹುಬ್ಬಳ್ಳಿ: ದೇಶದ ಆರ್ಥಿಕ ಚಟುವಟಿಕೆಗೆ ಕೃಷಿ ಬೆನ್ನೆಲುಬಾದರೆ, ಕೃಷಿಗೆ ರೈತ ಹಾಗೂ ಜಾನುವಾರುಗಳೇ ಬೆನ್ನೆಲುಬು. ಜಾನುವಾರುಗಳಲ್ಲಿ ವ್ಯಾಪಕವಾಗಿ ಕಾಣಿಸಿಕೊಳ್ಳುತ್ತಿರುವ ಚರ್ಮಗಂಟು (ಲಂಪಿಸ್ಕಿನ್) ರೋಗ ಕೇವಲ ಜಾನು-ವಾರುಗಳನ್ನಷ್ಟೇ ಅಲ್ಲ, ರೈತರ ಬದುಕಿನ ಮೇಲೂ ಗದಾಪ್ರಹಾರ ಮಾಡಿದೆ. ರೋಗಕ್ಕೆ ತುತ್ತಾಗಿ ಸಾವಿಗೀಡಾಗುತ್ತಿರುವ ಜಾನುವಾರುಗಳ ಸಂಖ್ಯೆ ದಿನೇದಿನೇ ಹೆಚ್ಚಾಗುತ್ತಿದ್ದು, ರೈತರಲ್ಲಿ ಆತಂಕ ಮೂಡಿಸಿದೆ.

‘ಕ್ಯಾಪ್ರಿಪಾಕ್ಸ್’ ಎನ್ನುವ ವೈರಾಣುವಿನಿಂದ ಹರಡುವ ಈ ರೋಗ, ಆಫ್ರಿಕಾ ದೇಶದಲ್ಲಿ 1929ರಲ್ಲಿ ಮೊದಲು ಕಾಣಿಸಿಕೊಂಡಿತು. ಭಾರತದಲ್ಲಿ 2019ರಲ್ಲಿ ಒಡಿಶಾದಲ್ಲಿ ಮೊದಲ ಬಾರಿ ಪತ್ತೆಯಾಗಿತ್ತು. ಅಲ್ಲೊಂದು, ಇಲ್ಲೊಂದು ಎನ್ನುವಂತೆ ಅಪರೂಪಕ್ಕೊಮ್ಮೆ ಕಾಣಿಸಿಕೊಳ್ಳುತ್ತಿದ್ದುದ್ದು ಈಗ ವ್ಯಾಪಕವಾಗಿ ಹರಡುತ್ತಿದೆ. ಕರ್ನಾಟಕ ಸೇರಿದಂತೆ ರಾಜಸ್ಥಾನ, ಗುಜರಾತ್, ಪಂಜಾಬ್, ಹರಿಯಾಣ, ಹಿಮಾಚಲ ಪ್ರದೇಶ, ಉತ್ತರಾಖಂಡ, ಉತ್ತರಪ್ರದೇಶ, ಮಧ್ಯಪ್ರದೇಶ ಹಾಗೂ ಜಮ್ಮುವಿನಲ್ಲಿ ಕಂಡುಬಂದಿದೆ.

ರಾಜ್ಯದ ಒಟ್ಟು ಅಂಕಿ-ಅಂಶ

1,620
ಮೃತ ಜಾನುವಾರುಗಳು

45,451
ರೋಗಪೀಡಿತ ರಾಸುಗಳು

34,865
ಗುಣಮುಖವಾದ ರಾಸುಗಳು

2,915
ರೋಗ ಹರಡಿರುವ ಗ್ರಾಮಗಳು

ದೇಶದಲ್ಲಿ ಇದುವರೆಗೆ 35 ಸಾವಿರ ಜಾನುವಾರು ಮೃತಪಟ್ಟಿವೆ. ಸುಮಾರು 9 ಲಕ್ಷ ಜಾನುವಾರು ರೋಗಪೀಡಿತವಾಗಿವೆ.

3Cನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 3C

2022ರ ಜಾಗತಿಕ ಹಸಿವಿನ ಸೂಚ್ಯಂಕ ಬಿಡುಗಡೆ

ಪಾಕ್‌ಗಿಂತ ಭಾರತದಲ್ಲಿ ಹಸಿವು ಅಧಿಕ

ನವದೆಹಲಿ (ಪಿಟಿಐ): ಏಷ್ಯಾ ಖಂಡದಲ್ಲಿ ಭಾರತವು ಅತ್ಯಂತ ಹಸಿವಿನ ದೇಶ ಎಂಬ ಅಂಶ ಬಹಿರಂಗವಾಗಿದ್ದು, ಅಫ್ಗಾನಿಸ್ತಾನ ಹೊರತುಪಡಿಸಿದರೆ ಭಾರತದಲ್ಲೇ ಹಸಿವಿನ ಪ್ರಮಾಣ ಹೆಚ್ಚಿದೆ ಎಂಬುದು 2022ರ ಜಾಗತಿಕ ಹಸಿವಿನ ಸೂಚ್ಯಂಕದಿಂದ ಬಹಿರಂಗವಾಗಿದೆ.

ಸೂಚ್ಯಂಕದಂತೆ, ಭಾರತದ ನೆರೆಯ ದೇಶಗಳಾದ ಶ್ರೀಲಂಕಾ (64), ನೇಪಾಳ (81), ಬಾಂಗ್ಲಾದೇಶ (84) ಮತ್ತು ಪಾಕಿಸ್ತಾನ (99) ದೇಶಗಳು ಭಾರತಕ್ಕಿಂತ ಉತ್ತಮ ಸ್ಥಾನದಲ್ಲಿವೆ. ಜಗತ್ತಿನ 121 ದೇಶಗಳ ಪೈಕಿ ಭಾರತ 107ನೇ ಸ್ಥಾನ ಪಡೆದಿದೆ. ಅಫ್ಗಾನಿಸ್ತಾನ 109ನೇ ಸ್ಥಾನ ಪಡೆದಿದೆ. ಭಾರತವು ಕಳೆದ ವರ್ಷ 101 ಹಾಗೂ 2020ರಲ್ಲಿ 94ನೇ ಸ್ಥಾನದಲ್ಲಿತ್ತು.

ಜಾಗತಿಕ ಹಸಿವಿನ ಸೂಚ್ಯಂಕವು (ಜಿಎಚ್‌ಐ) ಜಾಗತಿಕ, ಪ್ರಾದೇಶಿಕ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಹಸಿವನ್ನು ಸಮಗ್ರವಾಗಿ ಅಳೆಯುವ ಸಾಧನವಾಗಿದೆ.

ಭಾರತದಲ್ಲಿ ಮಕ್ಕಳ ಅಪೌಷ್ಟಿಕತೆ ಪ್ರಮಾಣವು ಶೇ 19.3ರಷ್ಟಿದ್ದು, ವಿಶ್ವದಲ್ಲಿಯೇ ಅತ್ಯಧಿಕವಾಗಿದೆ. ಒಟ್ಟಾರೆ 29.1 ಅಂಕಗಳನ್ನು ಪಡೆದಿರುವ ಭಾರತದಲ್ಲಿ ಹಸಿವಿನ ಪ್ರಮಾಣ ‘ಅಪಾಯಕಾರಿ’ ಮಟ್ಟದಲ್ಲಿದೆ ಎಂದು ವರದಿ ಹೇಳಿದೆ.

ಅಪೌಷ್ಟಿಕತೆ, ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ತೂಕ ಕಡಿಮೆ ಇರುವುದು, ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಎತ್ತರ ಕಡಿಮೆ ಇರುವುದು ಹಾಗೂ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಮರಣ ಪ್ರಮಾಣವನ್ನು ಪರಿಗಣಿಸಿ ಜಿಎಚ್‌ಐ ಅಂಕಗಳನ್ನು ನೀಡಲಾಗುತ್ತದೆ.

‘ಅಪೌಷ್ಟಿಕತೆ, ಹಸಿವಿನಂತಹ ನೈಜ ಸಮಸ್ಯೆಗಳನ್ನು ಗೌರವಾನ್ವಿತ ಪ್ರಧಾನಿಯವರು ಯಾವಾಗ ಪರಿಹರಿ-ಸುತ್ತಾರೆ. ಹಿಂದಿ ಹೇರುವುದು ಮತ್ತು ದ್ವೇಷವನ್ನು ಹರಡುವುದರಿಂದ ಹಸಿವು ನಿವಾರಣೆ ಆಗುವುದಿಲ್ಲ’ ಎಂದು ಕಾಂಗ್ರೆಸ್ ನಾಯಕ ಪಿ. ಚಿದಂಬರಂ ಟ್ವೀಟ್ ಮಾಡಿದ್ದಾರೆ.

ಕೇಂದ್ರ ಸರ್ಕಾರದ ಪ್ರತಿಕ್ರಿಯೆ
ಇನ್ನೊಂದು ಸುದ್ದಿ 7

ಎನ್‌ಜಿಟಿ: ರಾಜ್ಯ ಸರ್ಕಾರಕ್ಕೆ ₹2,900 ಕೋಟಿ ದಂಡ

ಪ್ರಜಾವಾಣಿ ವಾರ್ತೆ

ನವದೆಹಲಿ: ಪರಿಸರಕ್ಕೆ ಹಾನಿ ಉಂಟು ಮಾಡುವ ಘನ ಹಾಗೂ ದ್ರವ್ಯ ತ್ಯಾಜ್ಯವನ್ನು ಸಮರ್ಪಕವಾಗಿ ನಿರ್ವಹಿಸದ ಕಾರಣಕ್ಕೆ ಕರ್ನಾಟಕ ಸರ್ಕಾರಕ್ಕೆ ಪರಿಸರ ಪರಿಹಾರದಲ್ಲಿ ₹2,900 ಕೋಟಿ ದಂಡ ವಿಧಿಸಿ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ (ಎನ್‌ಜಿಟಿ) ಪ್ರಧಾನ ಪೀಠವು ಆದೇಶಿಸಿದೆ.

ವೈಜ್ಞಾನಿಕವಾಗಿ ಕಸ ವಿಲೇವಾರಿ ಆಗದ ಬಗ್ಗೆ ಸುಪ್ರೀಂ ಕೋರ್ಟ್ 2014ರಲ್ಲಿ ತೀವ್ರ ಅಸಮಾಧಾನ ವ್ಯಕ್ತಪಡಿಸಿತ್ತು.

3Bನೇ ಪುಟ ನೋಡಿ

ವಸತಿ ಸಚಿವ ವಿ. ಸೋಮಣ್ಣ ಭರವಸೆ

‘ಪತ್ರಕರ್ತರಿಗೆ ಸೂರು ಕಲ್ಪಿಸಲು ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪತ್ರಕರ್ತರ ಪಾತ್ರ ಮಹತ್ವದ್ದಾಗಿದೆ. ಸೂರಿಲ್ಲದ ಪತ್ರಕರ್ತರಿಗೆ ಸೂರು ಕಲ್ಪಿಸಲು ಸರ್ಕಾರ ಕ್ರಮವಹಿಸಲಿದೆ’ ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು.

ಕರ್ನಾಟಕಕಾರ್ಯನಿರತಪತ್ರಕರ್ತರ ಸಂಘ (ಕೆಯುಡಬ್ಲ್ಯುಜೆ) ನಗರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿ.ಯು.ಸಿ ಪರೀಕ್ಷೆಯಲ್ಲಿ ಶೇ 90ಕ್ಕಿಂತ ಅಧಿಕ ಅಂಕ ಪಡೆದ ಪತ್ರಕರ್ತರ ಮಕ್ಕಳನ್ನು ಪುರಸ್ಕರಿಸಿ, ಮಾತನಾಡಿದರು.

‘ಪತ್ರಕರ್ತರು ದಿನವೂ ಸವಾಲಿನ ನಡುವೆಯೇ ವೃತ್ತಿಜೀವನ ನಡೆಸುತ್ತಿದ್ದಾರೆ. ಪತ್ರಕರ್ತರು ಸಂವಿಧಾನದ ಅಭಿವ್ಯಕ್ತಿ ಸ್ವಾತಂತ್ರ್ಯದ ವಕ್ತಾರರಾಗಿದ್ದಾರೆ. ಇವರು ಬಹಳಷ್ಟು ಸಮಸ್ಯೆ ಎದುರಿಸುತ್ತಿದ್ದು, ಕೆಲವರು ನಿವೇಶನರಹಿತರಾಗಿಯೂ ಇದ್ದಾರೆ. ಪತ್ರಕರ್ತರಿಗೆ ನಿವೇಶನ ಕಲ್ಪಿಸಲು ಶೀಘ್ರದಲ್ಲೇ ಕ್ರಮ ಕೈಗೊಳ್ಳಲಾಗುವುದು. ಬೆಂಗಳೂರಿನ ನಿವೇಶನರಹಿತ ಪತ್ರಕರ್ತರಿಗೆ ನಿವೇಶನ ಒದಗಿಸಲು ಮುಖ್ಯಮಂತ್ರಿಯ ಜೊತೆ ಸಮಾಲೋಚಿಸಿ, ಶೀಘ್ರವೇ ಕ್ರಮ ತೆಗೆದುಕೊಳ್ಳುತ್ತೇನೆ’ ಎಂದರು.

ಸಕ್ಕರೆ ಮತ್ತು ಜವಳಿ ಸಚಿವ ಶಂಕರ ಪಾಟೀಲ್ ಮುನೇನಕೊಪ್ಪ ಪ್ರತಿಭಾ ಪುರಸ್ಕಾರಕ್ಕೆ ಚಾಲನೆ ನೀಡಿ, ಶುಭ ಹಾರೈಸಿದರು.



ಎಸ್ಸೆಸ್ಸೆಲ್ಸಿ ಮತ್ತು ಪಿ.ಯು.ಸಿ ಪರೀಕ್ಷೆಯಲ್ಲಿ ಅಧಿಕ ಅಂಕ ಪಡೆದ ಪತ್ರಕರ್ತರ ಮಕ್ಕಳನ್ನು ವಿ. ಸೋಮಣ್ಣ ಪುರಸ್ಕರಿಸಿದರು. ಐಎಫ್‌ಡಬ್ಲ್ಯುಜೆ ಅಧ್ಯಕ್ಷ ಬಿ.ವಿ. ಮಲ್ಲಿಕಾರ್ಜುನ, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷೆ ತಾರಾ ಅನೂರಾಧ, ಕೆಯುಡಬ್ಲ್ಯುಜೆ ಅಧ್ಯಕ್ಷ ಶಿವಾನಂದ ತಗಡೂರು, ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ, ಕರ್ನಾಟಕದ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ ಮತ್ತಿತರರು ಇದ್ದಾರೆ.

ಜಾತ್ರೆ ನೋಡಲು ಹೋಗಿದ್ದ ಯುವಕನ ಕೊಲೆ

ಬೆಂಗಳೂರು: ಪುಲಿಕೇಶಿನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿರುವ ಶಕ್ತಿವೇಲು ಎಂಬುವವರ ಕೊಲೆ ಪ್ರಕರಣ ಸಂಬಂಧ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ನಿವಾಸಿಗಳಾದ ವಿಘ್ನೇಶ್ ಹಾಗೂ ಪುರುಷೋತ್ತಮ್ ಬಂಧಿತರು. ಇನ್ನೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ’ ಎಂದು ಪೊಲೀಸರು ಹೇಳಿದರು.

‘ಶಕ್ತಿವೇಲು ಕಮ್ಮನಹಳ್ಳಿ ಜಾತ್ರೆ ನೋಡಲೆಂದು ಇತ್ತೀಚೆಗೆ ಹೋಗಿದ್ದರು. ಆಗ ಕ್ಷುಲ್ಲಕ ಕಾರಣಕ್ಕಾಗಿ ಅವರ ಜೊತೆ ಜಗಳ ತೆಗೆದಿದ್ದ ಆರೋಪಿಗಳು, ಹಲ್ಲೆ ಮಾಡಿ ಪರಾರಿಯಾಗಿದ್ದರು.’ ‘ತೀವ್ರವಾಗಿ ಗಾಯಗೊಂಡಿದ್ದ ಶಕ್ತಿವೇಲು ಅವರನ್ನು ಬೌರಿಂಗ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಅವರು ಮೃತಪಟ್ಟಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

ಸುಲ್ತಾನ್ ಡೈಮಂಡ್ಸ್‌ನಿಂದ ‘ವಿಶ್ವವಜ್ರ’ ಪ್ರದರ್ಶನ

ಬೆಂಗಳೂರು: ಸುಲ್ತಾನ್ ಡೈಮಂಡ್ಸ್ ಆ್ಯಂಡ್ ಗೋಲ್ಡ್ ಕಂಪನಿಯ ಜಯನಗರದ ಮಳಿಗೆಯಲ್ಲಿ ‘ವಿಶ್ವವಜ್ರ’ ಪ್ರದರ್ಶನ ಆರಂಭ ಆಗಿದೆ.

ನಟಿ ಅನನ್ಯಾ ಶೆಟ್ಟಿ ಅವರು ಪ್ರದರ್ಶನಕ್ಕೆ ಚಾಲನೆ ನೀಡಿದ್ದಾರೆ. ವಿವಿಧ ರೀತಿಯ ವಿನ್ಯಾಸ ಮತ್ತು ಬೆಲೆಯ ಆಭರಣಗಳು ಇಲ್ಲಿ ಲಭ್ಯವಿವೆ.

ಜಗತ್ತಿನ ವಿವಿಧ ಭಾಗಗಳ, ಐಜಿಐ ಪ್ರಮಾಣೀಕೃತ 10 ಸಾವಿರಕ್ಕೂ ಅಧಿಕ ಕ್ಯಾರಟ್ ವಜ್ರದ ಆಭರಣಗಳ ಸಂಗ್ರಹ ಇಲ್ಲಿದೆ. ವಿಶೇಷವಾಗಿ ಇಟಲಿ, ಫ್ರಾನ್ಸ್, ಟರ್ಕಿಯೆ, ಬೆಲ್ಜಿಯಂ, ಅಮೆರಿಕ, ಸಿಂಗಪುರ ಮತ್ತು ಮಧ್ಯಪ್ರಾಚ್ಯ ದೇಶಗಳ ವಜ್ರದ ಆಭರಣಗಳು ಪ್ರದರ್ಶನದ ಪ್ರಮುಖ ಆಕರ್ಷಣೆಯಾಗಿವೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರತಿ ಕ್ಯಾರಟ್ ಡೈಮಂಡ್ ಮೇಲೆ ₹8,000 ರಿಯಾಯಿತಿಯನ್ನು ಅ. 23 ರವರೆಗೆ ಪಡೆಯಬಹುದು ಎಂದು ಕಂಪನಿಯ ಬೆಂಗಳೂರಿನ ಮುಖ್ಯಸ್ಥ ಅಬ್ದುಲ್ ರಿಯಾಜ್ ತಿಳಿಸಿದರು.

ಗಣಿ ಸ್ಫೋಟ: ಮೃತರ ಸಂಖ್ಯೆ 40ಕ್ಕೆ ಏರಿಕೆ

ಅಮಸ್ರಾ, ಟರ್ಕಿಯೆ (ಎಪಿ): ಟರ್ಕಿಯೆ ಉತ್ತರ ಭಾಗದ ಅಮಸ್ರಾ ನಗರದಲ್ಲಿರುವ ಕಲ್ಲಿದ್ದಲು ಗಣಿಯಲ್ಲಿ ನಡೆದಿದ್ದ ಸ್ಫೋಟದಲ್ಲಿ ಮೃತಪಟ್ಟವರ ಸಂಖ್ಯೆ 40ಕ್ಕೆ ಏರಿದೆ. ಶುಕ್ರವಾರ ಸ್ಫೋಟ ಸಂಭವಿಸಿದಾಗ ಗಣಿಯಲ್ಲಿ ಸುಮಾರು 110 ಮಂದಿ ಕೆಲಸ ಮಾಡುತ್ತಿದ್ದರು.

11 ಮಂದಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಸಚಿವ ಸುಲೇಮನ್ ಸೊಯ್ಲು ಅವರು ತಿಳಿಸಿದ್ದಾರೆ. ಅವಘಡ ಸಂಭವಿಸಿದ ಹಿಂದೆಯೇ ಸುಮಾರು 58 ಜನರು ಪಾರಾಗುವಲ್ಲಿ ಯಶಸ್ವಿಯಾಗಿದ್ದರು.

‘ಕನ್ನಡವೆಂದರೆ ಬರಿ ನುಡಿಯಲ್ಲ’ ಸಂವಾದದಲ್ಲಿ ವಿವೇಕ ರೈ ಪ್ರತಿಪಾದನೆ

‘ಭಾಷಾ ಬೆಳವಣಿಗೆಗೆ ತಂತ್ರಜ್ಞಾನದ ನೆರವು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಕನ್ನಡ ಭಾಷೆ, ಸಾಹಿತ್ಯವನ್ನು ಸಮಕಾಲೀನ ಜಗತ್ತು ಹಾಗೂ ಯುವ ಜನರಿಗೆ ತಲುಪಿಸುವ ಕೆಲಸ ತುರ್ತಾಗಿ ಆಗಬೇಕಿದೆ ಎಂದು ಜಾನಪದ ವಿದ್ವಾಂಸ ಬಿ.ಎ.ವಿವೇಕ ರೈ ಪ್ರತಿಪಾದಿಸಿದರು.

ಕನ್ನಡ ಜನಶಕ್ತಿ ಕೇಂದ್ರ ಶನಿವಾರ ಹಮ್ಮಿಕೊಂಡಿದ್ದ ‘ಕನ್ನಡವೆಂದರೆ ಬರಿ ನುಡಿಯಲ್ಲ–ಬಹುಮುಖಿ ಕನ್ನಡದ ನೆಲೆಗಳ ಶೋಧ’ ವಿಚಾರಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

‘ಸಂಸ್ಕೃತವೂ ಸೇರಿದಂತೆ ಇತರೆ ಭಾಷೆಗಳನ್ನು ಒಳಗೊಂಡು ಬಹುತ್ವದ ಆಶಯದಲ್ಲಿ ಸಾಗಿಬಂದ ಕನ್ನಡ ಸಾಹಿತ್ಯ ಇಂದು ಬದಲಾದ ಜಗತ್ತಿನಲ್ಲಿ ನಿಂತ ನೀರಾಗದಂತೆ ಎಚ್ಚರಿಕೆ ವಹಿಸಬೇಕಿದೆ. ತಂತ್ರಜ್ಞಾನ ಬಳಕೆಯ ಅಲಕ್ಷ್ಯದ ಪರಿಣಾಮ ಗೂಗಲ್ ಸೇರಿದಂತೆ ಇತರೆ ಜಾಲತಾಣಗಳ ಬಳಕೆಯಲ್ಲಿ ಹಿಂದೆ ಸಾಗಿದ್ದೇವೆ. ಈಚೆಗೆ ವಿದೇಶಿಯರಿಗೆ ಪರಿಚಯಿಸಿದ ಜನ್ನನ ಕೃತಿ ಅಹಿಂಸೆಯ ಪ್ರತಿಪಾದನೆಯ ಕಾರಣಕ್ಕೆ ಸಾಕಷ್ಟು ಜನರನ್ನು ತಲುಪಿದೆ. ಹಾಗಾಗಿ, ವಿದೇಶಿಯರಿಗೂ ಕನ್ನಡದ ಬಗ್ಗೆ ಆಸಕ್ತಿ ಮೂಡಿಸುವ, ಕನ್ನಡ ಕೃತಿಗಳು ಇತರೆ ಭಾಷೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಅನುವಾದಗೊಳ್ಳುವ ಕಾರ್ಯ ಆಗಬೇಕಿದೆ’ ಎಂದರು.

‘ವೈಚಾರಿಕತೆ ಎಂದರೆ ಆಸ್ತಿಕತೆ, ಧರ್ಮವನ್ನು ವಿರೋಧಿಸುವ ಮಾರ್ಗವಲ್ಲ; ಅವರ ಮನೋಭಾವಗಳನ್ನು ಗೌರವಿಸುವುದಾಗಿದೆ. ಕನ್ನಡ ಒಂದು ಸಂಸ್ಕೃತಿಯಾದರೆ, ಧರ್ಮ ವೈಯಕ್ತಿಕವಾಗಿರುತ್ತದೆ. ಎಲ್ಲ ಕಾಲದಲ್ಲೂ ಧರ್ಮ ಒಂದೇ ರೂಪದಲ್ಲಿ ಇರಲು ಸಾಧ್ಯವಿಲ್ಲ ಎಂಬ ಸತ್ಯ ಅರ್ಥ ಮಾಡಿಕೊಂಡು ಸಾಗಬೇಕು. ಅದೇ ಧರ್ಮ ಸಹಿಷ್ಣುತೆ. ನಿಜವಾದ ಬಹುತ್ವ. ಇಂತಹ ಅಂಶಗಳನ್ನು ಒಳಗೊಂಡ ಕಾರಣಕ್ಕಾಗಿಯೇ ಕನ್ನಡದ ಕೃತಿಗಳು, ದಾರ್ಶನಿಕರು ಬಹುತ್ವದ ಪ್ರತಿಪಾದಕರೇ ಆಗಿದ್ದರು’ ಎಂದು ವಿಶ್ಲೇಷಿಸಿದರು.

ಎಂ.ಆರ್. ಸತ್ಯನಾರಾಯಣ ಹಳೆಗನ್ನಡ ಕಾವ್ಯಗಳನ್ನು ಪ್ರಸ್ತುತಪಡಿಸಿದರು. ‘ಕನ್ನಡ ಭಾಷೆ ಬಹುತ್ವದ ಚಹರೆಗಳು’ ಕುರಿತು ರಹಮತ್ ತರೀಕೆರೆ ವಿಶೇಷ ಉಪನ್ಯಾಸ ನೀಡಿದರು. ‘ಕನ್ನಡ ಪ್ರಜ್ಞೆ ಸಾಹಿತ್ಯಕ ಮಾದರಿಗಳು’ ಸಂವಾದದಲ್ಲಿ ಬಿ.ಪಿ. ವೀರೇಂದ್ರಕುಮಾರ್, ವೆಂಕಟಗಿರಿ ದಳವಾಯಿ, ಪಿ.ಚಂದ್ರಿಕ, ಕೆ.ವೈ. ನಾರಾಯಣಸ್ವಾಮಿ ಭಾಗವಹಿಸಿದ್ದರು. ‘ಆಧ್ಯಾತ್ಮದ ಭಾಷೆಯಾಗಿ ಕನ್ನಡ’ ಗೋಷ್ಠಿಯಲ್ಲಿ ಲಕ್ಷ್ಮೀಶ ತೋಳ್ಪಾಡಿ ಮಾತನಾಡಿದರು.

ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ.ರಾಮೇಗೌಡ ಮಾತನಾಡಿದರು. ಪ್ರಾಸ್ತಾವಿಕವಾಗಿ ನ.ರವಿಕುಮಾರ್ ಉಪಸ್ಥಿತರಿದ್ದರು.



ನಗರದ ನ್ಯಾಷನಲ್ ಕಾಲೇಜಿನಲ್ಲಿ ಶನಿವಾರ ಜನಶಕ್ತಿ ಕೇಂದ್ರ ಆಯೋಜಿಸಿದ್ದ 'ಕನ್ನಡವೆಂದರೆ ಬರಿ ನುಡಿಯಲ್ಲ' ವಿಚಾರ ಸಂಕಿರಣದಲ್ಲಿ ಪ್ರಕಾಶಕ ನ.ರವಿಕುಮಾರ್, ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ.ರಾಮೇಗೌಡ, ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ, ಜಾನಪದ ವಿದ್ವಾಂಸ ಬಿ.ಎ. ವಿವೇಕ ರೈ ಇದ್ದಾರೆ —ಪ್ರಜಾವಾಣಿ ಚಿತ್ರ

ಭಾಷಾ ಶ್ರೇಷ್ಠತೆ ಗೀಳಾಗ ಬಾರದು. ಕಿತ್ತಾಟದ ಮೂಲಕ ಶ್ರೇಷ್ಠತೆ ಸಾಬೀತುಪಡಿಸುವ ಅಗತ್ಯವಿಲ್ಲ. ಒಂದು ಭಾಷೆ ಮಾತನಾಡುವ ಜನರು ಆಡಳಿತಾತ್ಮಕವಾಗಿ ಒಗ್ಗೂಡುವುದೇ ಸಾಧನೆಯಲ್ಲ.
ಎಚ್.ಎಸ್. ಗೋಪಾಲರಾವ್
ಶಾಸನ ತಜ್ಞ

ಆರಂಭದ ಕಾಲಘಟ್ಟದಿಂದಲೂ ಕನ್ನಡದ ಅಸ್ಮಿತೆ ಮುರುಟುವ ಆತಂಕ ಎದುರಿಸಿದೆ. ಕನ್ನಡದ ಮೇಲೆ ಸಂಸ್ಕೃತ ಆಕ್ರಮಣ ಮಾಡಿದೆ. ಇಂಗ್ಲಿಷ್ ಎಂಬ ಬುಲ್ಡೋಜರ್ ಕನ್ನಡ ಭಾಷೆ, ಸಾಹಿತ್ಯವನ್ನೇ ನಾಶಮಾಡುತ್ತಿದೆ
ಲತಾ ಮೈಸೂರು
ಲೇಖಕಿ

ಆಕ್ರಮಣಶೀಲ ಹೊಸ ರಾಷ್ಟ್ರ ಪರಿಕಲ್ಪನೆ: ಚೆನ್ನಿ

‘ರಾಷ್ಟ್ರ ಎನ್ನುವ ಹೊಸ ಪರಿಕಲ್ಪನೆ ಆಕ್ರಮಣಶೀಲವಾಗಿದೆ. ಎಲ್ಲರನ್ನೂ, ಎಲ್ಲವನ್ನೂ ಒಳಗೊಳ್ಳುವ, ಜೋಡಿಸಿಕೊಳ್ಳುವ ಒಕ್ಕೂಟ ಪರಿಕಲ್ಪನೆ ಬದಲಾಗಿದೆ. ಸಮಭಾವ, ಸಮಾನತೆಯ ಒಕ್ಕೂಟದ ಪರಿಕಲ್ಪನೆ ನಾಶದ ಹಾದಿಯಲ್ಲಿದೆ’ ಎಂದು ವಿಮರ್ಶಕ ರಾಜೇಂದ್ರ ಚೆನ್ನಿ ಬೇಸರ ವ್ಯಕ್ತಪಡಿಸಿದರು.

‘ಅಸ್ಮಿತೆಯ ಭಾಷೆಯಾಗಿ ಕನ್ನಡ’ ಸಂವಾದ ಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ದಲಿತ, ಅಲ್ಪ ಸಂಖ್ಯಾತರೂ ಸೇರಿದಂತೆ ಎಲ್ಲರೂ ಒಳಗೊಂಡ ರಾಷ್ಟ್ರ ಮಾತೆ ಇದ್ದಂತೆ. ಒಬ್ಬ ವ್ಯಕ್ತಿ ತನ್ನೊಳಗಿನ ತಲ್ಲಣಗಳನ್ನು ಹೊರಜಗತ್ತಿಗೆ ತೆರೆದಿಡುವ ಒಳಗಣ್ಣು ಅಸ್ಮಿತೆ. ಅದು ಕಾಲಾನುಕ್ರಮ ಬದಲಾಗುವ, ಬದಲಾದಂತೆ ತನ್ನತನ ಬಿಟ್ಟುಕೊಡದೆ ಎಲ್ಲವನ್ನೂ ಪುನರ್ ಒಳಗೊಳ್ಳುವ ಕ್ರಿಯೆ. ಭಾಷೆ ಬರಿ ವಾಹಕವಲ್ಲ, ಅದು ಲೋಕದ ದರ್ಶನ, ಭಾವನೆಗಳಿಗೆ ನೀಡುವ ಅಕ್ಷರ ರೂಪ. ಹಲವು ಜಗತ್ತು ಏಕಕಾಲಕ್ಕೆ ಸಂಭಾಷಿಸುವ, ಬಹುತ್ವದ ಬಹುಮುಖಿ ಸ್ವರೂಪ’ ಎಂದರು.

‘ಭಿನ್ನ ಧ್ವನಿ ಹತ್ತಿಕ್ಕಲಾಗುತ್ತಿದೆ’

‘ಪ್ರಸ್ತುತ ಸನ್ನಿವೇಶದಲ್ಲಿ ರಾಜಕೀಯ ಕ್ಷೇತ್ರ ಎಲ್ಲ ಶಕ್ತಿಗಳ ಹರಣ ಮಾಡುತ್ತಿದೆ. ಭಿನ್ನ ಧ್ವನಿ ಹತ್ತಿಕ್ಕಲಾಗುತ್ತಿದೆ’ ಎಂದು ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ‘ಸ್ವಾಯತ್ತ ಧ್ವನಿಗಳೂ ಅಡಗಿದ್ದು, ಭಾಷೆ, ಧರ್ಮ ಸೇರಿದಂತೆ ಬಹುತ್ವದ ಪರಿಕಲ್ಪನೆಯೇ ಸಂಕಷ್ಟದಲ್ಲಿದೆ. ಮಾಧ್ಯಮಗಳೂ ಕೆಲ ಶಕ್ತಿಗಳ ಕೈಗೊಂಬೆಯಾಗಿವೆ. ಭಿನ್ನ ಧ್ವನಿಯ ಬಗ್ಗೆ ಗೌರವ ನೀಡುವ ಮನಃಸ್ಥಿತಿಗೆ ಮತ್ತೆ ಬರಬೇಕಿದೆ’ ಎಂದರು.

‘ಕರ್ನಾಟಕದಲ್ಲಿ ಸಾಹಿತ್ಯ ಉತ್ಸವಗಳಿಗೆ ಕೊರತೆ ಇಲ್ಲ. ಆದರೆ, ಅರ್ಥವಿಲ್ಲದ ಕಿರುಚಾಟಗಳೇ ತುಂಬಿವೆ. ತಾತ್ವಿಕ ಚಿಂತನೆಯ ಹಿನ್ನೆಲೆ ಇಲ್ಲವಾಗಿದೆ. ಇದು ಮೌಢ್ಯಕ್ಕೆ ದಾರಿಯಾಗುತ್ತದೆ’ ಎಂದರು.

‘ಬದುಕಿನ ಚಿತ್ರಣ ಭಿನ್ನವಾಗಿ ಕಟ್ಟಿಕೊಟ್ಟ ಮಾಸ್ತಿ’

ಮಾಸ್ತಿ ಕಾದಂಬರಿ, ಕಥಾ ಪುರಸ್ಕಾರ ಪ್ರದಾನ ಸಮಾರಂಭದಲ್ಲಿ ಸಾಹಿತಿ ದೊಡ್ಡರಂಗೇಗೌಡ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ಹೆಸರೇ ಚಿರಂತನವಾಗಿದ್ದು, ಬದುಕಿನ ಚಿತ್ರಣವನ್ನು ಬರಹದ ಮೂಲಕ ಭಿನ್ನವಾಗಿ ಕಟ್ಟಿಕೊಟ್ಟಿದ್ದಾರೆ’ ಎಂದು ಕವಿ ದೊಡ್ಡರಂಗೇಗೌಡ ಹೇಳಿದರು.

ಮಾಸ್ತಿ ಅವರ 131ನೇ ಜನ್ಮ ದಿನದ ಅಂಗವಾಗಿ ನಗರದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಡಾ.ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್ ನೀಡುವ ಮಾಸ್ತಿ ಕಾದಂಬರಿ ಪುರಸ್ಕಾರವನ್ನು ಲೇಖಕ ಮಲ್ಲಿಕಾರ್ಜುನ ಹಿರೇಮಠ (ಹಾವಳಿ), ಡಾ.ಗಜಾನನ ಶರ್ಮ (ಚೆನ್ನಭೈರಾದೇವಿ) ಹಾಗೂ ಕಥಾ ಪುರಸ್ಕಾರವನ್ನು ದಾದಾಪೀರ್ ಜೈಮನ್ (ನೀಲಕುರಿಂಜಿ) ಅವರಿಗೆ ಪ್ರದಾನ ಮಾಡಿ ಮಾತನಾಡಿದರು.

‘ಮಾಸ್ತಿ ಅವರು ಬರವಣಿಗೆಯಲ್ಲಿ ಭಾರತೀಯ ಪರಂಪರೆಯ ಮೌಲಿಕತೆ ಎತ್ತಿ ಹಿಡಿದಿದ್ದಾರೆ. ಪರಂಪರೆಯ ಜೊತೆಗೆ ಕೃತಿಗಳ ಮೌಲಿಕತೆ ಎತ್ತರಕ್ಕೆ ಕೊಂಡೊಯ್ದರು’ ಎಂದು ಬಣ್ಣಿಸಿದರು.

‘ಭಾರತೀಯ ಸಾಂಸ್ಕೃತಿಕ ಹಿನ್ನೆಲೆಯ ಧ್ರುವಬಿಂದು ಮಾಸ್ತಿ. ಅವರನ್ನು ಟಾಲ್‌ಸ್ಟಾಯ್‌ಗೆ ಹೋಲಿಕೆ ಮಾಡಿದ್ದೆ’ ಎಂದು ಹೇಳಿದರು.

ವಿಮರ್ಶಕ ಎಸ್.ಆರ್.ವಿಜಯಶಂಕರ ಮಾತನಾಡಿ, ‘ಮಾಸ್ತಿ ಟ್ರಸ್ಟ್ ಪೂರ್ವಗ್ರಹವಿಲ್ಲದೇ ವಸ್ತುನಿಷ್ಠವಾಗಿ ಪುರಸ್ಕಾರಕ್ಕೆ ಆಯ್ಕೆ ಮಾಡುತ್ತಿದೆ. ಪುರಸ್ಕಾರಕ್ಕೆ ಬಂದ ಕಥೆಗಳನ್ನು ಓದಿದರೆ ಕಥಾ ಪ್ರಪಂಚದ ಕುರಿತು ಭರವಸೆ ಮೂಡುತ್ತಿದೆ’ ಎಂದರು.

‘ಮಾಸ್ತಿ ಅವರ ಬರಹಗಳು ಓದಿದಾಗ ಮತ್ತೊಂದು ವಿಚಾರವನ್ನೇ ಧ್ವನಿಸುತ್ತವೆ. ಪುರಸ್ಕಾರಕ್ಕೆ ಭಾಜನವಾದ ದಾದಾಪೀರ್ ಜೈಮನ್ ಅವರ ಕೃತಿಯಲ್ಲಿ 10 ಸಣ್ಣ ಕಥೆಗಳಿವೆ. ಬದುಕಿನ ಭಾಗವನ್ನು ಒಂದು ಚೌಕಟ್ಟಿನಲ್ಲಿ ಅವರು ಸೆರೆ ಹಿಡಿದಿದ್ದಾರೆ’ ಎಂದು ವಿಶ್ಲೇಷಿಸಿದರು.

ಮಾಸ್ತಿ ಟ್ರಸ್ಟ್ ಅಧ್ಯಕ್ಷ ಮಾವಿನಕೆರೆ ರಂಗನಾಥನ್ ಮಾತನಾಡಿ, ‘ಮಾಸ್ತಿ ಒಬ್ಬರೇ ಬರೆಯದೆ ಸಮಕಾಲೀನರಿಂದಲೂ ಬರೆಸಿದರು. ಸಾಹಿತ್ಯ ರಚನೆಯಲ್ಲಿ ಯಶಸ್ಸು ಸಂಪಾದಿಸಿದರು. ಕನ್ನಡ, ಇಂಗ್ಲಿಷ್‌ನಲ್ಲಿ 126 ಕೃತಿ ರಚಿಸಿದ್ದಾರೆ’ ಎಂದರು.

‘ಕಾದಂಬರಿ ಪುರಸ್ಕಾರಕ್ಕೆ 25, ಕಥಾ ಪುರಸ್ಕಾರಕ್ಕೆ 40 ಕೃತಿಗಳು ಬಂದಿದ್ದವು. ಎಲ್ಲ ಕೃತಿಗಳೂ ಗುಣಮಟ್ಟದಿಂದ ಕೂಡಿದ್ದು, ಬರವಣಿಗೆಯ ತುಡಿತ ಕಾಣಿಸಿತು’ ಎಂದು ಹೇಳಿದರು.

ಮಲ್ಲಿಕಾರ್ಜುನ ಹಿರೇಮಠ ಅವರು, ‘ಹಾವಳಿ ಕೃತಿಯನ್ನು ವಿಜೃಂಭಣೆ ಅಥವಾ ಹೊಗಳಿಕೆಗೆ ಬರೆದಿಲ್ಲ. ವಸ್ತುನಿಷ್ಠವಾಗಿ ಬರೆದಿರುವೆ. ಧಾರ್ಮಿಕ ಮೂಲಭೂತವಾದ ಹಳ್ಳಿ ಪ್ರವೇಶಿಸಿದರೆ ಕೇಡು ಹೇಗೆ ಬರುತ್ತದೆ ಎಂಬುದನ್ನು ಕಾದಂಬರಿ ಕಟ್ಟಿಕೊಡುತ್ತದೆ’ ಎಂದರು.

ಗಜಾನನ ಶರ್ಮ ಮಾತನಾಡಿ, ‘ಮಾಸ್ತಿ ಪ್ರಶಸ್ತಿ ಬಹಳ ದೊಡ್ಡದು’ ಎಂದರು. ಪತ್ರಕರ್ತ ರಘುನಾಥ ಚ.ಹ. ಕಾದಂಬರಿ ಕುರಿತು ಮಾತನಾಡಿದರು.



ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್ ನಗರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಲ್ಲಿಕಾರ್ಜುನ ಹಿರೇಮಠ (ಲೇಖಕ), ರಮಾಕಾಂತ್ ಜೋಷಿ (ಪ್ರಕಾಶಕ), ಡಾ.ಗಜಾನನ ಶರ್ಮ (ಲೇಖಕ), ಪ್ರಕಾಶ್ ಕಂಬತ್ತಳ್ಳಿ (ಪ್ರಕಾಶಕ), ದಾದಾಪೀರ್ ಜೈಮನ್ (ಬರಹಗಾರ) ಹಾಗೂ ಮುದಿರಾಜು (ಪ್ರಕಾಶಕ) ಅವರಿಗೆ ಮಾಸ್ತಿ ಪುರಸ್ಕಾರ ಪ್ರದಾನ ಮಾಡಲಾಯಿತು. ಎಸ್.ಆರ್. ವಿಜಯಶಂಕರ, ಟ್ರಸ್ಟ್ ಅಧ್ಯಕ್ಷ ಮಾವಿನಕೆರೆ ರಂಗನಾಥನ್, ದೊಡ್ಡರಂಗೇಗೌಡ, ಬಿ.ಆರ್.ಲಕ್ಷ್ಮಣ ರಾವ್ ಹಾಗೂ ಟ್ರಸ್ಟ್ ಸದಸ್ಯರು ಇದ್ದಾರೆ – ಪ್ರಜಾವಾಣಿ ಚಿತ್ರ

ಅರಸೀಕೆರೆ: ಭೀಕರ ಅಪಘಾತ– 9 ಸಾವು

ಪ್ರಜಾವಾಣಿ ವಾರ್ತೆ

ಹಾಸನ: ಅರಸೀಕೆರೆ ತಾಲ್ಲೂಕಿನ ಬಾಣಾವರ ಬಳಿ ಶನಿವಾರ ಮಧ್ಯರಾತ್ರಿ ಸಂಭವಿಸಿದ ಭೀಕರ ಅಪಘಾತದಲ್ಲಿ ನಾಲ್ವರು ಮಕ್ಕಳು ಸೇರಿ 9 ಜನರು ಮೃತಪಟ್ಟಿದ್ದಾರೆ.

ಧರ್ಮಸ್ಥಳದಿಂದ ವಾಪಸ್ ತೆರಳುವ ಸಂದರ್ಭದಲ್ಲಿ ಬಾಣಾವರದ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಸ್ ಮತ್ತು ಕ್ಯಾಂಟರ್ ಮಧ್ಯೆ ಟೆಂಪೊ ಟ್ರಾವೆಲ್ಲರ್ ಸಿಲುಕಿದ್ದು, ಇದರಲ್ಲಿದ್ದ ಐವರು ವಯಸ್ಕರು ಹಾಗೂ ನಾಲ್ವರು ಮಕ್ಕಳು ಮೃತಪಟ್ಟಿದ್ದಾರೆ. ಟಿಟಿಯಲ್ಲಿ ಒಟ್ಟು 10 ಜನರು ಇದ್ದು, ಅವರಲ್ಲಿ ಆರು ಮಂದಿ ಸ್ಥಳದಲ್ಲಿಯೇ ಮೃತಪಟ್ಟಿದ್ದು, ಮೂವರು ಆಸ್ಪತ್ರೆಗೆ ಸಾಗಿಸುವಾಗ ಮೃತಪಟ್ಟಿದ್ದಾರೆ.

ಸ್ಥಳಕ್ಕೆ ಪೊಲೀಸರು ಭೇಟಿ ನೀಡಿದ್ದು, ವಾಹನದಲ್ಲಿ ಇದ್ದವರು ಎಲ್ಲಿಯವರು ಎಂಬ ಮಾಹಿತಿ ಕಲೆ ಹಾಕುತ್ತಿದ್ದಾರೆ.

ಸದ್ಗುರು ವಿರುದ್ಧ ದೂರು

ಚಿಕ್ಕಬಳ್ಳಾಪುರ: ತಾಲ್ಲೂಕಿನ ಜಾಲಾರಿ ನರಸಿಂಹಸ್ವಾಮಿ ಬೆಟ್ಟದ ಬಳಿಯ ಈಶಾ ಯೋಗ ಕೇಂದ್ರದಲ್ಲಿ ಈಚೆಗೆ ನಡೆದ ಕಾರ್ಯಕ್ರಮದಲ್ಲಿ ಸದ್ಗುರು ಜಗ್ಗಿ ವಾಸುದೇವ್ ಅವರು ಕೇರೆ ಹಾವನ್ನು ಹಿಡಿದು ಪ್ರದರ್ಶಿಸಿದ್ದಾರೆ. ಅವರ ವಿರುದ್ಧ ಕ್ರಮ ಜರುಗಿಸುವಂತೆ ಪ್ರಾಣಿಗಳ ಮೇಲಿನ ದೌರ್ಜನ್ಯ ತಡೆ (ಎಸ್‌ಪಿಸಿಎ) ಜಿಲ್ಲಾ ಸಮಿತಿ ಸದಸ್ಯ ಸಿ.ಎನ್.ಪೃಥ್ವಿರಾಜ್ ಅವರು ಚಿಕ್ಕಬಳ್ಳಾಪುರ ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ದೂರು ನೀಡಿದ್ದಾರೆ.



ಮಳೆಯಿಂದಾಗಿ ಜೆ.ಸಿ ರಸ್ತೆಯಲ್ಲಿ ನೀರು ನಿಂತಿತ್ತು –ಪ್ರಜಾವಾಣಿ ಚಿತ್ರ

ಗುಡುಗು– ಸಿಡಿಲು ಸಮೇತ ಮಳೆ

ಬೆಂಗಳೂರು: ನಗರದಲ್ಲಿ ಕೆಲ ದಿನಗಳಿಂದ ಬಿಡುವು ಕೊಡುತ್ತಲೇ ಮಳೆ ಸುರಿಯುತ್ತಿದೆ. ಶನಿವಾರವೂ ಗುಡುಗು–ಸಿಡಿಲು ಸಮೇತ ಮಳೆ ಅಬ್ಬರ ಜೋರಾಗಿತ್ತು. ರಸ್ತೆಗಳಲ್ಲಿ ನೀರು ಹೊಳೆಯಂತೆ ಹರಿಯಿತು.

ಬೆಳಿಗ್ಗೆಯಿಂದ ಆಗಾಗ ಸುರಿದು, ಬಿಡುವು ನೀಡಿದ್ದ ಮಳೆಯು ಸಂಜೆ 6 ಗಂಟೆಯ ನಂತರ ಪುನಃ ಆರಂಭವಾಗಿ, ರಾತ್ರಿಯವರೆಗೂ ಸುರಿಯಿತು. ಈ ಸಂದರ್ಭದಲ್ಲಿ ಗುಡುಗು–ಸಿಡಿಲಿನ ಅಬ್ಬರವೂ ಕಂಡುಬಂತು.

ಜಯನಗರದ ಮಾಧವನ್ ಉದ್ಯಾನದ ಬಳಿ ಮರವೊಂದು ಉರುಳಿ ಬಿದ್ದಿತ್ತು. ಸ್ಥಳೀಯರ ಸಹಾಯದಿಂದ ಬಿಬಿಎಂಪಿ ಸಿಬ್ಬಂದಿ ಮರ ತೆರವುಗೊಳಿಸಿದರು.

ಕಚೇರಿ ಹಾಗೂ ಇತರೆ ಕೆಲಸಕ್ಕೆಂದು ಹೊರಗಡೆ ಬಂದಿದ್ದ ಜನ, ಮನೆಗೆ ವಾಪಸು ಹೋಗಲು ತೊಂದರೆ ಅನುಭವಿಸಿದರು. ಕೆಲವರು, ಸುರಿಯುವ ಮಳೆಯಲ್ಲೇ ಸಂಚರಿಸಿದರು. ಬಹುತೇಕ ಜನ ಅಂಗಡಿ–ಮಳಿಗೆ ಬಳಿ ಆಶ್ರಯ ಪಡೆದಿದ್ದರು. ದ್ವಿಚಕ್ರ ವಾಹನ ಸವಾರರು ರಸ್ತೆ ಬದಿ ವಾಹನಗಳನ್ನು ನಿಲ್ಲಿಸಿ ಸುರಕ್ಷಿತ ಸ್ಥಳಗಳಲ್ಲಿ ನಿಂತುಕೊಂಡಿದ್ದರು.

ಕೆಂಗೇರಿ, ರಾಜರಾಜೇಶ್ವರಿನಗರ, ನಾಯಂಡಹಳ್ಳಿ, ಹೊಸಹಳ್ಳಿ, ದೀಪಾಂಜಲಿನಗರ, ಗಿರಿನಗರ, ಹನುಮಂತನಗರ, ಬಸವನಗುಡಿ, ಬನಶಂಕರಿ, ಜಯನಗರ, ಕುಮಾರಸ್ವಾಮಿ ಲೇಔಟ್, ಜೆ.ಪಿ. ನಗರ, ಮಡಿವಾಳ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮಳೆ ಜೋರಾಗಿತ್ತು.

ಚಿಕ್ಕಪೇಟೆ, ಗಾಂಧಿನಗರ, ಮೆಜೆಸ್ಟಿಕ್, ಶೇಷಾದ್ರಿಪುರ, ಮಲ್ಲೇಶ್ವರ, ರಾಜಾಜಿನಗರ, ವಿಜಯನಗರ, ಬಸವೇಶ್ವರನಗರ, ಯಶವಂತಪುರ, ಪೀಣ್ಯ, ಜಾಲಹಳ್ಳಿ, ವಿದ್ಯಾರಣ್ಯಪುರ, ಕುರುಬರಹಳ್ಳಿ, ನಂದಿನಿ ಲೇಔಟ್, ಮಹಾಲಕ್ಷ್ಮಿ ಲೇಔಟ್, ಸಂಜಯನಗರ, ಹೆಬ್ಬಾಳ, ಆರ್.ಟಿ.ನಗರ, ವಸಂತನಗರ, ಶಿವಾಜಿನಗರ, ಕಮರ್ಷಿಯಲ್ ಸ್ಟ್ರೀಟ್, ಎಂ.ಜಿ.ರಸ್ತೆ, ಅಶೋಕನಗರ, ಎಚ್‌ಎಎಲ್, ವಿವೇಕನಗರ, ಕೋರಮಂಗಲ, ಈಜಿಪುರ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಮಳೆ ಸುರಿಯಿತು.

ಹೊಳೆಯಂತಾದ ರಸ್ತೆಗಳು: ಮಳೆ ಧಾರಾಕಾರವಾಗಿ ಸುರಿದಿದ್ದರಿಂದ ಕಾಲುವೆಯಲ್ಲಿ ನೀರು ತುಂಬಿ ರಸ್ತೆಗೆ ಹರಿಯಿತು. ಹರಿಯುವ ನೀರಿನಲ್ಲೇ ವಾಹನಗಳು ಸಂಚರಿಸಿದವು.

ಚಿಕ್ಕಪೇಟೆ, ಕಾಟನ್‌ಪೇಟೆ, ಗಾಂಧಿನಗರ, ಮೆಜೆಸ್ಟಿಕ್, ಉಪ್ಪಾರಪೇಟೆ, ಓಕಳಿಪುರ, ಮಲ್ಲೇಶ್ವರ, ಯಶವಂತಪುರ ಹಾಗೂ ಸುತ್ತಮುತ್ತ ಪ್ರದೇಶಗಳ ಪ್ರಮುಖ ರಸ್ತೆಗಳಲ್ಲಿ 2 ಅಡಿಯಷ್ಟು ನೀರು ಹರಿಯಿತು. ಈ ಭಾಗದ ಹಲವೆಡೆ ಕಾಮಗಾರಿ ನಡೆಯುತ್ತಿದ್ದು, ಅದಕ್ಕಾಗಿ ಅಗೆದಿದ್ದ ಗುಂಡಿಗಳಲ್ಲೂ ನೀರು ನಿಂತುಕೊಂಡಿತ್ತು.

‘ಬಹುತೇಕ ಕಾಲುವೆಗಳಲ್ಲಿ ಹೂಳು ತುಂಬಿದೆ. ಹೀಗಾಗಿ, ಕಾಲುವೆಯಲ್ಲಿ ಹೋಗಬೇಕಾದ ನೀರು ರಸ್ತೆಗೆ ಬರುತ್ತಿದೆ. ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಉಂಟಾಗುತ್ತಿದೆ’ ಎಂದು ಚಿಕ್ಕಪೇಟೆಯ ಬಟ್ಟೆ ಅಂಗಡಿ ವ್ಯಾಪಾರಿ ಸುಪ್ರೀತ್ ದೂರಿದರು.

'ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್' ಭೂಮಿಕಾ ಕ್ಲಬ್‌ನ ದ್ವಿತೀಯ ಕಾರ್ಯಕ್ರಮ

ಗಾಯನದ ರಸದೌತಣ, ಮಾಹಿತಿ ಕಣಜ

ಪ್ರಜಾವಾಣಿ ವಾರ್ತೆ



ನಗರದಲ್ಲಿ ಶನಿವಾರ ನಡೆದ 'ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್'ನ ಭೂಮಿಕಾ ಕ್ಲಬ್‌ನ ಕಾರ್ಯಕ್ರಮದಲ್ಲಿ ಸ್ಟೈಲ್ ಸ್ಟ್ರಾಡಾ ಸಂಸ್ಥೆಯಿಂದ ಫ್ಯಾಷನ್ ಶೋ ನಡೆಯಿತು –ಪ್ರಜಾವಾಣಿ ಚಿತ್ರ

ಬೆಂಗಳೂರು: ಗಾಯನದ ರಸದೌತಣ, ಬ್ಯೂಟಿ ಟಿಪ್ಸ್, ಆಹಾರ ಕ್ರಮ, ಹಬ್ಬದಂದು ಮನೆಗಳ ಸಿಂಗಾರ, ಫ್ಯಾಷನ್ ಶೋ...

ಇದು 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್'ನ ಭೂಮಿಕಾ ಕ್ಲಬ್ (ಮಹಿಳೆಯರಿಗಾಗಿ ವಿಶಿಷ್ಟ ವೇದಿಕೆ) ನಗರದಲ್ಲಿ ಶನಿವಾರ ಆಯೋಜಿಸಿದ್ದ ದ್ವಿತೀಯ ಕಾರ್ಯಕ್ರಮವು ಪ್ರೇಕ್ಷಕರಿಗೆ ವಿಶಿಷ್ಟ ಅನುಭವ ಕಟ್ಟಿಕೊಟ್ಟ ರೀತಿ. ಇಡೀ ಕಾರ್ಯಕ್ರಮ ಮಾಹಿತಿ, ಮನರಂಜನೆ ಒದಗಿಸಿತು.

ಗಾಯಕಿ ಶಮಿತಾ ಮಲ್ನಾಡ್ ಅವರ ಹಾಡುಗಳಿಗೆ ಕೆಲವರು ಚಪ್ಪಾಳೆಯ ಪ್ರೋತ್ಸಾಹ ತುಂಬಿದರೆ, ಯುವತಿಯರು ಹೆಜ್ಜೆ ಹಾಕಿದರು.

'ಬಾಳ ಬಂಗಾರ ನೀನು...' ಎಂಬ ಹಾಡಿನ ಮೂಲಕ ಶಮಿತಾ ಕಾರ್ಯಕ್ರಮ ಆರಂಭಿಸಿದರು. 'ಬಿರುಗಾಳಿ' ಚಿತ್ರದ 'ಮಧುರಾ ಪಿಸುಮಾತಿಗೆ' ಹಾಡಿ ಭಾವನಾಲೋಕಕ್ಕೆ ಕೊಂಡೊಯ್ದರು.

'ನಾನು ಬಳ್ಳಿಯ ಮಿಂಚು...' ಎಂದು ಹಾಡಿ ವೇದಿಕೆ ಮುಂಭಾಗ ಪ್ರೇಕ್ಷಕರು ಕುಣಿಯುವಂತೆ ಮಾಡಿದರು. 'ನಿನಗೆ ಬೇರೆ ಹೆಸರು ಬೇಕೇ? ಸ್ತ್ರೀ ಎಂದರೆ ಅಷ್ಟೇ ಸಾಕೆ?' ಹಾಡನ್ನು ಮಹಿಳೆಯರಿಗೆ ಅರ್ಪಿಸಿದರು.

ಭೂಮಿಕಾ ಕ್ಲಬ್

ಶಮಿತಾ ಮಾತನಾಡಿ, 'ಮಹಿಳೆಯರು ಚೆನ್ನಾಗಿದ್ದರೆ ಮನೆ, ಮನಸ್ಸು, ದೇಶವು ಉತ್ತಮ ಆಗಿರಲಿದೆ' ಎಂದರು.

ನಟಿ ಅದ್ವಿತಿ ಶೆಟ್ಟಿ ಮಾತನಾಡಿ, 'ಎಂಬಿಎ ಪೂರ್ಣಗೊಳಿಸಿ ಎಚ್‌.ಆರ್ ಉದ್ಯೋಗ ಅರಸಿ ಬೆಂಗಳೂರಿಗೆ ಬಂದಿದ್ದೆ. ಆದರೆ, ಸಿನಿಮಾ ಕ್ಷೇತ್ರದಲ್ಲಿ ಅವಕಾಶ ಲಭಿಸಿತು' ಎಂದರು.

ಅಪೋಲೊ ಆಸ್ಪತ್ರೆಯ ವೈದ್ಯೆ ಪ್ರಿಯಾಂಕಾ ರೋಹಟ್ಗಿ ಮಾತನಾಡಿ, 'ಅತಿಯಾದ ತೂಕವು ಹಲವು ಕಾಯಿಲೆಗಳಿಗೆ ಕಾರಣವಾಗುತ್ತಿದೆ. 40 ವರ್ಷದ ಬಳಿಕ ಸಾಕಷ್ಟು ಕಾಯಿಲೆಗಳು ಬರುತ್ತಿವೆ' ಎಂದು ಸಲಹೆ ನೀಡಿದರು.

ನಿಕಿತಾಪ್ರಿಯಾ ಭರಣ ಅವರು ಹಬ್ಬದ ದಿವಸ ಚೆಂದವಾಗಿ ಡ್ರೆಸ್ ಮಾಡಿಕೊಳ್ಳುವ ಕುರಿತು ಮಾಹಿತಿ ನೀಡಿದರು. ಮನೆ ಸಿಂಗಾರದ ಕುರಿತು ಸ್ನೇಹಲ್ ಪಾಟೀಲ್ ವಿವರಿಸಿದರು. ನಿಕಿತಾ ನಿರೂಪಿಸಿದರು.

> 'ಪ್ರಜಾವಾಣಿ' ಅತ್ಯಂತ ವಿಶ್ವಾಸಾರ್ಹ ಪತ್ರಿಕೆ. ಈ ಪತ್ರಿಕೆಯಲ್ಲಿ ಬಂದಿದ್ದು ಸತ್ಯ ಎಂದು ಸಮಾಜವು ಈಗಲೂ ನಂಬುತ್ತಿದೆ
> **ಶಮಿತಾ ಮಲ್ನಾಡ್,** ಗಾಯಕಿ

> ಸಕಾರಾತ್ಮಕ ಯೋಚನೆ ಮುಖ್ಯ. ಯಶಸ್ಸು ಸುಲಭವಾಗಿ ಬರುವುದಿಲ್ಲ. ಕಠಿಣ ಪರಿಶ್ರಮ ಅಗತ್ಯ
> **ಅದ್ವಿತಿ ಶೆಟ್ಟಿ,** ನಟಿ

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಆಶಯ ಭಾಷಣ ಮಾಡಿದರು. ಡೆಪ್ಯುಟಿ ಎಡಿಟರ್ ಎಂ.ನಾಗರಾಜ, 'ಡೆಕ್ಕನ್ ಹೆರಾಲ್ಡ್'ನ ಡೆಪ್ಯುಟಿ ಎಡಿಟರ್ ಕೆ.ವಿ. ಸುಬ್ರಹ್ಮಣ್ಯ ಹಾಜರಿದ್ದರು.

ಉಡುಗೊರೆ ಪ್ರಾಯೋಜಕತ್ವವನ್ನು ಇಂಡಿಯನ್ ಸ್ವೀಟ್ ಹೌಸ್ ವಹಿಸಿತ್ತು. ಎಫ್ ಅಂಡ್ ಬಿ ಪಾರ್ಟ್‌ನರ್ ಆಗಿ ಟುಕ್ ಟುಕ್ ಹಾಗೂ ಸ್ಟೈಲ್ ಸ್ಟ್ರಾಡಾ ಸಂಸ್ಥೆಯವರು ಫ್ಯಾಷನ್ ಶೋ ಪ್ರಾಯೋಜಕತ್ವ ವಹಿಸಿದ್ದರು.



ಪ್ರಮಾಣ ಸ್ವೀಕಾರ

ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಶನಿವಾರ ಪ್ರಮಾಣ ವಚನ ಸ್ವೀಕರಿಸಿದ ಪಿ.ಬಿ. ವರಾಳೆ ಅವರಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಶುಭಾಶಯ ಕೋರಿದರು –ಪ್ರಜಾವಾಣಿ ಚಿತ್ರ

ಹಿಂದಿ ಹೇರಿಕೆ: ಪ್ರಧಾನಿ ಮಧ್ಯ ಪ್ರವೇಶಿಸಲಿ–ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿ ಹೇರಿಕೆಯಿಂದ ಭಾರತದ ಏಕತೆಗೆ ಧಕ್ಕೆಯಾಗುತ್ತಿದ್ದು, ಪ್ರಧಾನಿ ನರೇಂದ್ರ ಮೋದಿ ಮಧ್ಯ ಪ್ರವೇಶಿಸಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಒತ್ತಾಯಿಸಿದರು.

ಪಕ್ಷದ ಕಚೇರಿಯಲ್ಲಿ ಶನಿವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಒಂದು ರಾಷ್ಟ್ರ–ಒಂದು ಭಾಷೆ ಎನ್ನುವ ನೀತಿ ಇತರೆ ಭಾಷೆಗಳನ್ನು ಹತ್ತಿಕ್ಕುವ ಹುನ್ನಾರ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ದೇಶದ ಹಲವು ಪ್ರಾದೇಶಿಕ ಭಾಷೆಗಳನ್ನು ನಾಶ ಮಾಡಲು ಹೊರಟಿದ್ದಾರೆ. ಗೃಹ ಸಚಿವರ ನೇತೃತ್ವದ ಸಮಿತಿ ರಾಷ್ಟ್ರಪತಿಗಳಿಗೆ ಸಲ್ಲಿಸಿರುವ ವರದಿ ಒಪ್ಪಲು ಸಾಧ್ಯವಿಲ್ಲ. ಪ್ರಧಾನಿ ಅವರು ಗೃಹ ಸಚಿವರಿಗೆ ತಿಳಿವಳಿಕೆ ಹೇಳಬೇಕು ಎಂದು ಆಗ್ರಹಿಸಿದರು.

> ಹಿಂದಿ ಭಾಷೆಗೆ ಮಾತ್ರ ಉತ್ತೇಜನ ನೀಡುವ ಉದ್ದೇಶ ಕೇಂದ್ರ ಸರ್ಕಾರಕ್ಕೆ ಇಲ್ಲ. ಯಾವುದೇ ಕಾರಣಕ್ಕೂ ಕೇಂದ್ರವು ಹಿಂದಿ ಹೇರಿಕೆ ಮಾಡುವುದಿಲ್ಲ
> **ಧರ್ಮೇಂದ್ರ ಪ್ರಧಾನ್,** ಕೇಂದ್ರ ಶಿಕ್ಷಣ, ಕೌಶಲ ಮತ್ತು ಉದ್ಯಮಶೀಲತಾ ಸಚಿವ

ಈಗಲೂ ಗುಲಾಮಗಿರಿ ಬೇಕೇ?: 'ಪರಿಶಿಷ್ಟರ ಮೀಸಲಾತಿ ವಿಷಯವಾಗಿ ಎಲ್ಲರೂ ಲಾಭ ಪಡೆಯುವ ಮಾತು ಆಡುತ್ತಿದ್ದಾರೆ. ಸಚಿವ ಶ್ರೀರಾಮುಲು ಎದೆ ಬಡಿದುಕೊಂಡು ಮಾತನಾಡುತ್ತಿದ್ದಾರೆ. ಒಬ್ಬ ಶಾಸಕ ಬದುಕಿರುವವರೆಗೂ ಬಿಜೆಪಿಗೆ ಗುಲಾಮರಾಗಿ ಇರುವ ಪ್ರತಿಜ್ಞೆ ಮಾಡಿದ್ದಾರೆ. ಅವರ ಹೇಳಿಕೆ ಪರಿಶಿಷ್ಟರನ್ನು ಗುಲಾಮಗಿರಿಯಲ್ಲೇ ಇಡುವ ಮನಃಸ್ಥಿತಿಯ ಪ್ರತಿಬಿಂಬ' ಎಂದು ಬೇಸರ ವ್ಯಕ್ತಪಡಿಸಿದರು.

'ಶಾಸಕರಾಗಲು ಮೀಸಲಾತಿ ಕೊಟ್ಟಿದ್ದು ದೇವೇಗೌಡರು. ಈ ಕುರಿತು ಆತ್ಮಾವಲೋಕನ ಅಗತ್ಯ. ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನದಲ್ಲಿಯೇ ಮೀಸಲಾತಿ ಕೊಟ್ಟಿದ್ದರೂ ಅದು ಎಷ್ಟೋ ಜನರಿಗೆ ತಲುಪಿಲ್ಲ. ಅವರಿಗೆ ಮೀಸಲಾತಿ ಸಿಗಬೇಕು' ಎಂದರು.

'ಬಿಜೆಪಿ ವಿರೋಧಿಸಿತ್ತು': 'ಹೆಬ್ಬಾಳದ ವರೆಗೆ ಸುರಂಗ ನಿರ್ಮಿಸಲು ನನ್ನ ಸರ್ಕಾರ ನಿರ್ಧಾರ ಮಾಡಿತ್ತು. ಆಗ ಬಿಜೆಪಿ ವಿರೋಧ ಮಾಡಿತ್ತು. ಈಗ ಅವರೇ ನಿರ್ಮಾಣಕ್ಕೆ ಮುಂದಾಗಿರುವುದು ವಿಪರ್ಯಾಸ. ಬಿಜೆಪಿ ಜನರ ದಾರಿ ತಪ್ಪಿಸುವ ಕೆಲಸ ಮಾಡುತ್ತಿದೆ' ಎಂದು ವಾಗ್ದಾಳಿ ನಡೆಸಿದರು.

ಹಿಂದುತ್ವದ ಕಲ್ಲಿಗೆ ಆಕಾರ ಕೊಟ್ಟ ಸಾವರ್ಕರ್: ಜಿ.ಬಿ. ಹರೀಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಂದುತ್ವದ ಕಲ್ಲಿಗೆ ಶಿಲ್ಪಿಯಾಗಿ ಆಕಾರ ಕೊಟ್ಟ ಸಾವರ್ಕರ್, ಜನಸಾಮಾನ್ಯರಿಗೆ ಹಿಂದುತ್ವದ ಮಹತ್ವ ಸಾರಿದ್ದರು' ಎಂದು ಚಿಂತಕ ಜಿ.ಬಿ. ಹರೀಶ್ ತಿಳಿಸಿದರು.

ಮಂಥನ ಬೆಂಗಳೂರು, ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಸಮಗ್ರ ಸಾವರ್ಕರ್' ವಿಚಾರಸಂಕಿರಣದಲ್ಲಿ ಅವರು ಮಾತನಾಡಿದರು. 'ಧರ್ಮ ರಕ್ಷಣೆಗೆ ಹಿಂದೂ ಧರ್ಮದಲ್ಲಿ ಅಂತರ್ಗತವಾದ ಸ್ವಭಾವ ಜ್ಞಾನ ಮತ್ತು ಕ್ಷಾತ್ರ. ಅನ್ಯ ಧರ್ಮಗಳು ಹಿಂದೂ ಧರ್ಮದ ಅಸ್ತಿತ್ವವನ್ನೇ ಅಳಿಸಲು ಪ್ರಯತ್ನಿಸಿದ ಕಾಲಘಟ್ಟದಲ್ಲಿ ಸಾವರ್ಕರ್ ಧರ್ಮ ರಕ್ಷಿಸಲು ಶ್ರಮಿಸಿದರು. ಇದರಿಂದಾಗಿ ಸಾವರ್ಕರ್ ಇತರ ಧರ್ಮೀಯರ ಕೆಂಗಣ್ಣಿಗೆ ಗುರಿಯಾಗಿದ್ದರು. ಅವರ ಚಿಂತನೆಗಳನ್ನು ನಿರ್ಮೂಲನೆ ಮಾಡುವ ಎಲ್ಲ ರೀತಿಯ ಪ್ರಯತ್ನಗಳೂ ನಡೆದಿದ್ದವು' ಎಂದರು.

ಶಾಸಕ ಪಿ. ರಾಜೀವ್, 'ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅಂತಹವರಿಗೆ ರಾಷ್ಟ್ರ ಪ್ರೇಮಿ ಸಾವರ್ಕರ್ ಹೇಡಿಯಾಗಿ ಕಾಣುತ್ತಾರೆ. ಪ್ರತಿಯೊಬ್ಬರ ಮನಸ್ಸಿನಲ್ಲಿ ಸಾವರ್ಕರ್ ಅವರನ್ನು ಕೂರಿಸುವ ಜವಾಬ್ದಾರಿ ನಮ್ಮದಾಗಬೇಕು. ಮುಂದಿನ ದಿನಗಳಲ್ಲಿ ಬಿ.ಆರ್. ಅಂಬೇಡ್ಕರ್ ಮತ್ತು ಸಾವರ್ಕರ್ ಅವರ ಯುಗ ಬರಲಿದೆ' ಎಂದು ಹೇಳಿದರು.

ಲೇಖಕಿ ಎಸ್‌.ಆರ್‌.ಲೀಲಾ, 'ಹಿಂದೂಗಳ ಮೇಲೆ ಮುಸ್ಲಿಂ ಆಕ್ರಮಣಕಾರರು ಹಾಗೂ ಬ್ರಿಟಿಷರು ಎಷ್ಟೇ ಕ್ರೌರ್ಯ ಮೆರೆದರೂ ಕೊನೆಗೆ ಹಿಂದೂಗಳೇ ಜಯಿಸಿದರು. ಹಿಂದೂಗಳಲ್ಲಿ ಅಂತರ್ಗತವಾಗಿದ್ದ ಕ್ಷಾತ್ರ ಪ್ರವೃತ್ತಿ ಇದಕ್ಕೆ ಕಾರಣ' ಎಂದರು.

ಅನುಮೋದನೆ ದೊರೆತು ಎರಡು ವರ್ಷಗಳ ಬಳಿಕ ಬ್ಯಾರಿಕೇಡ್ ಅಳವಡಿಕೆ

ಉಪನಗರ ರೈಲು: ಕಾಮಗಾರಿಗೆ ತಯಾರಿ

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ



ಉಪನಗರ ರೈಲು ಯೋಜನೆ ಕಾಮಗಾರಿಗೆ ಬ್ಯಾರಿಕೇಡ್ ಅಳವಡಿಸಿರುವುದು —ಪ್ರಜಾವಾಣಿ ಚಿತ್ರ/ರಂಜು ಪಿ.

ಬೆಂಗಳೂರು: ಅನುಮೋದನೆ ದೊರೆತು ಎರಡು ವರ್ಷಗಳ ಬಳಿಕ ಕೊನೆಗೂ ಉಪನಗರ ರೈಲು ಯೋಜನೆ ಕಾಮಗಾರಿ ಆರಂಭವಾಗುವ ಲಕ್ಷಣಗಳು ಕಾಣಿಸುತ್ತಿವೆ. ಚಿಕ್ಕಬಾಣಾವರ–ಬೈಯಪ್ಪನಹಳ್ಳಿ ನಡುವಿನ 'ಸಂಪಿಗೆ' ಕಾರಿಡಾರ್ ಸಿವಿಲ್ ಕಾಮಗಾರಿ ಆರಂಭಿಸಲು ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಗಮ(ಕೆ–ರೈಡ್) ಸಿದ್ಧತೆ ಆರಂಭಿಸಿದೆ.

ಎಲ್ ಆ್ಯಂಡ್ ಟಿ ಕಂಪನಿ ಗುತ್ತಿಗೆ ಪಡೆದುಕೊಂಡಿದ್ದು, ಹೆಬ್ಬಾಳ ಬಳಿ ಬ್ಯಾರಿಕೇಡ್‌ಗಳನ್ನು ಅಳವಡಿಸಿ ಕಾಮಗಾರಿ ಆರಂಭಿಸಲು ಕಳೆದೊಂದು ವಾರದಿಂದ ತಯಾರಿ ನಡೆಸುತ್ತಿದೆ. ಕೆಲವೇ ದಿನಗಳಲ್ಲಿ ಪೂರ್ಣ ಪ್ರಮಾಣದ ಕಾಮಗಾರಿ ಆರಂಭವಾಗಲಿದೆ ಎಂದು ಕೆ–ರೈಡ್ ಅಧಿಕಾರಿಗಳು ತಿಳಿಸಿದ್ದಾರೆ.

'ಎಂಜಿನಿಯರ್‌ಗಳು ಪೂರ್ವ ತಯಾರಿ ಮಾಡಿಕೊಳ್ಳುತ್ತಿದ್ದಾರೆ. ಅಲೈನ್‌ಮೆಂಟ್, ಡಯಾಗನಲ್ ಕೆಲಸಗಳು ನಡೆಯುತ್ತಿವೆ. ನಿತ್ಯವೂ ಮಳೆ ಸುರಿಯುತ್ತಿರುವುದರಿಂದ ಸಿವಿಲ್ ಕಾಮಗಾರಿ ಆರಂಭವಾಗಲು ಇನ್ನೂ ಕೆಲವು ದಿನಗಳು ಬೇಕು' ಎಂದು ಅಧಿಕಾರಿಯೊಬ್ಬರು ಹೇಳಿದರು.

'ಪ್ರಧಾನ ಮಂತ್ರಿಯವರು 40 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲು ತಿಳಿಸಿದ್ದಾರೆ. ಮೊದಲ ಹಂತದಲ್ಲಿ ಸಂಪಿಗೆ ಮತ್ತು ಕನಕ (ರಾಜಾನುಕುಂಟೆ–ಹೀಲಳಿಗೆ) ಕಾರಿಡಾರ್ ಕಾಮಗಾರಿ ಆರಂಭವಾಗಲಿದೆ. ಪ್ರಧಾನಿ ಅವರು ನೀಡಿರುವ ಅವಧಿಯೊಳಗೆ ಎಲ್ಲಾ ಕಾಮಗಾರಿಯನ್ನೂ ಪೂರ್ಣಗೊಳಿಸುವ ಪ್ರಯತ್ನ ನಡೆದಿದೆ' ಎಂದು ಅವರು ಸ್ಪಷ್ಟಪಡಿಸಿದರು.

ಕೆ–ರೈಡ್ ಮೊದಲ ಹಂತದಲ್ಲಿ ಕೈಗೆತ್ತಿಕೊಂಡಿರುವ ಚಿಕ್ಕಬಾಣಾವರ–ಬೈಯಪ್ಪನಹಳ್ಳಿ ನಡುವೆ 25 ಕಿ.ಮೀ. ಮಾರ್ಗದಲ್ಲಿ 9.72 ಕಿ. ಮೀ. ಎತ್ತರಿಸಿದ ಮಾರ್ಗ ನಿರ್ಮಾಣವಾಗಲಿದೆ. 24 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಸಮಯ ನಿಗದಿ ಮಾಡಲಾಗಿದೆ. ಈ ಮಾರ್ಗದಲ್ಲಿ 14 ನಿಲ್ದಾಣಗಳು ನಿರ್ಮಾಣವಾಗಲಿದ್ದು, ಈ ಕಾಮಗಾರಿಗೆ ಪ್ರತ್ಯೇಕ ಟೆಂಡರ್ ಕರೆಯಲಾಗುವುದು ಎಂದು ಅವರು ವಿವರಿಸಿದರು.

'40 ತಿಂಗಳಲ್ಲಿ 4 ತಿಂಗಳು ಪೂರ್ಣ'

40 ತಿಂಗಳಲ್ಲಿ ಉಪನಗರ ರೈಲು ಯೋಜನೆಯ ನಾಲ್ಕು ಕಾರಿಡಾರ್‌ಗಳನ್ನು ಪೂರ್ಣಗೊಳಿಸಲಾಗುವುದು ಎಂದು ಜೂನ್ 20ರಂದು ಬೆಂಗಳೂರಿಗೆ ಬಂದಿದ್ದ ಪ್ರಧಾನಿ ನರೇಂದ್ರ ಮೋದಿ ಭರವಸೆ ನೀಡಿದ್ದಾರೆ. ಈಗಾಗಲೇ 4 ತಿಂಗಳು ಪೂರ್ಣಗೊಂಡರೂ ಕಾಮಗಾರಿಯೇ ಆರಂಭವಾಗಿಲ್ಲ ಎಂದು ರೈಲ್ವೆ ಹೋರಾಟಗಾರ ರಾಜಕುಮಾರ್ ದುಗಾರ್ ಹೇಳಿದರು.

ಕಾಮಗಾರಿಗೆ ಅನುಮೋದನೆ ದೊರೆತು ಇದೇ 21ಕ್ಕೆ ಎರಡು ವರ್ಷ ಪೂರ್ಣಗೊಳ್ಳಲಿದೆ. ಇಷ್ಟು ದಿನವಾದರೂ ಕಾಮಗಾರಿ ಆರಂಭವೇ ಆಗಿಲ್ಲ. ಇವೆಲ್ಲವನ್ನು ನೋಡಿದರೆ ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳ್ಳುವ ಲಕ್ಷಣಗಳಿಲ್ಲ ಎಂದರು.

'ವಿಮಾನ ನಿಲ್ದಾಣ ಮಾರ್ಗದ ಕಾಮಗಾರಿಗೆ ಕೆ–ರೈಡ್ ಆದ್ಯತೆ ನೀಡಬೇಕಿತ್ತು. ಸರ್ಕಾರವೂ ಈ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಚಿಕ್ಕಬಾಣಾವರ–ಬೈಯಪ್ಪನಹಳ್ಳಿ ಮಾರ್ಗಕ್ಕೆ ಹೆಬ್ಬಾಳ ಬಳಿ ಬ್ಯಾರಿಕೇಡ್ ಅಳವಡಿಸಿದ್ದಾರೆ. ಇನ್ನೂ ಕಾಮಗಾರಿ ಆರಂಭಿಸಿಲ್ಲ. ಪ್ರಧಾನಿ ಮಾತಿಗೂ ಬೆಲೆ ಇಲ್ಲದಂತಾಗಿದೆ' ಎಂದು ಹೇಳಿದರು.

ಅಂಕಿ–ಅಂಶ

₹859.97 ಕೋಟಿ
ಸಂಪಿಗೆ ಕಾರಿಡಾರ್ ಯೋಜನೆಯ ಮೊತ್ತ

25 ಕಿ.ಮೀ
ಸಂಪಿಗೆ ಯೋಜನೆಯ ಒಟ್ಟು ಉದ್ದ

9.72 ಕಿ.ಮೀ
ಎತ್ತರಿಸಿದ ಮಾರ್ಗ

14 ನಿಲ್ದಾಣಗಳ ಸಂಖ್ಯೆ

ಗುತ್ತಿಗೆದಾರರು: ಎಲ್ ಆ್ಯಂಡ್ ಟಿ ಕಂಪನಿ

ಸುದ್ದಿ 2 ನಿಮಿಷ

ಯತ್ನಾಳ್ ವಿರುದ್ಧ ಹರಿಹಾಯ್ದ ಅರುಣ್ ಸಿಂಗ್

ಹಾವೇರಿ: 'ಕೆಲವರು ಹೀಗೂ ಇರುತ್ತಾರೆ, ಮಾತಾಡೋದೇ ಅವರ ಕೆಲಸ. ಇದು ಅವರ ಹವ್ಯಾಸ. ಪಕ್ಷದಿಂದ ಈಗಾಗಲೇ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರಿಗೆ ನೋಟಿಸ್ ಜಾರಿಯಾಗಿದೆ. ಆದ್ರೆ ಕಲಿಯುವುದಿಲ್ಲ, ತಿಳಿದುಕೊಳ್ಳಲ್ಲ ಅಂದ್ರೆ ಏನು ಮಾಡೋದು? ಬಿಜೆಪಿ ಕಾರ್ಯಕರ್ತರು ಇದನ್ನು ಇಷ್ಟಪಡಲ್ಲ' ಎಂದು ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ಅಸಮಾಧಾನ ವ್ಯಕ್ತಪಡಿಸಿದರು.



'ಯಡಿಯೂರಪ್ಪ ಅವರನ್ನು ಎಲ್ಲ ಪಕ್ಷಗಳು ಗೌರವಿಸುತ್ತವೆ. ಬಿಜೆಪಿ ಸರ್ಕಾರ | ಬಡವರ ಪರವಾಗಿ ಕೆಲಸ ಮಾಡುತ್ತಿದೆ. ಇದು ಅವರಿಗೆ ಕಾಣುತ್ತಿಲ್ವಾ? ನಮ್ಮ ಸರ್ಕಾರ ಗೋಹತ್ಯೆ ನಿಷೇಧ ಕಾಯ್ದೆ ಮಾಡಿದೆ ಅದು ಕಾಣ್ತಿಲ್ವ? ನೋಡಬೇಕಲ್ಲ, ಇದನ್ನೆಲ್ಲ ತಮ್ಮ ಸ್ವಾರ್ಥಕ್ಕಾಗಿ ಮಾತನಾಡುತ್ತಿದ್ದಾರೆ' ಎಂದು ಹರಿಹಾಯ್ದರು.

ಒಡನಾಡಿಯ 'ಒಡಲು' ಕೇಂದ್ರದ ಮೇಲೆ ಕಲ್ಲು ತೂರಾಟ

ಮೈಸೂರು: ಒಡನಾಡಿ ಸೇವಾ ಸಂಸ್ಥೆಯು ಗೆಜ್ಜಗಳ್ಳಿಯಲ್ಲಿ ನಡೆಸುತ್ತಿರುವ 'ಒಡಲು' ಪುನರ್ವಸತಿ ಕೇಂದ್ರದ ಮೇಲೆ ಶುಕ್ರವಾರ ರಾತ್ರಿ ಕಿಡಿಗೇಡಿಗಳು ಕಲ್ಲು ತೂರಾಟ ನಡೆಸಿದ್ದಾರೆ. ಘಟನೆಯಲ್ಲಿ ಯಾವುದೇ ಹಾನಿ ಸಂಭವಿಸಿಲ್ಲ.

ಮೂರು ಎಕರೆಯಲ್ಲಿರುವ ಕೇಂದ್ರದ ಕಾಂಪೌಂಡ್ ಹೊರಗಿನಿಂದ ಕಲ್ಲು ತೂರಲಾಗಿದೆ. ಕಲ್ಲುಗಳು ಪಾರ್ಕಿಂಗ್ ಸ್ಥಳದಲ್ಲಿದ್ದ ದ್ವಿಚಕ್ರವಾಹನಗಳ ಬಳಿ ಬಿದ್ದಿವೆ. ವಾಹನಗಳಿಗೆ ಹಾನಿಯಾಗಿಲ್ಲ.

'ಘಟನೆ ಕುರಿತು ದಕ್ಷಿಣ ಪೊಲೀಸ್ ಠಾಣೆಗೆ ದೂರು ನೀಡಿದ್ದು, ರಕ್ಷಣೆ ನೀಡುವಂತೆ ಕೋರಲಾಗಿದೆ. ಎರಡು ತಿಂಗಳ ಹಿಂದೆಯೂ ಇಂಥದ್ದೇ ಘಟನೆ ನಡೆದಿತ್ತು' ಎಂದು ಸಂಸ್ಥೆಯ ನಿರ್ದೇಶಕ ಪರಶುರಾಮ್ ಎಂ.ಎಲ್. 'ಪ್ರಜಾವಾಣಿ'ಗೆ ತಿಳಿಸಿದರು.

40 ಶುಶ್ರೂಷಕರಿಗೆ 'ಮಾಸ್ಟರ್ ಟ್ರೇನರ್' ತರಬೇತಿ

ಮಂಗಳೂರು: ಇಂಟರ್ ನ್ಯಾಷನಲ್ ಕೌನ್ಸಿಲ್ ಫಾರ್ ನರ್ಸಸ್ ಸಂಘಟನೆಯು ಶುಶ್ರೂಷೆ ಕ್ಷೇತ್ರಕ್ಕೆ ಸಂಬಂಧಿಸಿ 'ಬದಲಾವಣೆಗಾಗಿ ನಾಯಕತ್ವ' ಕಾರ್ಯಕ್ರಮ ರೂಪಿಸಿದೆ. ಭಾರತದಲ್ಲೂ ಈ ಕಾರ್ಯಕ್ರಮವನ್ನು ಜಾರಿಗೊಳಿಸಿ, ಪ್ರತಿ ರಾಜ್ಯದಿಂದ ಒಬ್ಬರಂತೆ 40 ಜನರನ್ನು ಆಯ್ಕೆ ಮಾಡಿ, ತರಬೇತಿ ನೀಡಲಾಗುವುದು ಎಂದು ಅಖಿಲ ಭಾರತ ದಾದಿಯರ ಪರಿಷತ್ (ಐಎನ್‌ಸಿ) ಅಧ್ಯಕ್ಷ ಡಾ. ಟಿ. ದಿಲೀಪ್‌ಕುಮಾರ್ ತಿಳಿಸಿದರು.

ಟ್ರೇನ್ಡ್ ನರ್ಸಸ್ ಅಸೋಸಿಯೇಷನ್ ಆಫ್ ಇಂಡಿಯಾದ ರಾಜ್ಯ ಶಾಖೆ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ನರ್ಸಿಂಗ್ ಕಾಲೇಜುಗಳು ಜಂಟಿಯಾಗಿ ಶನಿವಾರ ಇಲ್ಲಿ ಆಯೋಜಿಸಿದ್ದ 'ಶುಶ್ರೂಷೆ ಆಡಳಿತದ ನಾಯಕತ್ವ, ನಿರ್ಧಾರ ತೆಗೆದುಕೊಳ್ಳುವಿಕೆ, ಮಾರ್ಗದರ್ಶನ ನೀಡುವ ವಿಜ್ಞಾನ ಅಭಿವೃದ್ಧಿ' ಕುರಿತ ರಾಷ್ಟ್ರ ಮಟ್ಟದ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ಈ ಕಾರ್ಯಕ್ರಮದಡಿ ಪ್ರತಿ ರಾಜ್ಯದ ಒಬ್ಬ ಪ್ರತಿನಿಧಿಯನ್ನು ಮಾಸ್ಟರ್ ಟ್ರೇನರ್ ಆಗಿ ರೂಪಿಸಲಾಗುವುದು. ಇವರು ಉಳಿದ ದಾದಿಯರಿಗೆ ತರಬೇತಿ ನೀಡಲಿದ್ದಾರೆ ಎಂದರು.

ಮಡಿಕೇರಿ: ನಗರಸಭೆ ಸದಸ್ಯ ಸೇರಿ ಇಬ್ಬರ ಬಂಧನ

ಮಡಿಕೇರಿ: 'ಮಡಿಕೇರಿಯಲ್ಲಿ 50 ಕಡೆ ಪೆಟ್ರೋಲ್ ಬಾಂಬ್ ಹಾಕಿ ಭೀತಿ ಸೃಷ್ಟಿಸಬೇಕು. ಆಗ ಹಿಂದೂಗಳೇ ಬಿಜೆಪಿ ಅಧಿಕಾರಕ್ಕೆ ಬರಬಾರದೆಂದು ಹೇಳುತ್ತಾರೆ' ಎಂದು ಮಲಯಾಳ ಭಾಷೆಯಲ್ಲಿ ಮಾತನಾಡಿರುವ ಆರೋಪದ ಮೇರೆಗೆ ಇಲ್ಲಿನ ನಗರಸಭೆ ಸದಸ್ಯ ಜೆಡಿಎಸ್‌ನ ಮುಸ್ತಾಫ ಹಾಗೂ ರಿಯಲ್ ಎಸ್ಟೇಟ್ ಉದ್ಯಮಿ ಅಬ್ದುಲ್ಲಾ ಎಂಬುವವರನ್ನು ನಗರ ಠಾಣೆ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಇಲ್ಲಿನ ಪೆನ್ಷನ್‌ಲೈನ್ ನಿವಾಸಿ ಶೇಷಪ್ಪ ರೈ ಎಂಬುವವರು ಕೆಲಸದ ಸಲುವಾಗಿ ಏಪ್ರಿಲ್ 23ರಂದು ಮಾಡಿದ್ದ ದೂರವಾಣಿ ಕರೆಯನ್ನು ಅಪ್ರಯತ್ನಪೂರ್ವಕವಾಗಿ ಸ್ವೀಕರಿಸಿದ್ದ ಅಬ್ದುಲ್ಲ, ತಮ್ಮೊಂದಿಗೆ ಇದ್ದ ಮುಸ್ತಾಫ ಅವರೊಂದಿಗೆ 3 ನಿಮಿಷಗಳ ಕಾಲ ಮಾತನಾಡಿದ್ದರು.

'ಆ ವೇಳೆ ಅವರು, ಮಡಿಕೇರಿಯಲ್ಲಿ 50 ಕಡೆ ಪೆಟ್ರೋಲ್ ಬಾಂಬ್ ಹಾಕಿ ಇಡೀ ಮಡಿಕೇರಿಯನ್ನೇ ಹೊತ್ತಿ ಉರಿಸಬೇಕು. ಅದಕ್ಕೆ ₹ 50 ಸಾವಿರದಿಂದ ₹ 1 ಲಕ್ಷ ಹಾಕಬೇಕು ಎಂದಿದ್ದರು ಎಂದು ಆರೋಪಿಸಿ ಶೇಷಪ್ಪ ನೀಡಿದ ದೂರಿನ ಮೇರೆಗೆ ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ನೋಂದಣಿ ಫಲಕ ಬದಲಿಸಿ ಕಾರು ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕದ್ದ ಹಾಗೂ ಸೆಕೆಂಡ್ ಹ್ಯಾಂಡ್ ಕಾರುಗಳ ನೋಂದಣಿ ಫಲಕ ಬದಲಿಸಿ ಸಾರ್ವಜನಿಕರಿಗೆ ಮಾರಾಟ ಮಾಡಿ ವಂಚಿಸುತ್ತಿದ್ದ ಮೂವರು ಆರೋಪಿಗಳನ್ನು ಪುಲಿಕೇಶಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕೆ.ಜಿ. ಹಳ್ಳಿ ವಿನೋಬಾ ನಗರದ ಜಾಬೀರ್ ಷರೀಫ್ (30), ವಸಂತನಗರ ನಿವಾಸಿ ಮನೀಶ್ (33) ಹಾಗೂ ಬೆಳಗಾವಿ ಜಿಲ್ಲೆಯ ಮಾರುತಿನಗರ ನಿವಾಸಿ ಸೈಯದ್ ಇಮಾಮ್ (23) ಬಂಧಿತರು. ಇವರಿಂದ 16 ಐಷಾರಾಮಿ ಕಾರುಗಳನ್ನು ಜಪ್ತಿ ಮಾಡಲಾಗಿದೆ. ಕಾರುಗಳ ಮೌಲ್ಯ ಅಂದಾಜು ₹ 5 ಕೋಟಿ' ಎಂದು ಪೊಲೀಸರು ಹೇಳಿದರು.

'ಆರೋಪಿ ಜಾಬೀರ್, ಕಾರು ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದ. ದೆಹಲಿ, ಮುಂಬೈ ಹಾಗೂ ಇತರೆ ನಗರಗಳಿಗೆ ಆಗಾಗ ಹೋಗುತ್ತಿದ್ದ ಈತ, ಐಷಾರಾಮಿ ಕಾರುಗಳನ್ನು ಕದ್ದು ಬೆಂಗಳೂರಿಗೆ ತರುತ್ತಿದ್ದ. ಅದೇ ಕಾರುಗಳನ್ನು ಇತರೆ ಆರೋಪಿಗಳು ಖರೀದಿಸುತ್ತಿದ್ದರು' ಎಂದು ತಿಳಿಸಿದರು.

'ಹೊರ ರಾಜ್ಯಗಳ ಕಾರುಗಳನ್ನು ನೇರವಾಗಿ ಮಾರಾಟ ಮಾಡಿದರೆ, ಸಾರಿಗೆ ಇಲಾಖೆ ಅಧಿಕಾರಿಗಳು ಹಾಗೂ ಪೊಲೀಸರಿಗೆ ಸಿಕ್ಕಿಬೀಳುವ ಭಯ ಆರೋಪಿಗಳಲ್ಲಿತ್ತು. ಜೊತೆಗೆ, ಸಾರಿಗೆ ಇಲಾಖೆಗೆ ತೆರಿಗೆ ಸಹ ಕಟ್ಟಬೇಕಿತ್ತು. ಇದೇ ಕಾರಣಕ್ಕೆ ಆರೋಪಿಗಳು ನೋಂದಣಿ ಸಂಖ್ಯೆ ಫಲಕ ಬದಲಿಸುತ್ತಿದ್ದರು. ಕರ್ನಾಟಕದ ಕಾರು ಎಂದು ಹೇಳಿ ಸಾರ್ವಜನಿಕರಿಗೆ ಮಾರುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಸೆಕೆಂಡ್ ಹ್ಯಾಂಡ್ ವಾಹನ ಖರೀದಿ: 'ಸಾಲ ಮರುಪಾವತಿ ಮಾಡಲು ಸಾಧ್ಯವಾಗದ ಮಾಲೀಕರ ಕಾರುಗಳನ್ನು ಆರೋಪಿಗಳು ಖರೀದಿಸುತ್ತಿದ್ದರು. ಅಂಥ ಕಾರುಗಳ ನೋಂದಣಿ ಫಲಕ ಬದಲಿಸಿ ಮಾರುತ್ತಿದ್ದರು. ಕಾರು ಖರೀದಿ ಮಾಡಿದವರು ಕಾರಿನ ಮೇಲೆ ಸಾಲ ಇಲ್ಲವೆಂದು ಭಾವಿಸುತ್ತಿದ್ದರು. ಕೆಲದಿನ ಬಿಟ್ಟು, ಅವರಿಗೆ ನಿಜ ಸಂಗತಿ ತಿಳಿಯುತ್ತಿತ್ತು' ಎಂದು ಪೊಲೀಸರು ತಿಳಿಸಿದರು.

'ವಸಂತ್‌ಕುಮಾರ್ ಎಂಬುವರು ಸಾಲ ಮಾಡಿ ಇನ್ನೋವಾ ಕ್ರಿಸ್ಟಾ ಕಾರು ಖರೀದಿಸಿದ್ದರು. ಆದರೆ, ಸಾಲ ಮರುಪಾವತಿಸಲು ಸಾಧ್ಯವಾಗಿರಲಿಲ್ಲ. ಅವರನ್ನು ಸಂಪರ್ಕಿಸಿದ್ದ ಆರೋಪಿಗಳು, ₹ 50 ಸಾವಿರ ಮುಂಗಡ ಹಣ ನೀಡಿ ಕಾರು ತೆಗೆದುಕೊಂಡು ಹೋಗಿದ್ದರು.'

'ನಿಗದಿತ ದಿನದೊಳಗೆ ಬಾಕಿ ಹಣ ನೀಡಿರಲಿಲ್ಲ. ಬ್ಯಾಂಕ್ ಸಾಲವನ್ನೂ ಮರುಪಾವತಿ ಮಾಡಿರಲಿಲ್ಲ. ಹೀಗಾಗಿ, ಕಾರು ವಾಪಸು ಪಡೆಯಲು ಮಾಲೀಕರು ಹೋಗಿದ್ದರು. ಅದೇ ಸಂದರ್ಭದಲ್ಲೇ ಅವರ ಕಾರಿನ ನೋಂದಣಿ ಫಲಕ ಬದಲಾವಣೆ ಮಾಡಿರುವುದು ಗಮನಕ್ಕೆ ಬಂದಿತ್ತು. ಈ ಸಂಬಂಧ ವಸಂತ್‌ಕುಮಾರ್ ಠಾಣೆಗೆ ದೂರು ನೀಡಿದ್ದರು' ಎಂದು ಪೊಲೀಸರು ಹೇಳಿದರು.

ಹುಕ್ಸ್‌ನಲ್ಲಿ ಚಿನ್ನ ಬಚ್ಚಿಟ್ಟು ಸಾಗಣೆ

ಬೆಂಗಳೂರು: ಪ್ಯಾಂಟ್ ಹುಕ್ಸ್ ಹಾಗೂ ಮಕ್ಕಳ ಅಂಗಿಯ ಬಟನ್‌ನಲ್ಲಿ ಬಚ್ಚಿಟ್ಟು ಸಾಗಿಸುತ್ತಿದ್ದ ₹ 12.57 ಲಕ್ಷ ಮೌಲ್ಯದ 244 ಗ್ರಾಂ ಚಿನ್ನವನ್ನು ಕಸ್ಟಮ್ಸ್ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

'ದುಬೈನಿಂದ ಬೆಂಗಳೂರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿದ್ದ ಪಾರ್ಸೆಲ್‌ನಲ್ಲಿ ಚಿನ್ನವಿರುವ ಮಾಹಿತಿ ಬಂದಿತ್ತು. ಕೊರಿಯರ್ ವಿಭಾಗದಲ್ಲಿ ಪಾರ್ಸೆಲ್ ಪರಿಶೀಲನೆ ನಡೆಸಿದಾಗಲೇ, ಚಿನ್ನ ಪತ್ತೆಯಾಯಿತು' ಎಂದು ಕಸ್ಟಮ್ಸ್ ಮೂಲಗಳು ಹೇಳಿವೆ.

'ಎರಡು ಪಾರ್ಸೆಲ್‌ಗಳಲ್ಲಿ ಪ್ಯಾಂಟ್ ಹುಕ್ಸ್ ಹಾಗೂ ಬಟನ್‌ಗಳು ಮಾತ್ರ ಇದ್ದವು. ಅವುಗಳನ್ನು ಒಡೆದು ನೋಡಿದಾಗ, ಚಿನ್ನದ ಸಣ್ಣ ಸಣ್ಣ ತುಣುಕುಗಳು ಸಿಕ್ಕವು. ಈ ಪಾರ್ಸೆಲ್ ಕಳುಹಿಸಿದವರು ಯಾರು? ಎಲ್ಲಿಗೆ ಹೋಗುತ್ತಿತ್ತು ? ಎಂಬುದನ್ನು ತಿಳಿಯಲು ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿವೆ.

'ಅರಕೇರಾ ಹೊಸ ತಾಲ್ಲೂಕು'

ಅರಕೇರಾ (ರಾಯಚೂರು ಜಿಲ್ಲೆ): 'ದೇವದುರ್ಗ ತಾಲ್ಲೂಕಿನ ಅರಕೇರಾ ಗ್ರಾಮವನ್ನು ನಾಳೆಯಿಂದಲೇ ನೂತನ ತಾಲ್ಲೂಕು ಕೇಂದ್ರ ಎಂದು ಕರೆಯಬೇಕು' ಎಂದು ಕಂದಾಯ ಸಚಿವ ಆರ್.ಅಶೋಕ ಘೋಷಿಸಿದರು.

'ಜಿಲ್ಲಾಧಿಕಾರಿ ನಡೆ ಹಳ್ಳಿ ಕಡೆ' ಕಾರ್ಯಕ್ರಮದಡಿ ಶನಿವಾರ ಅರಕೇರಾದಲ್ಲಿ ಗ್ರಾಮ ವಾಸ್ತವ್ಯ ಮಾಡಿದ ಅವರು ಈ ಘೋಷಣೆ ಮಾಡಿದರು.

ಸಚಿವ ಮುನಿರತ್ನ ವಿರುದ್ಧ ಬಿ ರಿಪೋರ್ಟ್ ಹೆಚ್ಚುವರಿ ಆಕ್ಷೇಪಣೆ ಸಲ್ಲಿಕೆ

ಪ್ರಜಾವಾಣಿ ವಾರ್ತೆ


ಮುನಿರತ್ನ

ಬೆಂಗಳೂರು: 'ಮತದಾರರ ನಕಲಿ ಗುರುತಿನ ಚೀಟಿ ಪ್ರಕರಣಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಸಚಿವ ಎನ್. ಮುನಿರತ್ನ ಅವರನ್ನು ಆರೋಪ ಪಟ್ಟಿಯಿಂದ ಕೈ ಬಿಟ್ಟು ನ್ಯಾಯಾಲಯಕ್ಕೆ ಸಲ್ಲಿಸಲಾಗಿರುವ ಬಿ ರಿಪೋರ್ಟ್ ತಿರಸ್ಕರಿಸಬೇಕು' ಎಂದು ಕೋರಿ ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ತುಳಸಿ ಮುನಿರಾಜು ಗೌಡ 39ನೇ ಎಸಿಎಂಎಂ ಕೋರ್ಟ್‌ಗೆ ಹೆಚ್ಚುವರಿ ಆಕ್ಷೇಪಣೆ ಸಲ್ಲಿಸಿದ್ದಾರೆ.

ಈ ಸಂಬಂಧ ಪ್ರತಿಭಟನಾ ಅರ್ಜಿ ಸಲ್ಲಿಸಿರುವ ಮುನಿರಾಜು ಗೌಡರ ಪರ ವಕೀಲ ಧರಣೇಶ್, 'ಮುನಿರತ್ನ ಅವರನ್ನು ಆರೋಪಿಯನ್ನಾಗಿ ಮಾಡಿ ಎಸಿಪಿ ದರ್ಜೆಗಿಂತಲೂ ಮೇಲ್ಮಟ್ಟದ ಪೊಲೀಸ್ ಅಧಿಕಾರಿಯಿಂದ ತನಿಖೆ ನಡೆಸಲು ಆದೇಶಿಸಬೇಕು' ಎಂದು ಕೋರಿದ್ದಾರೆ.

'ಮತದಾರರ ನಕಲಿ ಗುರುತಿನ ಚೀಟಿ ಪ್ರಕರಣದ ಮೂಲ ಸೂತ್ರಧಾರ ಮುನಿರತ್ನ ಅವರೇ ಆಗಿದ್ದು ಅವರನ್ನು ಆರೋಪ ಪಟ್ಟಿಯಿಂದ ಕೈ ಬಿಟ್ಟಿರುವುದು ಸರಿಯಲ್ಲ' ಎಂದು ಹೆಚ್ಚುವರಿ ಆಕ್ಷೇಪಣಾ ಅರ್ಜಿಯಲ್ಲಿ ವಿವರಿಸಲಾಗಿದೆ.

ವಿಚಾರಣೆ ವೇಳೆ ವಾದ ಮಂಡಿಸಿದ ಧರಣೇಶ್, ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ದಿವಂಗತ ಜಯಲಲಿತಾ ವಿರುದ್ಧದ ಭ್ರಷ್ಟಾಚಾರ ಆರೋಪದ ಪ್ರಕರಣವನ್ನು ಉಲ್ಲೇಖಿಸಿ, 'ಒಬ್ಬ ಪ್ರಬಲ ರಾಜಕೀಯ ವ್ಯಕ್ತಿಯ ವಿರುದ್ಧ ಆತನ ಪ್ರತಿಸ್ಪರ್ಧಿ ಮಾತ್ರವೇ ನ್ಯಾಯಾಲಯದಲ್ಲಿ ಸಮರ್ಥವಾಗಿ ಹೋರಾಟ ಮಾಡಲು ಸಾಧ್ಯ' ಎಂದು ವಿವರಿಸಿದರು.

'ಮುನಿರತ್ನ ಅವರ ಆಯ್ಕೆಯನ್ನು ಅಸಿಂಧುಗೊಳಿಸುವಂತೆ ಕೋರಿ ಈಗಾಗಲೇ ಹೈಕೋರ್ಟ್‌ನಲ್ಲಿ ಚುನಾವಣಾ ತಕರಾರು ಅರ್ಜಿ ಸಲ್ಲಿಸಲಾಗಿದೆ. ಅರ್ಜಿದಾರ ತುಳಸಿ ಮುನಿರಾಜುಗೌಡ ಹೈಕೋರ್ಟ್‌ನಲ್ಲಿ ಸಾಕ್ಷಿಯನ್ನೂ ನುಡಿದಿದ್ದಾರೆ. ಅದರಲ್ಲಿ ಮುನಿರತ್ನ ಪಾತ್ರ ಏನು ಎಂಬುದನ್ನು ವಿಶದಪಡಿಸಲಾಗಿದೆ' ಎಂದು ನ್ಯಾಯಾಧೀಶರಿಗೆ ಮನವರಿಕೆ ಮಾಡಿಕೊಟ್ಟರು. ಮನವಿ ಆಲಿಸಿದ ನ್ಯಾಯಾಧೀಶ ಸಂದೇಶ್ ಪ್ರಭು ಅವರು, ಅರ್ಜಿದಾರರು ಲಿಖಿತ ವಾದ ಮಂಡಿಸುವಂತೆ ಸೂಚಿಸಿ ವಿಚಾರಣೆಯನ್ನು ಮುಂದೂಡಿದ್ದಾರೆ.

ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರಕ್ಕೆ 2018ರಲ್ಲಿ ನಡೆದಿದ್ದ ಚುನಾವಣೆ ಸಂದರ್ಭದಲ್ಲಿ ಪತ್ತೆಯಾಗಿದ್ದ ನಕಲಿ ಗುರುತಿನ ಚೀಟಿ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾಲಹಳ್ಳಿ ಪೊಲೀಸ್ ಠಾಣೆಯಲ್ಲಿ ಎರಡು ಪ್ರಕರಣ ದಾಖಲಾಗಿವೆ.

ಚಿತ್ರಾವಳಿ



ಹಿರಿಯರ ದಿನಾಚರಣೆ ಅಂಗವಾಗಿ ಆಶ್ವಾಸನ2022 ಪ್ರಶಸ್ತಿಯನ್ನು ದಾಂಡೇಲಿಯ ಕಾಸಿಂ ಸಾಬ್ ಜಮಾದಾರ (ಸಂಗೀತ), ನಿಟ್ಟೂರಿನ ಸಂತೆಗುಳಿ ನಾರಾಯಣಭಟ್ಟ (ಯಕ್ಷಗಾನ), ಕೆಕ್ಕಾರು ಜಿ.ಡಿ.ಭಟ್ಟ (ಚಿತ್ರಕಲೆ ಹಾಗೂ ನಾಟಕ), ನವಲಗುಂದ ರಹಮತ್‌ಬಿ ಕುತುಬುದ್ದೀನ್ ಪಟವೇ ಗಾರ್(ಕರಕುಶಲ) ಇವರಿಗೆ ಪ್ರದಾನ ಮಾಡಲಾಯಿತು. ಆಶ್ವಾಸನ ಫೌಂಡೇಷನ್ ಅಧ್ಯಕ್ಷೆ ಮಾಳವಿಕಾ ಉಭಯಕರ ಬಿಜೂರ, ಆಯ್ಕೆ ಸಮಿತಿ ಮುಖ್ಯಸ್ಥ ಜಿ.ಎಸ್‌ಹೆಗಡೆ ಇದ್ದರು.



ಮಾನವ ಕಳ್ಳಸಾಗಣೆ ವಿರುದ್ಧ 'ದಿ ಮೂವ್‌ಮೆಂಟ್' ಸಂಸ್ಥೆ ನಗರದಲ್ಲಿ ಶನಿವಾರ ಜಾಗೃತಿ ಜಾಥಾ ನಡೆಸಿತು

527 ಕೆ.ಜಿ. ರಕ್ತಚಂದನ ಜಪ್ತಿ

ಪ್ರಜಾವಾಣಿ ವಾರ್ತೆ


ಬೆಂಗಳೂರು: ರಕ್ತಚಂದನ ತುಂಡುಗಳನ್ನು ಸಾಗಿಸುತ್ತಿದ್ದ ನಾಲ್ವರು ಆರೋಪಿಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿದ್ದು, 527 ಕೆ.ಜಿ ರಕ್ತಚಂದನ ಜಪ್ತಿ ಮಾಡಿದ್ದಾರೆ.

ಕೆ. ನವೀನ್‌ಕುಮಾರ್ (30), ನಜೀಬ್‌ಖಾನ್ (25), ಎಂ.ಎಸ್. ಚೇತನ್ (20) ಹಾಗೂ ನಜೀಬ್ ಕಾಶಿಫ್ ಪಾಷಾ (30) ಬಂಧಿತರು. ಜಾಲಹಳ್ಳಿ ಪಶ್ಚಿಮ ವಿಭಾಗದ ಜಾರಕಬಂಡೆ ಉಪ ಅರಣ್ಯ ಸಂಚಾರಿ ದಳದ ಸಿಬ್ಬಂದಿ ವಿಶೇಷ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ.

'ಆರೋಪಿಗಳು ತಮ್ಮದೇ ತಂಡ ಕಟ್ಟಿಕೊಂಡು ಕೃತ್ಯ ಎಸಗುತ್ತಿದ್ದರು. ರಕ್ತಚಂದನ ಸಾಗಣೆ ವೇಳೆ ಯಾರಾದರೂ ತಪಾಸಣೆಗೆಂದು ತಡೆದರೆ, ಅವರ ಮೇಲೂ ಹಲ್ಲೆ ಮಾಡಲು ಆರೋಪಿಗಳು ಸಿದ್ಧತೆ ಮಾಡಿಕೊಂಡಿದ್ದರು. ಆರೋಪಿಗಳಿಂದ ಲಾಂಗ್ ಹಾಗೂ ಪೆಪ್ಪರ್ ಸ್ಪ್ರೇ ಜಪ್ತಿ ಮಾಡಲಾಗಿದೆ' ಎಂದು ಅರಣ್ಯ ಇಲಾಖೆ ಅಧಿಕಾರಿಯೊಬ್ಬರು ಹೇಳಿದರು.

ನಿಧನ ವಾರ್ತೆ

ಎಂ.ಕೆ. ತಿಮ್ಮೇಶಪ್ರಭು



ಬೆಂಗಳೂರು: ಸಾಹಿತಿ, ಚಿಂತಕ ಎಂ.ಕೆ. ತಿಮ್ಮೇಶಪ್ರಭು (97) ಅವರು ಶನಿವಾರ ಬೆಳಿಗ್ಗೆ 7.30ಕ್ಕೆ ಕೆಂಪೇಗೌಡನಗರ ಬಡಾವಣೆಯ ಸ್ವಗೃಹದಲ್ಲಿ ನಿಧನರಾದರು.

ಅವರು ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಪತ್ನಿ ಸರೋಜಮ್ಮ, ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ.

ಈ ಹಿಂದೆ ನಗರಸಭೆಯ ಸದಸ್ಯರಾಗಿದ್ದ ಅವರು, ಗವಿಪುರ ಗುಟ್ಟಹಳ್ಳಿಯಲ್ಲಿ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಸಾರ್ವಜನಿಕ ಆಸ್ತಿಯನ್ನು ಸಂರಕ್ಷಣೆ ಮಾಡಿ, ಅಭಿವೃದ್ಧಿಪಡಿಸಿದ್ದರು. ಇದರಿಂದಾಗಿ ಗವಿಪುರ ಬಡಾವಣೆಯಲ್ಲಿ ಅವರ ಹೆಸರಿನಲ್ಲಿ ತಿಮ್ಮೇಶಪ್ರಭು ಉದ್ಯಾನ ನಿರ್ಮಿಸಲಾಗಿದೆ. ಅವರು ವಕೀಲರಾಗಿಯೂ ಕಾರ್ಯನಿರ್ವಹಿಸಿದ್ದರು. ಉದಯಭಾನು ಕಲಾಸಂಘದ ಪ್ರಗತಿಗೆ ಶ್ರಮಿಸಿದ್ದರು.

ನಗರದಲ್ಲಿ ಇಂದು

ವಿಶ್ವ ಗುಣಮಟ್ಟ ದಿನದ ಪ್ರಯುಕ್ತ ವಾಕಥಾನ್: ಮುಖ್ಯ ಅತಿಥಿಗಳು: ಪ್ರಜ್ವಲ್ ದೇವರಾಜ್, ಪನ್ನಗ ಭರಣ, ಆಯೋಜನೆ: ಭಾರತೀಯ ಮಾನದಂಡ ಮಂಡಳಿ (ಬಿಐಎಸ್), ಸ್ಥಳ: ಬೆಂಗಳೂರು ಅರಮನೆ ಮುಖ್ಯ ದ್ವಾರ, ಬೆಳಿಗ್ಗೆ 8.30

ಒಳನಾಡು ಮೀನು ಉತ್ಪಾದಕರ ಸಮಾವೇಶ: ಚಾಲನೆ: ಬಸವರಾಜ ಬೊಮ್ಮಾಯಿ, ವಿಶೇಷ ಅತಿಥಿಗಳು: ನಿರ್ಮಲಾ ಸೀತಾರಾಮನ್, ರಾಜೀವ್ ಚಂದ್ರಶೇಖರ್, ಎಲ್. ಮುರುಗನ್, ಉಪಸ್ಥಿತಿ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಎಸ್. ಅಂಗಾರ, ಆಯೋಜನೆ: ಮೀನುಗಾರಿಕೆ ಇಲಾಖೆ, ಸ್ಥಳ: ಗಾಯತ್ರಿ ವಿಹಾರ, ನಾಲ್ಕನೇ ಗೇಟ್, ಅರಮನೆ ಮೈದಾನ, ಬೆಳಿಗ್ಗೆ 9

ಗುರು ಪಂಚಾಕ್ಷರ ಸಂಗೀತೋತ್ಸವ: ಸಾನ್ನಿಧ್ಯ: ಚೆನ್ನವೀರ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಸತೀಶ್ ಹಂಪಿಹೊಳಿ, ಮುಖ್ಯ ಅತಿಥಿಗಳು: ಮಲ್ಲಮ್ಮ ಎಂ. ಬಿರಾದಾರ್, ಗಾಯನ: ಶ್ರೀಪಾದ್ ಹೆಗಡೆ, ಆಯೋಜನೆ: ಶ್ರೀ ಗುರುಕುಮಾರ ಪಂಚಾಕ್ಷರೇಶ್ವರ ಸಂಗೀತ ಕಲಾ ವೇದಿಕೆ, ಸ್ಥಳ: ಶ್ರೀ ಘನಲಿಂಗ ಶಿವಯೋಗಿ ಸಭಾಭವನ, ಬನಶಂಕರಿ 2ನೇ ಹಂತ, ಬೆಳಿಗ್ಗೆ 9.30

17ನೇ ಧ್ವನಿ: ಬಿಕೆಎಫ್–ಪಂಡಿತ್ ಮಲ್ಲಿಕಾರ್ಜುನ್ ಮನ್ಸೂರ್ ಸಂಗೀತೋತ್ಸವ: ಗಾಯನ: ಸಮೀರ್ ಕುಲಕರ್ಣಿ, ಉಸ್ತಾದ್ ಅನ್ವರ್ ಖಾನ್, ರೋಷನ್ ಖಾನ್, ಪೂರ್ವಿ ಗರುಡ್, ತಬಲಾ ವಾದನ: ಕೇದಾರನಾಥ್ ಹವಾಲ್ದಾರ್, ಗುರುಚರಣ್ ಗರುಡ್, ಅನುಬ್ರತ ಚಟರ್ಜಿ, ಹಾರ್ಮೋನಿಯಂ ವಾದನ: ಸಮೀರ್ ಹವಾಲ್ದಾರ್, ಸೂರ್ಯ ಉಪಾಧ್ಯಾಯ, ಖರ್ತಾಲ್: ಉಸ್ತಾದ್ ಗಾಜಿ ಖಾನ್, ಡೋಲಕ್: ಫಿರೋಜ್ ಖಾನ್, ಕೊಳಲು ವಾದನ: ರೋಣು ಮಜುಂದಾರ್, ಪಿಯಾನೊ ವಾದನ: ಅನಿಲ್ ಶ್ರೀನಿವಾಸನ್, ಆಯೋಜನೆ: ಬೆಂಗಳೂರು ಕಿಡ್ನಿ ಫೌಂಡೇಷನ್, ಸ್ಥಳ: ಜೆ.ಎಸ್.ಎಸ್. ಸಭಾಂಗಣ, ಜಯನಗರ, ಬೆಳಿಗ್ಗೆ 10ರಿಂದ

'ಸಾವು' ಕೃತಿ ಬಿಡುಗಡೆ: ಜಗದೀಶ ಶರ್ಮ, ವಿಶ್ವೇಶ್ವರ ಭಟ್, ರವಿ ಹೆಗಡೆ, ಕುಸುಮಾ ಆಯರಹಳ್ಳಿ, ಗೋಪಾಲಕೃಷ್ಣ ಕುಂಟಿನಿ, ಉಪಸ್ಥಿತಿ: ಜೋಗಿ, ಜಮೀಲ್ ಸಾವಣ್ಣ, ಆಯೋಜನೆ: ಸಾವಣ್ಣ ಪ್ರಕಾಶನ, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಬೆಳಿಗ್ಗೆ 10.30

52ನೇ ಸಂಗೀತ ಸಮ್ಮೇಳನದ ಸಮಾರೋಪ ಸಮಾರಂಭ: ಸಾನ್ನಿಧ್ಯ: ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, 'ಸಂಗೀತ ಕಲಾರತ್ನ' ಪ್ರಶಸ್ತಿ: ವಿದ್ವಾನ್ ಡಿ. ಬಾಲಕೃಷ್ಣ, 'ಕರ್ನಾಟಕ ಕಲಾಚಾರ್ಯ' ಪ್ರಶಸ್ತಿ: ವಿದ್ವಾನ್ ಎಂ. ವಾಸುದೇವ ರಾವ್, ಮುಖ್ಯ ಅತಿಥಿ: ಮಹೇಶ ಜೋಶಿ, ಉಪಸ್ಥಿತಿ: ಎಂ.ಆರ್. ವಿ. ಪ್ರಸಾದ್, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಬೆಳಿಗ್ಗೆ 10.30

ಹರಿವರಾಸನಂ ಶತಮಾನೋತ್ಸವ ಉದ್ಘಾಟನಾ ಸಮಾರಂಭ: ಉದ್ಘಾಟನೆ: ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಆಶೀರ್ವಚನ: ಅಟವೀ ಶಿವಲಿಂಗ ಸ್ವಾಮೀಜಿ, ಸಾನ್ನಿಧ್ಯ: ಕುಮಾರ ಚಂದ್ರಶೇಖರ ಸ್ವಾಮೀಜಿ, ಪ್ರಭು ಚನ್ನಬಸವ ಸ್ವಾಮೀಜಿ, ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ದಿನೇಶ್ ಗುರೂಜಿ, ಆಯೋಜನೆ: ಶಬರಿಮಲೈ ಅಯ್ಯಪ್ಪ ಸೇವಾ ಸಮಾಜಂ, ಸ್ಥಳ: ಪುಟ್ಟಣ್ಣಚೆಟ್ಟಿ ಟೌನ್‌ಹಾಲ್, ಬೆಳಿಗ್ಗೆ 10.30

ಮೂರು ಪುಸ್ತಕಗಳು ಬಿಡುಗಡೆ: ಜಿ.ಎನ್. ರಂಗನಾಥ ರಾವ್ ಅವರ 'ಪುಟ್ಟ ಪಾದಗಳ ಪುಳಕ', ರವೀಂದ್ರ ಭಟ್ಟ ಅವರ 'ರಾಜಕಾರಣದಲ್ಲಿ ನಿಂಬೆ ಹಾಗಲ', ವೈ.ಎನ್. ಗುಂಡೂರಾವ್ ಅವರ 'ಘಮಘಮ ಮಸಾಲೆ ದೋಸೆ', ಪುಸ್ತಕಗಳ ಬಿಡುಗಡೆ: ಎಚ್.ಎಸ್. ವೆಂಕಟೇಶಮೂರ್ತಿ, ಮುಖ್ಯ ಅತಿಥಿಗಳು: ಎಚ್. ಡುಂಡಿರಾಜ್, ಸತೀಶ್ ಚಪ್ಪರಿಕೆ, ಆಯೋಜನೆ: ಅಂಕಿತ ಪುಸ್ತಕ, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)


ವೆಂಕಟೇಶ ಮೂರ್ತಿ

ಡಿವೈಯು ಮಹಿಳಾ ಮತ್ತು ಮಕ್ಕಳ ಆರೈಕೆ ಕೇಂದ್ರದ ಉದ್ಘಾಟನೆ: ರವಿಚಂದ್ರನ್, ಪ್ರಿಯಾಂಕಾ ಉಪೇಂದ್ರ, ಆಯೋಜನೆ ಮತ್ತು ಸ್ಥಳ: ಡಿವೈಯು ವುಮನ್ ಆ್ಯಂಡ್ ಚೈಲ್ಡ್ ಕೇರ್, 14ನೇ ಮುಖ್ಯ ರಸ್ತೆ, ಮ್ಯಾಕ್‌ಡೊನಾಲ್ಡ್ ಹತ್ತಿರ, ಸೆಕ್ಟರ್ 3, ಎಚ್‌ಎಸ್‌ಆರ್ ಲೇಔಟ್. ಬೆಳಿಗ್ಗೆ 10.


ಪ್ರಿಯಾಂಕಾ ಉಪೇಂದ್ರ

ಪುಸ್ತಕಗಳ ಲೋಕಾರ್ಪಣೆ: 'ಪಾರ್ಶ್ವವಾಯುವಿನಿಂದ ಚೈತನ್ಯದೆಡೆಗೆ', 'ಶ್ರೀಮದಾಧ್ಯಾತ್ಮ ರಾಮಾಯಣ', 'ಅದ್ಭುತ ರಾಮಾಯಣ', 'ಸಹೃದಯ', ಕೃತಿಗಳ ಲೋಕಾರ್ಪಣೆ: ಎಲ್.ಎ. ರವಿಸುಬ್ರಹ್ಮಣ್ಯ, ಕೃತಿಗಳ ಪರಿಚಯ: ಡಾ.ಸಿ.ಆರ್. ಚಂದ್ರಶೇಖರ್, ಎಸ್. ರಂಗನಾಥ್, ಮುಖ್ಯ ಅತಿಥಿಗಳು: ಜಿ.ಟಿ. ಸುಭಾಷ್, ಭಾರತಿ ಶಂಕರ್, ಆಯೋಜನೆ: ಪಟ್ಟಣಗೆರೆ ರಂಗನಾಥ ಶಾಸ್ತ್ರಿ ಕೃಷ್ಣವೇಣಮ್ಮ ಮೆಮೋರಿಯಲ್ ಟ್ರಸ್ಟ್, ಸ್ಥಳ: ಯುವಕ ಸಭಾಂಗಣ, ಜಯನಗರ, ಬೆಳಿಗ್ಗೆ 11

ಶೋಭಾ ಗುನ್ನಾಪೂರ ಅವರ 'ಭೂಮಿಯ ಋಣ' ಕಥಾಸಂಕಲನ ಬಿಡುಗಡೆ: ನಟರಾಜ್ ಹುಳಿಯಾರ್, ಅಧ್ಯಕ್ಷತೆ: ಬರಗೂರು ರಾಮಚಂದ್ರಪ್ಪ, ಮುಖ್ಯ ಅತಿಥಿಗಳು: ಎಂ.ಎಸ್. ಆಶಾದೇವಿ, ಮುದಿರಾಜ್ ಬಾಣದ್, ಆಯೋಜನೆ: ಸಾಮಾಜಿಕ ನ್ಯಾಯಕ್ಕಾಗಿ ವಕೀಲರು ಕರ್ನಾಟಕ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

ರಾಮಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ವಜ್ರಮಹೋತ್ಸವ: ಮುಖ್ಯ ಅತಿಥಿಗಳು: ಧರ್ಮೇಂದ್ರ ಪ್ರಧಾನ್, ಪ್ರಲ್ಹಾದ ಜೋಶಿ, ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ರಾಜ್ಯಪಾಲ ಥಾವರಚಂದ್ ಗೆಹಲೋತ್, ಉಪಸ್ಥಿತಿ: ಎಂ.ಆರ್. ಜಯರಾಂ, ಎಂ.ಆರ್. ಸೀತಾರಾಮ್, ಎಂ.ಆರ್. ರಾಮಯ್ಯ, ಆಯೋಜನೆ ಮತ್ತು ಸ್ಥಳ: ಕ್ವಾಡ್ರ್ಯಾಂಗಲ್, ರಾಮಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಎಂ.ಎಸ್. ಆರ್. ನಗರ, ಬೆಳಿಗ್ಗೆ 11

'ಮಿಡ್ಲ್ ಮ್ಯಾನ್' ಅನುವಾದಿತ ಕೃತಿ ಬಿಡುಗಡೆ: ದೊಡ್ಡರಂಗೇಗೌಡ ಅವರ 'ಮಧ್ಯವರ್ತಿ' ಕೃತಿಯ ಅನುವಾದ, ಕೃತಿ ಬಿಡುಗಡೆ: ಸಿ.ಎನ್. ರಾಮಚಂದ್ರನ್, ಕೃತಿ ಕುರಿತು ಮಾತು: ಎಂ.ಸಿ. ಪ್ರಕಾಶ್, ಉಪಸ್ಥಿತಿ: ದೊಡ್ಡರಂಗೇಗೌಡ, ನಿಡಸಾಲೆ ಪುಟ್ಟಸ್ವಾಮಯ್ಯ, ಅನುವಾದಕರು: ಎಚ್. ಎಸ್.ಎಂ. ಪ್ರಕಾಶ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಗೀತಾಂಜಲಿ ಪಬ್ಲಿಕೇಷನ್ಸ್, ಸ್ಥಳ: ಬಿ.ಎಂ.ಶ್ರೀ. ಸಭಾಂಗಣ, ಎನ್.ಆರ್. ಕಾಲೊನಿ, ಬೆಳಿಗ್ಗೆ 11


'ಶಿರೋಮಣಿ' ಕೃತಿ ಲೋಕಾರ್ಪಣೆ ಹಾಗೂ ಅಭಿನಂದನಾ ಸಮಾರಂಭ: ಸಾನ್ನಿಧ್ಯ: ಶಿವಸುಜ್ಞಾನ ತೀರ್ಥ ಸ್ವಾಮೀಜಿ, ಉದ್ಘಾಟನೆ: ಡಾ.ಸಿ.ಆರ್. ಚಂದ್ರಶೇಖರ್, ಅಧ್ಯಕ್ಷತೆ: ಪಿ.ಎನ್. ಶ್ರೀನಿವಾಸಾಚಾರಿ, ಅಭಿನಂದನಾ ಗ್ರಂಥ ಬಿಡುಗಡೆ: ಎಚ್.ಎನ್. ನಾಗಮೋಹನದಾಸ್, ಜನ್ಮದಿನದ ಅಮೃತೋತ್ಸವ ಅಭಿನಂದನೆ: ಎನ್.ವಿ. ಅಂಬಾಮಣಿಮೂರ್ತಿ, ಆಯೋಜನೆ: ಪ್ರೊ.ಎನ್.ವಿ. ಅಂಬಾಮಣಿಮೂರ್ತಿ ಅಭಿನಂದನಾ ಸಮಿತಿ, ಸ್ಥಳ: ನಗರ ಕೇಂದ್ರ ಗ್ರಂಥಾಲಯ ಸಭಾಂಗಣ, ಪಶ್ಚಿಮ ವಲಯ, ಹಂಪಿನಗರ, ಮಧ್ಯಾಹ್ನ 3

ಶಿವರಾಮ ಕಾರಂತರ 121ನೇ ಜನ್ಮದಿನಾಚರಣೆ: ಶಿವರಾಮ ಕಾರಂತರ ಸ್ಮರಣೆ ಹಾಗೂ ಉಪನ್ಯಾಸ, ವಿಷಯ: ಕಾರಂತರ ಕಾದಂಬರಿಗಳ ಕೆಲವು ಒಳನೋಟಗಳು, ಉಪನ್ಯಾಸಕರು: ಕರ್ಕಿ ಕೃಷ್ಣಮೂರ್ತಿ, ವಿಷಯ: ಸಾಹಿತ್ಯಿಕ ವ್ಯಕ್ತಿತ್ವವಾಗಿ ಕಾರಂತರು, ಉಪನ್ಯಾಸಕರು: ವಿಕ್ರಮ ಹತ್ವಾರ, ಆಯೋಜನೆ: ಶಿವರಾಮ ಕಾರಂತ ವೇದಿಕೆ, ಸ್ಥಳ: ತರಳಬಾಳು ಕೇಂದ್ರ, ಆರ್. ಟಿ.ನಗರ, ಸಂಜೆ 4

ಪದವಿ ಪ್ರದಾನ ದಿನ: ಮುಖ್ಯ ಅತಿಥಿಗಳು: ಅಶ್ವಿನ್ ನೊರೊಹಾನ್, ವೈ.ಎಸ್.ಆರ್. ಮೂರ್ತಿ, ಆಶಾ ಅಯ್ಯಂಗಾರ್, ಕೆ.ಎ. ಸುಜಿತ್ ಚಂದನ್, ಅಧ್ಯಕ್ಷತೆ: ಎಂ.ಪಿ. ಶ್ಯಾಮ್, ಆಯೋಜನೆ: ಸಭಾಂಗಣ, ಆರ್‌ವಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಜೆ.ಪಿ. ನಗರ, ಸಂಜೆ 4

ಸಂಗೀತೋತ್ಸವ ಹಾಗೂ ಗೌರವ ಪುರಸ್ಕಾರ: ಉದ್ಘಾಟನೆ: ವೇಮಗಲ್ ನಾರಾಯಣ ಸ್ವಾಮಿ, ಶ್ರೀನಿವಾಸ ಜಿ. ಕಪ್ಪಣ್ಣ, ವಿಶೇಷ ಆಹ್ವಾನಿತರು: ರವಿ ಸುಬ್ರಹ್ಮಣ್ಯ, ತಿಮ್ಮೇಗೌಡ, ಆಯೋಜನೆ: ಅಂಕುರ ಸಾಂಸ್ಕೃತಿಕ ಟ್ರಸ್ಟ್, ಸ್ಥಳ: ಸ್ವಾಮಿ ವಿವೇಕಾನಂದ ವಿದ್ಯಾ ಶಾಲೆ, ಶ್ರೀನಗರ, ಸಂಜೆ 4

'ಕನ್ನಡವೆಂದರೆ ಬರಿ ನುಡಿಯಲ್ಲ' ರಾಜ್ಯಮಟ್ಟದ ವಿಚಾರಸಂಕಿರಣ ಸಮಾರೋಪ ಸಮಾರಂಭ: ಮುಖ್ಯ ಅತಿಥಿ: ನ್ಯಾ. ಸಂತೋಷ್ ಹೆಗ್ಡೆ, ಅತಿಥಿಗಳು: ಎ.ಎಚ್. ರಾಮರಾವ್, ನಾಗರಾಜ ರೆಡ್ಡಿ, ಎಂ. ತಿಮ್ಮಯ್ಯ, ಕೆ. ಮೋಹನ್ ರಾವ್, ಅಧ್ಯಕ್ಷತೆ: ಸಿ.ಕೆ. ರಾಮೇಗೌಡ, ಯಕ್ಷಗಾನ ಪ್ರದರ್ಶನ: 'ಜಾಂಬವತಿ ಕಲ್ಯಾಣ', ಯಕ್ಷಗಾನ ಪ್ರಸ್ತುತಿ: ಯಕ್ಷಸಿಂಚನ ಟ್ರಸ್ಟ್, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಹಾಲ್, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 4.30


ಸಂತೋಷ್ ಹೆಗ್ಡೆ

ಮೂರು ಕೃತಿಗಳ ಲೋಕಾರ್ಪಣೆ: 'ಕಥಾಭರಣ', 'SOME ದರ್ಶನ', 'ಅಡ್ಡಿತುಪ ಬಕ್ಕಜಬಿನ್ನಿ ಮತ್ತು ಇತರ ಲಲಿತ ಪ್ರಬಂಧಗಳು', ಪುಸ್ತಕಗಳ ಬಿಡುಗಡೆ: ಕ್ಯಾಪ್ಟನ್ ಗೋಪಿನಾಥ್, ಅಧ್ಯಕ್ಷತೆ: ಅಲಕಾ ತೀರ್ಥಹಳ್ಳಿ, ಕೃತಿಗಳ ಪರಿಚಯ: ಪೂರ್ಣಿಮಾ ಮಾಳಗಿಮನಿ, ಅಗ್ರಹಾರ ಕೃಷ್ಣಮೂರ್ತಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಆಯೋಜನೆ: ಸಾಹಿತ್ಯಲೋಕ ಪಬ್ಲಿಕೇಷನ್ಸ್, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

'ಕನಕಾಂಗಿ ಕಲ್ಯಾಣ' ಯಕ್ಷಗಾನ ಪ್ರದರ್ಶನ: ಆಯೋಜನೆ: ಯಕ್ಷತರಂಗ ಬೆಂಗಳೂರು, ಸ್ಥಳ: ಪ್ರಜ್ಞಾ ಭಾರತಿ ಶಾಲೆ, ದೊಡ್ಡಕಲ್ಲಸಂದ್ರ, ಸಂಜೆ 6.30

ರಂಗ ಸಂಸ್ಕೃತಿ ಟ್ರಸ್ಟ್ ಉದ್ಘಾಟನೆ: ಆಂಜನೇಯ, ಅಧ್ಯಕ್ಷತೆ: ಗುರುರಾಜ್ ಹೊಸಕೋಟೆ, ಮುಖ್ಯ ಅತಿಥಿಗಳು: ಕೆ.ಜಿ. ನಾಗರಾಜ್, ಎಚ್. ತುಕಾರಾಂ, ಶಿವಣ್ಣಗೌಡ, ಶಿವರಾಜ್ ಗೌಡ, ನಾಟಕ ಪ್ರದರ್ಶನ: ಸ್ಮಶಾನ ಕುರುಕ್ಷೇತ್ರ, ಆಯೋಜನೆ: ರಂಗ ಸಂಸ್ಕೃತಿ ಟ್ರಸ್ಟ್, ಸ್ಥಳ: ವಾಸುದೇವ ಸಭಾಂಗಣ, ಕನ್ಯಾಕುಮಾರಿ ಶಾಲೆ, ಮಲ್ಲತ್ತಹಳ್ಳಿ, ಸಂಜೆ 6.30

ಪ್ರಜಾವಾಣಿ @75 ಅಮೃತ ಮಹೋತ್ಸವ

ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು pvat75@prajavani.co.in ಗೆ ಕಳುಹಿಸಿ
ಪೂರ್ಣ ಪ್ರತಿಕ್ರಿಯೆಗಳನ್ನು prajavani.net ನಲ್ಲಿ ನೋಡಬಹುದು

ಅಭಿನಂದನೆಗಳು...

'ಪ್ರಜಾವಾಣಿ' ದಿನಪತ್ರಿಕೆಯ ಅಮೃತ ಮಹೋತ್ಸವದ ಸಂಭ್ರಮಕ್ಕೆ ಹಾರ್ದಿಕ ಶುಭಾಶಯಗಳು. ಪ್ರಜಾವಾಣಿ ದಿನಪತ್ರಿಕೆಯ ಮೊದಲ ಸಂಚಿಕೆಯಿಂದ ಹಿಡಿದು ಇಂದಿನವರೆಗೂ ನಿರಂತರವಾಗಿ 75 ವರ್ಷಗಳು ಪತ್ರಿಕೆಯನ್ನು ಓದಿದ ಸಂತೋಷ ನನ್ನದಾಗಿದೆ.



ನನಗೀಗ 88 ವರ್ಷ. 12 ವರ್ಷದವಳಿದ್ದಾಗ ಶಿವಮೊಗ್ಗ ಜಿಲ್ಲೆಯ ರಿಪ್ಪನ್ ಪೇಟೆಯಲ್ಲಿ 6ನೇ ತರಗತಿಯಲ್ಲಿ ಓದುತ್ತಿದ್ದೆ. ಆಗ ನಮ್ಮ ಮನೆಗೆ 'ತಾಯಿ ನಾಡು' ದಿನಪತ್ರಿಕೆ ಬರುತ್ತಿತ್ತು, ನಾನು ಅದನ್ನ ಓದುತ್ತಿದ್ದೆ. ನನ್ನ ತಂದೆ ವಿದ್ಯಾವಂತರು. ನನ್ನ ತಾಯಿ ತಕ್ಕಮಟ್ಟಿಗೆ ವಿದ್ಯಾವಂತೆ. ಮಕ್ಕಳಿಗೆ ವಿದ್ಯಾಭ್ಯಾಸ ಪ್ರಾರಂಭಿಸುತ್ತಿದ್ದಂತೆ, ಬರುತ್ತಿದ್ದ ದಿನಪತ್ರಿಕೆಯ ಶೀರ್ಷಿಕೆಗಳನ್ನು ಓದಿಸಿ, ಅನಂತರ ಪತ್ರಿಕೆಯನ್ನು ಓದಿ ಸ್ವಲ್ಪ ಮಟ್ಟಿಗೆ ಅರ್ಥ ಮಾಡಿಕೊಳ್ಳಲು ಹೇಳಿಕೊಡುತ್ತಿದ್ದರು.

ನಾನು ರಿಪ್ಪನ್ ಪೇಟೆಯಲ್ಲಿದ್ದಾಗ 15.10.1948ರಂದು ಪ್ರಜಾವಾಣಿಯ ಮೊದಲ ಸಂಚಿಕೆ ಸಂಜೆ ಐದು ಗಂಟೆಗೆ ನಮ್ಮ ಮನೆ ತಲುಪಿತು. ಆ ಮನೆ ನನ್ನ ಅಕ್ಕ ಭಾವನ ಮನೆಯಾಗಿತ್ತು. ಆ ವೇಳೆಗೆ ತಂದೆಯನ್ನು ಕಳೆದುಕೊಂಡಿದ್ದ ನಾನು, ಅಕ್ಕನ ಮನೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದೆ. ನನ್ನ ಭಾವ ಡಾ.ಪಿ ಪಾಂಡುರಂಗ ನಾಯಕರು ಅಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದರು. ಅಂದು ನಮ್ಮ ಮನೆಯಲ್ಲಿ ಹಬ್ಬದ ವಾತಾವರಣವಿತ್ತು. ಒಂದು ಮಗು ಜನನವಾದರೆ ಎಂಥ ಸಡಗರ ಇರುವುದೋ ಅಂತ ಸಡಗರ ನಮ್ಮಲ್ಲಿ ಉಂಟಾಗಿತ್ತು. ನನ್ನ ಅಕ್ಕ ಸುಮಂಗಲಾದೇವಿ, ಮೈಸೂರುಪಾಕು ಪುಳಿಯೋಗರೆ ಹಾಗೂ ಆಂಬೊಡೆಯನ್ನು ಮಾಡಿಕೊಂಡು ಪ್ರಜಾವಾಣಿ ಪತ್ರಿಕೆಯು ಬಂದ ಒಡನೆ ಎಲ್ಲರಿಗೂ ಹಂಚಲು ಕಾಯುತ್ತಿದ್ದರು. ಆ ಪತ್ರಿಕೆ ಶಿವಮೊಗ್ಗ ತಲುಪಿ, ಅಲ್ಲಿಂದ ರಿಪ್ಪನ್ ಪೇಟೆಗೆ ಬರಬೇಕಿತ್ತು, ಹಾಗಾಗಿ ಪತ್ರಿಕೆ ಸಂಜೆ 5ಕ್ಕೆ ಮನೆ ತಲುಪಿದಾಗ ಎಲ್ಲರಿಗೂ ಸಂಭ್ರಮವೋ ಸಂಭ್ರಮ. 15 ರಿಂದ 20 ಜನರಿದ್ದ ಗುಂಪಿಗೆ ನನ್ನ ಭಾವ ಪತ್ರಿಕೆಯನ್ನು ತೋರಿಸಿ ಮುಖ್ಯ ವಿಷಯಗಳನ್ನು ಜೋರಾಗಿ ಓದಿ ಹೇಳಿದರು. ಎಲ್ಲರೂ ಸಡಗರಿಸಿ ಪ್ರಜಾವಾಣಿಯ ಸುದ್ದಿಯನ್ನ ಕೇಳಿದರು. ತಿಂಡಿ ಕಾಫಿಯ ನಂತರ ಗುಂಪು ಚದುರಿತು. ಒಂದು ದಿನಪತ್ರಿಕೆಯ ಮೊದಲ ಸಂಚಿಕೆಗೆ ಈ ರೀತಿಯ ಹಬ್ಬದ ಆಚರಣೆ ಎಂತ ಸುಸಂಸ್ಕೃತ ವಾತಾವರಣ ಸಮಾಜದಲ್ಲಿ ಇತ್ತು ಎಂಬುದನ್ನು ಹೇಳುತ್ತದೆ. ಮನೆಯಲ್ಲಿ ಪ್ರಜಾವಾಣಿ ಪತ್ರಿಕೆಯ ಆನಂದ ಉಳಿದಿದ್ದ ಆ ದಿನವನ್ನು ನಾನೆಂದೂ ಮರೆಯಲಾರೆ.

ಪ್ರಜಾವಾಣಿ ಪತ್ರಿಕೆಯ ಮೂಲಕ ವಸ್ತುನಿಷ್ಠ ಮಾಹಿತಿಯ ಪ್ರಕಟಣೆಗಾಗಿ ನಿರಂತರ ದುಡಿಯುತ್ತಿರುವ ಸಂಪಾದಕರಿಗೂ, ಪತ್ರಿಕಾ ಬಳಗಕ್ಕೂ ನನ್ನ ಹಾರ್ದಿಕ ಅಭಿನಂದನೆಗಳು. 75 ವರ್ಷ ನಾಡಿನ ಓದುಗರ ಜ್ಞಾನ ವೃದ್ಧಿಸುತ್ತ ಬಂದಿರುವ ಪತ್ರಿಕೆ ಇನ್ನೂ ನೂರಾರು ವರ್ಷ ಮುನ್ನಡೆಯಲಿ ಎಂದು ಹಾರೈಸುವೆ.

ಡಾ. ಕಮಲಾ ಹಂಪನಾ, ಬೆಂಗಳೂರು

ಓದದೇ ದಿನ ಆರಂಭವಾಗದು

ಕಳೆದ ಮೂರು ದಶಕಗಳಲ್ಲಿ ಪ್ರಜಾವಾಣಿ ನನ್ನ ಎಷ್ಟೊಂದು ಬರೆಹಗಳನ್ನು ಪ್ರಕಟಿಸಿತು! ಅದರಲ್ಲೂ 'ನಡೆದಷ್ಟೂ ನಾಡು' ಅಂಕಣ ಬಹಳ ಓದುಗರನ್ನು ಒದಗಿಸಿತು. ಹಿತ್ತಲಜಗತ್ತು, ಸಾರುಸಹಸ್ರಾರು, ಮುಂತಾದ ಲಲಿತ ಪ್ರಬಂಧಗಳು ಇಲ್ಲಿ ಬಂದವು. ಪ್ರವಾಸಕಥನ ಹಾಗೂ ವೈಚಾರಿಕ ಬರಹಗಳು ಬೆಳಕು ಕಂಡವು.



ನಾನು ಲೇಖಕನಾಗುವಿಕೆಯಲ್ಲಿ ಪ್ರಜಾವಾಣಿಯ ಪಾತ್ರ ಮಹತ್ವದ್ದು. ಇದನ್ನು ಓದದೇ ನನ್ನ ದಿನ ಆರಂಭವಾಗುವುದಿಲ್ಲ. ಇದನ್ನು ಕೃತಜ್ಞತೆಯಿಂದ ನೆನೆಯುತ್ತೇನೆ. ಇದರ ಅಮೃತವರ್ಷದಲ್ಲಿ ಹಾರೈಸುತ್ತೇನೆ.

ರಹಮತ್ ತರೀಕೆರೆ, ಹೊಸಪೇಟೆ

ನಾಡನ್ನು ಬೆಳೆಸಿದ ಪತ್ರಿಕೆ

ಪ್ರಜಾವಾಣಿಗೆ ಈಗ 75ರ ಸಂಭ್ರಮ. ಅನೇಕ ಏಳುಬೀಳುಗಳ ನಡುವೆಯೂ ಈ ಪತ್ರಿಕೆ ತನ್ನ ಘನತೆಯನ್ನು ಉಳಿಸಿಕೊಂಡೇ ಬಂದಿದೆ. ಕನ್ನಡ ನವ್ಯ ಸಾಹಿತ್ಯಕ್ಕೆ ವೇದಿಕೆಯಾಗಿ ನಿಂತ ಪ್ರಜಾವಾಣಿ ಮುಂದೆ ದೇವನೂರ ಮಹಾದೇವ ಅವರನ್ನೇ ಅತಿಥಿ ಸಂಪಾದಕರನ್ನಾಗಿ ಮಾಡಿ ತನ್ನ ಜನಪರತೆಯನ್ನು ಮೆರೆಯಿತು.



ಕನ್ನಡ ಭಾಷೆಯ ಬೆಳವಣಿಗೆಗೆ ಈ ಪತ್ರಿಕೆ ನೀಡಿದ ಕೊಡುಗೆಯ ಬಗ್ಗೆ ಯಾರಾದರೂ ಒಂದು ಸಂಶೋಧನಾ ಲೇಖನವನ್ನೇ ಬರೆಯಬಹುದು. ಪತ್ರಿಕೆಯು ಅನೇಕ ಜನಪರ ಹೋರಾಟಗಳನ್ನೂ ಹುಟ್ಟು ಹಾಕಿದೆ ಮತ್ತು ಬೆಂಬಲಿಸಿದೆ. ಇವತ್ತಿನ ಬಿಕ್ಕಟ್ಟಿನ ದಿನಗಳಲ್ಲಿ ಪತ್ರಿಕೆಯ ಅಂಕಣಗಳು ಮತ್ತು ವಸ್ತುನಿಷ್ಠ ವಿಶ್ಲೇಷಣೆಗಳು ನಿಜಕ್ಕೂ ಚೇತೋಹಾರಿಯಾಗಿದ್ದು ನಮ್ಮ ಬೆಳಗನ್ನು ಅರ್ಥಪೂರ್ಣವಾಗಿಸುತ್ತಿವೆ. ಪ್ರಜಾವಾಣಿಯ ದಿಟ್ಟ ಸಂಪಾದಕೀಯಗಳು ನಾಡನ್ನು ಬೆಳೆಸಿವೆ. 75 ತುಂಬಿದ ಈ ಸಂದರ್ಭದಲ್ಲಿ ಪತ್ರಿಕೆಗೆ ಶುಭಾಶಯಗಳು.

ಡಾ. ಪುರುಷೋತ್ತಮ ಬಿಳಿಮಲೆ, ನವದೆಹಲಿ

ಓದುಗರ ಪ್ರಜ್ಞೆಗೆ ಸಾಣೆ

ಅಮೃತಮಹೋತ್ಸವದ ಸಂಭ್ರಮದಲ್ಲಿರುವ ಪ್ರಜಾವಾಣಿ ಪತ್ರಿಕೆಗೆ ನನ್ನ ಶುಭ ಕಾಮನೆಗಳು. ಸುಮಾರು ವರ್ಷಗಳಿಂದ ಪತ್ರಿಕೆಯನ್ನು ಓದುತ್ತಿದ್ದು, ಪ್ರಜಾವಾಣಿಯು ಅನ್ಯಾಯವನ್ನು ಖಂಡಿಸುವ, ಓದುಗರ ಪ್ರಜ್ಞೆಗೆ ಸಾಣೆ ಹಿಡಿಯವ, ಸತ್ಯದ ಪರ ಜನಾಭಿಪ್ರಾಯ ರೂಪಿಸುವ ಕಾರ್ಯವನ್ನು ಮಾಡುತ್ತಿದೆ. ಯಾವುದೇ ವಿಷಯದ ಕುರಿತು ವಿಮರ್ಶಿಸುವ ಬದ್ಧತೆ, ಶಿಸ್ತು, ಸಂಯಮ, ಜವಾಬ್ದಾರಿಯನ್ನು ಪ್ರಜಾವಾಣಿ ಪತ್ರಿಕೆ ಹೊಂದಿದೆ.


ಬಾಬು ಶಿರಮೋಜಿ, ಬೆಳಗಾವಿ

ಕಟ್ಟಕಡೆಯ ವ್ಯಕ್ತಿಯ ಧ್ವನಿ

ಏಳು ದಶಕಗಳಿಂದ ಸಮಾಜದ ಕಟ್ಟಕಡೆಯ ವ್ಯಕ್ತಿಯ ಧ್ವನಿಯಾಗಿ ಪತ್ರಿಕೆಯು ಕಾರ್ಯನಿರ್ವಹಿಸಿದೆ. ಪತ್ರಿಕಾ ಧರ್ಮವನ್ನು ಎತ್ತಿ ಹಿಡಿದಿದೆ. ಲಕ್ಷಾಂತರ ಸ್ಪರ್ಧಾತ್ಮಕ ಪರೀಕ್ಷೆಯ ಆಕಾಂಕ್ಷಿಗಳಿಗೆ ಆಶಾಕಿರಣವಾಗಿದೆ. ಬದಲಾಗುತ್ತಿರುವ ತಂತ್ರಜ್ಞಾನ ವಿದ್ಯಮಾನಗಳಿಗೆ ಹೊಂದಿಕೊಂಡು ತನ್ನದೇ ಆದ ಆದ ಛಾಪು ಮೂಡಿಸಿದೆ. ಪತ್ರಿಕೆ ಇನ್ನಷ್ಟು ಎತ್ತರಕ್ಕೆ ಬೆಳೆಯಲಿ.

ಸಿದ್ದಣ್ಣ ಪೂಜಾರಿ ಶಹಾಪುರ, ಯಾದಗಿರಿ

ಅಭಿನಂದನೆ...




ನಿಷ್ಪಕ್ಷಪಾತ ವರದಿ, ನಿಖರ ಸುದ್ದಿ, ರಾಜ್ಯದ ಮತ್ತು ದೇಶದ ಸಮಗ್ರ ಸುದ್ದಿಯ ಅನಾವರಣದ ಮೂಲಕ 74 ವರ್ಷಗಳಿಂದ ಪ್ರಜಾವಾಣಿ ದಿನಪತ್ರಿಕೆ ಸುದೀರ್ಘವಾಗಿ ಕಾರ್ಯನಿರ್ವಹಿಸುತ್ತಿದೆ. ಇದರ ಪ್ರತಿಫಲವೇ ಇಂದು ಅದು ಅಮೃತ ಮಹೋತ್ಸವಕ್ಕೆ ಕಾಲಿಟ್ಟಿದೆ. ಹೀಗಾಗಿ ಪ್ರಜಾವಾಣಿ ದಿನಪತ್ರಿಕೆಯ ಸಮಸ್ತ ಆಡಳಿತ ವರ್ಗಕ್ಕೆ ನನ್ನ ಹೃತ್ಪೂರ್ವಕ ಅಭಿನಂದನೆಗಳು.

ಮುರುಗೇಶ ಆರ್.ನಿರಾಣಿ, ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ

ಜಾತ್ಯತೀತ ನಿಲುವಿನ ಸಮದರ್ಶಿ ಪತ್ರಿಕೆ

ನನ್ನ ವಿದ್ಯಾರ್ಥಿ ದಿನಗಳಿಂದ ನನ್ನ ಅರಿವನ್ನು ವಿಸ್ತರಿಸಿದ್ದು 'ಪ್ರಜಾವಾಣಿ'. ಪ್ರಜಾಪ್ರಭುತ್ವದ ಜಾತ್ಯತೀತ ನಿಲುವಿನ ಸಮದರ್ಶಿ ಪತ್ರಿಕೆ. ನಾಡಿಗೊಂದು ಹೆಮ್ಮೆ. ಇದರ ಅಮೃತಮಹೋತ್ಸವ ಸಡಗರ ನನಗೆ, ನಾಡಿಗೆ ಒಂದು ಹಬ್ಬ.



ಡಾ.ಜಿ.ಕೃಷ್ಣಪ್ಪ, ಮತ್ತಿಕೆರೆ, ಬೆಂಗಳೂರು

ತಲೆಮಾರುಗಳ ಮನಗೆದ್ದ ಸ್ನೇಹಿತ

ಎಪ್ಪತ್ತೈದಕ್ಕೆ ಕಾಲಿಡುತ್ತಿರುವ ಪ್ರಜಾವಾಣಿ ಪತ್ರಿಕೆಯ ಜತೆಗೇ ನಾನೂ ಬೆಳೆದಿರುವೆ, ಬೆಳೆಯುತ್ತಿರುವೆ. ದಶಕಗಳಿಂದ ನಮ್ಮ ಜೊತೆಯಿರುವ, ಈ ಪತ್ರಿಕೆಯೆಂದರೆ ವಿಶೇಷ ಪ್ರೀತಿಯೂ ಹೌದು. ಬೆಳಿಗ್ಗೆ, ನಿಜವಾದ ಅರ್ಥದಲ್ಲಿ ಶುರುವಾಗುವುದೇ ಕಾಫಿ ವಿತ್ ಪ್ರಜಾವಾಣಿಯೊಂದಿ! ನಾಲ್ಕು ತಲೆಮಾರುಗಳ ಮನಗೆದ್ದಿರುವ ಪ್ರಜಾವಾಣಿ ನಮ್ಮ ಮಟ್ಟಿಗೆ ಸ್ನೇಹಿತ, ದಾರ್ಶನಿಕ ಮತ್ತು ಮಾರ್ಗದರ್ಶಕ. ನಮ್ಮ ಮನೆಯ ಸದಸ್ಯರ ಪಟ್ಟಿಯಲ್ಲಿ ಪ್ರಜಾವಾಣಿ ಹೆಸರಿದೆ ಎಂಬ ಹೆಮ್ಮೆ ಇದೆ. ಪ್ರಜಾವಾಣಿ ನೂರರ ಮೈಲಿಗಲ್ಲನ್ನೂ ಅನಾಯಾಸವಾಗಿ ಮುಟ್ಟಲಿ ಎಂದು ಹೃತ್ಪೂರ್ವಕವಾಗಿ ಆಶಿಸುತ್ತೇನೆ.

ಕೆ.ವಿ.ರಾಜಲಕ್ಷ್ಮಿ, ಬೆಂಗಳೂರು

ಪ್ರಜಾವಾಣಿ ನಿಜ ಮನುಜ ಧ್ವನಿ

ಇಪ್ಪತ್ತು ವರ್ಷಗಳಿಂದ 'ಪ್ರಜಾವಾಣಿ'ಯನ್ನು ಓದುತ್ತಿದ್ದೇನೆ. ನಿಖರ ಹಾಗೂ ಅನಗತ್ಯ ವೈಭವೀಕರಣವಿಲ್ಲದ ಸುದ್ದಿಗಳು, ಯುಗಾದಿ- ಪ್ರಜಾವಾಣಿ ವಿಶೇಷ ಸಂಚಿಕೆಗಳು, ಮಹಿಳೆ- ಮಕ್ಕಳು, ವಿಜ್ಞಾನ-ತಂತ್ರಜ್ಞಾನ, ಕ್ರೀಡೆ- ಸಂಸ್ಕೃತಿಗೆ ಸಂಬಂಧಿಸಿದ ಹಾಗೂ ಜೀವಪರ ನಿಲುವಿನ ಗುಣಮಟ್ಟದ ಲೇಖನಗಳು ಒಂದೆಡೆಯಾದರೆ, ವಿಶಿಷ್ಟ ಲೇಖನ, ಕಥೆ-ಕವನಗಳು ಗಟ್ಟಿ ಬರಹಗಾರರನ್ನು ನಾಡಿಗೆ ಪರಿಚಯಿಸುತ್ತಿವೆ. ಪತ್ರಿಕೆಯ ತತ್ವ, ಸಿದ್ಧಾಂತಗಳು ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿ ಹಿಡಿದಿದ್ದು, ಯಾವುದೇ ಜಾತಿ, ಧರ್ಮ, ರಾಜಕೀಯದ ಕ್ಷುಲ್ಲಕಕ್ಕೊಳಗಾಗದೆ ನಿಷ್ಠೆ, ನಿರ್ಭಿಡೆಯ ನಡೆಯಾಗಿದೆ. ಇಲ್ಲಿ ಪ್ರಕಟವಾಗುವ ಪ್ರಚಲಿತ ವಿದ್ಯಮಾನಗಳ ಮಾಹಿತಿಯನ್ನು ನೋಟ್ಸ್ ಮಾಡಿಟ್ಟುಕೊಂಡು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಿ ಯಶಸ್ವಿಯಾದವರು ಬಹಳ. ಇಲ್ಲಿನ ಸಂಪಾದಕೀಯ ಪುಟದ ಲೇಖನಗಳು ಓದುಗರ ವೈಚಾರಿಕತೆಯ ವೃದ್ಧಿಗೆ ಸಹಕಾರಿಯಾಗಿವೆ.

ಇನ್ನು ಪ್ರತೇಕವಾಗಿ ಪ್ರಕಟಗೊಳ್ಳುತ್ತಿದ್ದ ನಾಲ್ಕು ಪುಟಗಳ ಪುರವಣಿಗಳು ಇತ್ತೀಚೆಗೆ ಪತ್ರಿಕೆಯ ಪುಟಗಳೇ ಆಗಿದ್ದು, ವಿಶೇಷವಾಗಿ ಹೊಸ ಮಕ್ಕಳ ಕಥೆ-ಕವಿತೆಗಳು ನಾಡಿನ ಚಿಣ್ಣರಿಗೆ ದಕ್ಕದಾಗಿವೆ ಎಂಬುದನ್ನು ಬಿಟ್ಟರೆ 'ಪ್ರಜಾವಾಣಿ' ನಿಜ ಮನುಜನ ಧ್ವನಿಯಾಗಿದೆ. ಗುಣಮಟ್ಟದಲ್ಲಿ ರಾಜಿಯಾಗದೆ ಪತ್ರಿಕೋದ್ಯಮದಲ್ಲಿ 75ನೇ ವರ್ಷದ ಮಹತ್ವದ ಮೈಲುಗಲ್ಲು ಮುಟ್ಟುತ್ತಿರುವ 'ಪ್ರಜಾವಾಣಿ' ಬದ್ಧತೆಯೊಂದಿಗೆ ನೂರಾರು ಹೆಜ್ಜೆಗಳನ್ನಿಟ್ಟು ಮುಂದೆ ಸಾಗಲಿ.

ಅಶೋಕ ವಿ. ಬಳ್ಳಾ, ಸೂಳೇಬಾವಿ

ನಿತ್ಯದ ಒಡನಾಡಿ


70ರ ದಶಕದ ಪ್ರಾಥಮಿಕ ಶಾಲಾ ದಿನಗಳಿಂದ 'ಪ್ರಜಾವಾಣಿ' ಇಂದಿಗೂ ನಿತ್ಯದ ಒಡನಾಡಿ ಯಾಗಿದೆ. ನಮ್ಮೂರಿಗೆ ಬರುತ್ತಿದ್ದದ್ದು ಆಗ 'ಪ್ರಜಾವಾಣಿ' ಮಾತ್ರ! ಶಾಲೆಯಲ್ಲಿ ದಿನವೂ ಬೆಳಿಗ್ಗೆ ಪ್ರಾರ್ಥನೆ ಮುಗಿದೊಡನೆ ಪತ್ರಿಕೆಯ ಪ್ರಮುಖ ಸುದ್ದಿ, ಬರಹ ದಿನವೂ ಒಬ್ಬಬ್ಬರು ವಿದ್ಯಾರ್ಥಿ ಓದಬೇಕಿತ್ತು ಎಲ್ಲರೆದುರು.



ಮನೆಯಲ್ಲಿ ದೊಡ್ಡವರು ಪತ್ರಿಕೆ ಓದುವಾಗ ನಾವು ಕ್ರಿಕೆಟ್, ಸಿನಿಮಾ ಪುಟ ನೋಡಲು, ಓದಲು ಅವರ ಹಿಂದೆ ನಿಂತು ಇಣುಕುತ್ತಿದ್ದವು!. ಅವರಿಗೆ ಅದು ಕಿರಿ ಕಿರಿಯಾಗಿ ಬೈಸಿಕೊಳ್ಳುತ್ತಿದ್ದವು. ಆದರೆ ಪತ್ರಿಕೆ ಬಸ್‌ನಲ್ಲಿ ಊರಿಗೆ ಬಂದೊಡನೆ ದಿನವೂ ಏಜೆಂಟರ ಬಳಿ ಸೈಕಲ್‌ನಲ್ಲಿ ಹೋಗಿ ನಾವೇ ತರಬೇಕಿತ್ತು ದೊಡ್ಡವರ ಆಣತಿಯಂತೆ! ಏಜೆಂಟರು ಮನೆಮನೆಗೆ ವಿತರಿಸಿ ನಮ್ಮಲ್ಲಿ ಬರುವಾಗ ತಡವಾಗುತ್ತಿತ್ತು ಎನ್ನುವ ಕಾರಣಕ್ಕೆ!. ಪತ್ರಿಕೆಯ ಬಂಡಲ್‌ಗಳು ಖಾಕಿ ಬಣ್ಣದ ದಪ್ಪ ಹಾಳೆಯಲ್ಲಿ ಪ್ಯಾಕ್ ಆಗಿ ಬರುತ್ತಿದ್ದು, ಹಿರಿಯ ಏಜೆಂಟ್ ಗುಂಡೂರಾಯರಿಂದ ಪಡೆದು ಆ ಖಾಕಿ ಹಾಳೆಗಳನ್ನು ಶಾಲಾ ಪುಸ್ತಕಗಳಿಗೆ ಬೈಂಡ್ ಹಾಕುತ್ತಿದ್ದವು!. ನನ್ನ ಬರವಣಿಗೆಗೆ ಸ್ಫೂರ್ತಿ ತಂದದ್ದು ಪ್ರಜಾವಾಣಿಯೇ. ಅಮೃತ ಮಹೋತ್ಸವ ಆಚರಿಸುತ್ತಿರುವ 'ಪ್ರಜಾವಾಣಿ' ಇಂದಿಗೂ ತನ್ನತನ, ತಾಜಾತನದ ಜತೆಗೆ ಕಾಲಕ್ಕೆ ತಕ್ಕ ತಂತ್ರಜ್ಞಾನ ಅಳವಡಿಸಿಕೊಂಡು ಓದುಗರ ಪ್ರೀತಿಗೆ ಪಾತ್ರವಾಗಿದೆ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ, ಶಿವಮೊಗ್ಗ ಜಿಲ್ಲೆ

ವೇದವ್ಯಾಸರ ಶಿವಪುರಾಣಸಾರ





ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 250

ವಸಿಷ್ಠ ಹೇಳಿದ ಅನರಣ್ಯನ ಕಥೆ

ವಸಿಷ್ಠಮುನಿ ಅನರಣ್ಯ ಚಕ್ರವರ್ತಿಯ ಕಥೆ ಹೇಳುತ್ತಾನೆ: ಅನರಣ್ಯ ಚಕ್ರವರ್ತಿಯು ಇಂದ್ರಸಾವರ್ಣಿ ಎಂಬ ಹದಿನಾಲ್ಕನೆಯ ಮನುವಿನ ವಂಶದಲ್ಲಿ ಜನಿಸಿದವ. ಅವನು ಸಪ್ತದ್ವೀಪಗಳಿಗೂ ರಾಜನಾಗಿದ್ದ. ಮಂಗಲಾರಣ್ಯನಿಂದ ಜನಿಸಿದ ಆತ ಮಹಾಶಿವಭಕ್ತನಾಗಿದ್ದ. ಅವನು ಭೃಗುಮುನಿಯನ್ನು ಪುರೋಹಿತನನ್ನಾಗಿ ಮಾಡಿಕೊಂಡು ನೂರು ಯಾಗಗಳನ್ನು ಮಾಡಿದ. ಈ ಪುಣ್ಯಫಲಕ್ಕಾಗಿ ದೇವತೆಗಳು ಅವನಿಗೆ ಇಂದ್ರಪದವಿ ಕೊಡಲು ಮುಂದಾದರೂ, ಆತ ಸ್ವೀಕರಿಸಲಿಲ್ಲ. ಅನರಣ್ಯರಾಜನಿಗೆ ನೂರು ಗಂಡುಮಕ್ಕಳಿದ್ದರೆ, ಪದ್ಮಾ ಎಂಬ ಒಬ್ಬಳೇ ಮಗಳಿದ್ದಳು. ಐವರು ಹೆಂಡತಿಯರಿದ್ದರು. ಮಗಳು ಪದ್ಮಾ ತಂದೆಯ ಪ್ರೀತಿಯಲ್ಲಿ ಬೆಳೆಯುತ್ತಾ ಯೌವನವತಿಯಾದಳು. ಅವಳಿಗೆ ಒಳ್ಳೆಯ ವರನನ್ನು ಹುಡುಕಲು ತನ್ನ ಗಂಡುಮಕ್ಕಳನ್ನು ಬೇರೆ ದೇಶಗಳಿಗೆ ಕಳುಹಿಸಿದ.

ಒಂದು ದಿನ, ಪಿಪ್ಪಲಾದ ಎಂಬ ಮಹರ್ಷಿ ತಪಸ್ಸು ಮುಗಿದಮೇಲೆ ತನ್ನ ಆಶ್ರಮಕ್ಕೆ ತೆರಳಲು ಉದ್ಯುಕ್ತನಾದ. ಆಗ ಅವನು ಓರ್ವ ಗಂಧರ್ವ ಮತ್ತವನ ಪತ್ನಿಯನ್ನು ಕಂಡ. ಅವರಿಬ್ಬರೂ ಶೃಂಗಾರದಲ್ಲಿ ಮುಳುಗಿದ್ದರು. ಅದನ್ನ ನೋಡಿ ಪಿಪ್ಪಲಾದನಿಗೆ ಕಾಮ ವಿಕಾರವಾಯಿತು; ತಪಸ್ಸಿನಲ್ಲಿ ಆಸಕ್ತಿ ಕಳೆದುಕೊಂಡ. ತಾನೂ ಮದುವೆಯಾಗಬೇಕೆಂದು ಬಯಸಿದ. ಹೀಗಿರಲೊಂದು ದಿನ, ಪಿಪ್ಪಲಾಮುನಿ ಪುಷ್ಪಭದ್ರಾ ನದಿಗೆ ಸ್ನಾನಕ್ಕಾಗಿ ಹೋದ. ಅಲ್ಲಿ ಅನರಣ್ಯನ ಪುತ್ರಿ ಪದ್ಮಾದೇವಿಯನ್ನು ನೋಡಿದ. ಇವಳನ್ನು ಪಡೆಯುವ ಬಗೆ ಹೇಗೆಂದು ಯೋಚಿಸಿದ. ಪತ್ನಿಭಿಕ್ಷೆಗಾಗಿ ಅನರಣ್ಯರಾಜನ ಸಭೆಗೆ ಹೋದ. 'ಎಲೈ ರಾಜನೆ, ನಿನ್ನ ಪುತ್ರಿಯನ್ನು ನನಗೆ ಮದುವೆಮಾಡಿಕೊಡು. ಇಲ್ಲದಿದ್ದರೆ ನಿನ್ನ ಕುಲವನ್ನೇ ಈ ಕ್ಷಣದಲ್ಲಿ ಭಸ್ಮಮಾಡುವೆ' ಎಂದ.

ಅನರಣ್ಯರಾಜನಿಗೆ ತುಂಬಾ ದುಃಖವಾಯಿತು. ಮುದುಕನಾದ ಪಿಪ್ಪಲಾದನಿಗೆ ಸೌಂದರ್ಯವತಿಯಾದ ಮಗಳನ್ನು ಕೊಡಲು ಮನಸ್ಸಾಗಲಿಲ್ಲ. ಅನರಣ್ಯರಾಜನ ಪರಿವಾರವೆಲ್ಲವೂ ದುಃಖಸಾಗರದಲ್ಲಿ ಮುಳುಗಿತು. ಈ ಸಮಯದಲ್ಲಿ ಅನರಣ್ಯರಾಜನ ಮಹಾಪ್ರಾಜ್ಞನಾದ ಪುರೋಹಿತ ಬಂದ. ಶಾಸ್ತ್ರ ಮತ್ತು ನೀತಿಯನ್ನೂ ಚೆನ್ನಾಗಿ ಬಲ್ಲ ಆ ಪುರೋಹಿತ 'ಎಲೈ ರಾಜನೆ, ಇಂದಾಗಲೀ ಇನ್ನೊಂದು ವರ್ಷದ ಮೇಲಾಗಲೀ, ನಿನ್ನ ಕುಮಾರಿಯನ್ನು ಯೋಗ್ಯನಾದ ವರನಿಗೆ ಕೊಡಲೇ ಬೇಕು. ಆದುದರಿಂದ ಈ ಮುನಿಗೆ ಮಗಳನ್ನು ಕೊಟ್ಟು, ನಿನ್ನ ಕುಲಸಂಪತ್ತೆಲ್ಲವನ್ನೂ ರಕ್ಷಿಸಿಕೋ' ಎಂದು ಸಲಹೆಕೊಟ್ಟ.

ಆಸ್ಥಾನ ಪುರೋಹಿತನ ಸಲಹೆಯಂತೆ ದುಃಖವನ್ನು ಸಹಿಸಿಕೊಂಡು ಮಗಳನ್ನು ಪಿಪ್ಪಲಾದನಿಗೆ ಕೊಟ್ಟು ವಿವಾಹ ಮಾಡಿ, ತನ್ನ ರಾಜ ಸಂಪತ್ತನ್ನು ಉಳಿಸಿಕೊಂಡ. ಮುದುಕನಿಗೆ ಮಗಳನ್ನು ಕೊಟ್ಟು ವಿವಾಹ ಮಾಡಿದೆ – ಎಂಬ ನೋವಿನಿಂದ ಅನರಣ್ಯ ರಾಜ ತಪಸ್ಸುಮಾಡಲು ಅರಣ್ಯಕ್ಕೆ ಹೋದ. ಇತ್ತ ಅವನ ಹೆಂಡತಿ ಪತಿವಿರಹದಿಂದ ಮತ್ತು ಮಗಳ ಶೋಕದಿಂದ ಪ್ರಾಣ ಬಿಟ್ಟಳು. ಕಾಡಿಗೆ ಹೋದ ಅನರಣ್ಯರಾಜ ತಪಸ್ಸು ಮಾಡುತ್ತಾ ಭಕ್ತಿಯಿಂದ ಶಂಕರನನ್ನು ಆರಾಧಿಸಿ, ಶಿವಲೋಕವನ್ನು ಸೇರಿದ. ಅನರಣ್ಯರಾಜನ ಹಿರಿಯ ಮಗ ಕೀರ್ತಿಮಾನ್ ಪಟ್ಟಾಭಿಷಿಕ್ತನಾಗಿ ಪ್ರಜೆಗಳನ್ನು ಮಕ್ಕಳಂತೆ ಕಾಪಾಡುತ್ತಾ ರಾಜ್ಯವಾಳಿದ.

ಹೀಗೆ ಅನರಣ್ಯನ ಕಥೆ ಹೇಳಿದ ವಸಿಷ್ಠ ಮುನಿ, 'ಹಿಮವಂತ. ಅನರಣ್ಯನಂತೆ ನೀನೂ ನಿನ್ನ ಮಗಳನ್ನು ಶಿವನಿಗೆ ಕೊಟ್ಟು ನಿನ್ನ ಕುಲವನ್ನು ಕಾಪಾಡಿಕೊ' ಎಂದ.

ಇಲ್ಲಿಗೆ ಶ್ರೀಶಿವಮಹಾಪುರಾಣದ ಪಾರ್ವತೀಖಂಡದಲ್ಲಿ ಮೂವತ್ತನಾಲ್ಕನೆಯ ಅಧ್ಯಾಯ ಮುಗಿಯಿತು.

ಎಫ್‌ಆರ್‌ಪಿ ನ್ಯಾಯಸಮ್ಮತವಾಗಿಲ್ಲ: ಮುಖಂಡರು • ದರ ನಿಗದಿಗೆ ಸಿ.ಎಂ ನೇತೃತ್ವದಲ್ಲಿ ಮತ್ತೆ ಸಭೆ

ಕಬ್ಬಿನ ದರ ನಿಗದಿ: ಗದ್ದಲದಲ್ಲೇ ಸಭೆ ಅಂತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಹಂಗಾಮಿಗೆ ಕಬ್ಬಿಗೆ ದರ ನಿಗದಿ ಮಾಡಲು ಸಕ್ಕರೆ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಅಧ್ಯಕ್ಷತೆಯಲ್ಲಿ ವಿಧಾನಸೌಧದಲ್ಲಿ ಶನಿವಾರ ನಡೆದ ಸಭೆ ಗದ್ದಲದಲ್ಲೇ ಅಂತ್ಯವಾಯಿತು. ಮುಖ್ಯಮಂತ್ರಿ ನೇತೃತ್ವದ ಸಭೆಯಲ್ಲಿಯೇ ದರ ನಿಗದಿ ಪಡಿಸಲಾಗುವುದು ಎಂದು ಸಚಿವರು ಬಳಿಕ ಪ್ರಕಟಿಸಿದರು.

ಕೇಂದ್ರ ಸರ್ಕಾರವು ಪ್ರತಿ ಟನ್‌ಗೆ ₹ 3,050 ಮುಕ್ತ ಮತ್ತು ನ್ಯಾಯಸಮ್ಮತ ದರ (ಎಫ್‌ಆರ್‌ಪಿ) ನಿಗದಿಪಡಿಸಿದೆ. ಆದರೆ, ಹೆಚ್ಚಿನ ದರ ನೀಡುವಂತೆ ರೈತರು ಬೇಡಿಕೆ ಇಟ್ಟಿದ್ದಾರೆ. ಕಬ್ಬು ಕಟಾವು ಮತ್ತು ಸಾಗಣೆ ವೆಚ್ಚದ ಕಡಿತ ಹಾಗೂ ಸಕ್ಕರೆ ಕಾರ್ಖಾನೆಗಳು ತೂಕದಲ್ಲಿ ವಂಚಿಸುವುದನ್ನು ತಡೆಯಬೇಕೆಂಬ ರೈತರ ಬೇಡಿಕೆ ಕುರಿತು ಸಭೆಯಲ್ಲಿ ಮೂರೂವರೆ ಗಂಟೆ ಚರ್ಚೆ ನಡೆಯಿತು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, 'ಕಬ್ಬು ಕಟಾವು, ಸಾಗಣೆ ಮತ್ತು ಅರೆಯುವ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸರ್ಕಾರ ಹಾಗೂ ಸಕ್ಕರೆ ಕಾರ್ಖಾನೆಗಳು ದ್ವಿಪಕ್ಷೀಯ ಒಪ್ಪಂದ ಮಾಡಿಕೊಳ್ಳಬೇಕು. ಕಟಾವು ಮತ್ತು ಸಾಗಣೆ ವೆಚ್ಚ ವಸೂಲಿಗೆ ಸ್ಪಷ್ಟವಾದ ಮಾರ್ಗಸೂಚಿ ಹೊರಡಿಸಬೇಕು' ಎಂದು ಒತ್ತಾಯಿಸಿದರು.

'ಪ್ರತಿ ಟನ್‌ಗೆ ಕೇಂದ್ರ ಸರ್ಕಾರ ನಿಗದಿಪಡಿಸಿರುವ ಎಫ್‌ಆರ್‌ಪಿ ನ್ಯಾಯಸಮ್ಮತವಾಗಿಲ್ಲ. ಕಬ್ಬು ಕೃಷಿಯ ವೆಚ್ಚದ ಆಧಾರದಲ್ಲೇ ವೈಜ್ಞಾನಿಕ ದರ ನಿಗದಿಪಡಿಸಬೇಕು. ಟನ್ ಕಬ್ಬಿಗೆ ಕನಿಷ್ಠ ₹ 5,500 ನಿಗದಿಪಡಿಸಬೇಕು' ಎಂದು ರೈತ ನಾಯಕಿ ಸುನಂದಾ ಜಯರಾಂ ಆಗ್ರಹಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಅವರು, 'ಕಾರ್ಖಾನೆಗಳಿಗೆ ಸರ್ಕಾರ ಯಾವುದೇ ರಿಯಾಯಿತಿ ನೀಡಲಿ. ಆದರೆ, ಆದೇಶದಂತೆ ಕಬ್ಬು ಖರೀದಿ ಮತ್ತು ಹಣ ಪಾವತಿ ಮಾಡಬೇಕು. ಇಳುವರಿ ನೆಪದಲ್ಲಿ ರೈತರಿಗೆ ಮೋಸ ಮಾಡುವುದು ನಿಲ್ಲಬೇಕು' ಎಂದು ಹೇಳಿದರು.

ಕೋಡಿಹಳ್ಳಿ ಚಂದ್ರಶೇಖರ್ ಸೇರಿದಂತೆ ಹಲವು ರೈತ ಮುಖಂಡರು ತಮ್ಮ ಅಭಿಪ್ರಾಯವನ್ನು ಸಭೆಯಲ್ಲಿ ಮಂಡಿಸಿದರು. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಕಟಾವು ಮತ್ತು ಸಾಗಣೆ ವೆಚ್ಚದ ಹೆಸರಿನಲ್ಲಿ ಅಧಿಕ ಹಣ ವಸೂಲಿ ನಡೆಯುತ್ತಿದ್ದು, ಅದನ್ನು ನಿಲ್ಲಿಸಬೇಕು ಎಂದು ಅವರು ಮನವಿ ಮಾಡಿದರು.

ಬೇಡಿಕೆ ಒಪ್ಪದ ಮಾಲೀಕರು: ಸಭೆಯಲ್ಲಿದ್ದ ದಕ್ಷಿಣ ಭಾರತ ಸಕ್ಕರೆ ಕಾರ್ಖಾನೆಗಳ ಮಾಲೀಕರ ಸಂಘದ ಪ್ರತಿನಿಧಿ ಜಗದೀಶ್ ಗುಡುಗುಂಟಿ, 'ಕಾರ್ಖಾನೆಗಳಲ್ಲಿ ಉತ್ಪಾದನಾ ವೆಚ್ಚದ ಏರಿದೆ. ಪ್ರತಿ ಟನ್‌ಗೆ ₹ 3,200ಕ್ಕಿಂತ ಹೆಚ್ಚು ದರ ನೀಡುವುದು ಸಾಧ್ಯವಿಲ್ಲ' ಎಂದರು.

'ರೈತರು ತಾವೇ ಒಂದು ಸಕ್ಕರೆ ಕಾರ್ಖಾನೆ ನಡೆಸಿ ನೋಡಲಿ. ಇಲ್ಲವಾದರೆ, ಸಕ್ಕರೆ ಉತ್ಪಾದನೆ ಬಗ್ಗೆ ಅಧ್ಯಯನ ನಡೆಸಿ ತಿಳಿದುಕೊಳ್ಳಲಿ' ಎಂಬ ಗುಡುಗುಂಟಿ ಹೇಳಿಕೆಗೆ ರೈತ ಮುಖಂಡರು ಆಕ್ಷೇಪ ವ್ಯಕ್ತಪಡಿಸಿದರು.

ಕೋಡಿಹಳ್ಳಿ ಉಪಸ್ಥಿತಿಗೆ ರೈತ ಮುಖಂಡರ ಆಕ್ಷೇಪ

ಕಬ್ಬಿನ ದರ ನಿಗದಿಪಡಿಸಲು ನಡೆದ ಸಭೆಯಲ್ಲಿ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ಹಾಜರಿಗೆ, ಇತರೆ ರೈತ ಮುಖಂಡರು ಆಕ್ಷೇಪ ವ್ಯಕ್ತಪಡಿಸಿದರು. 'ಚಂದ್ರಶೇಖರ್ ವಿರುದ್ಧ ಗುರುತರ ಆಪಾದನೆಗಳಿವೆ. ಅವರಿಗೆ ಆಹ್ವಾನ ನೀಡಿದ್ದು ಏಕೆ? ಅವರು ಇರುವುದಾದರೆ ನಾವು ಸಭೆಯಿಂದ ಹೊರ ಹೋಗುತ್ತೇವೆ' ಎಂದು ಕೆಲವರು ಹೇಳಿದರು.

'ವೈಯಕ್ತಿಕ ಆರೋಪಗಳನ್ನು ಪ್ರಸ್ತಾಪಿಸಿ ಗೊಂದಲ ಸೃಷ್ಟಿಸಬೇಡಿ' ಎಂದು ಚಂದ್ರಶೇಖರ್ ಹೇಳಿದರು. ಗದ್ದಲ ಹೆಚ್ಚಿದಂತೆ ಮಧ್ಯ ಪ್ರವೇಶಿಸಿದ ಸುನಂದಾ ಜಯರಾಂ, ಕಾರ್ಯಸೂಚಿಗೆ ಸೀಮಿತವಾಗಿ ಚರ್ಚಿಸಲು ಸಲಹೆ ನೀಡಿ ಚರ್ಚೆಗೆ ತೆರೆ ಎಳೆದರು.

ಕಬ್ಬು ಖರೀದಿಗೆ ಆಗ್ರಹಿಸಿ ಪ್ರತಿಭಟನೆ: ಹಳಿಯಾಳದಲ್ಲಿರುವ ಪ್ಯಾರಿ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಖರೀದಿ ಆರಂಭಕ್ಕೆ ಆಗ್ರಹಿಸಿ ರೈತ ಮುಖಂಡರು ವಿಧಾನಸೌಧದ ಮೊಗಸಾಲೆಯಲ್ಲಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಎದುರು ಪ್ರತಿಭಟನೆ ನಡೆಸಿದರು. ಕೆಲವರು ಸಚಿವರ ಕಾಲಿಗೂ ಎರಗಿ ಮನವಿ ಮಾಡಿದರು.

'ಸಮಸ್ಯೆ ಇತ್ಯರ್ಥಕ್ಕೆ ಬದ್ಧ'

'ಕಳೆದ ಹಂಗಾಮಿನಲ್ಲಿ ₹ 19,634 ಕೋಟಿ ಮೊತ್ತದ ಕಬ್ಬು ಅರೆಯಲಾಗಿತ್ತು. ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ₹ 12.11 ಕೋಟಿ ಬಾಕಿ ಉಳಿದಿದೆ. ಕಬ್ಬು ಬೆಳೆಗಾರರ ಯಾವುದೇ ಸಮಸ್ಯೆಗಳಿದ್ದರೂ ನೇರವಾಗಿ ಗಮನಕ್ಕೆ ತಂದರೆ ಇತ್ಯರ್ಥಪಡಿಸಲು ಬದ್ಧನಾಗಿದ್ದೇನೆ' ಎಂದು ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಭರವಸೆ ನೀಡಿದರು.

ನಿಧನ ವಾರ್ತೆ


ಹರಿಹರ ಎಂ.ಮೆಹೆಂದಳೆ



ಬೆಳ್ತಂಗಡಿ (ದಕ್ಷಿಣ ಕನ್ನಡ): ಅಂತರರಾಷ್ಟ್ರೀಯ ಮಟ್ಟದ ವಿಷ ವಿಜ್ಞಾನಿ, ಸಂಶೋಧಕ ಅಮೆರಿಕದಲ್ಲಿ ನೆಲೆಸಿದ್ದ ಬೆಳ್ತಂಗಡಿ ಮೂಲದ ಹರಿಹರ ಎಂ.ಮೆಹೆಂದಳೆ (83) ಅನಾರೋಗ್ಯದಿಂದ ಟೆಕ್ಸಾಸ್‌ನಲ್ಲಿರುವ ಸ್ವಗೃಹದಲ್ಲಿ ಶುಕ್ರವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ.

ತೆಂಕಕಾರಂದೂರು ಗ್ರಾಮದ ಕಾಪಿನಡ್ಕ ಮನೆ ನಿವಾಸಿ ದಿ. ಮಹದೇವ ಮೆಹೆಂದಳೆ ಅವರ ಪುತ್ರರಾಗಿರುವ ಇವರು ಉಜಿರೆ ಸಿದ್ಧವನದಲ್ಲಿ ಇದ್ದು ಎಸ್.ಡಿ.ಎಂ.ನಲ್ಲಿ ಶಿಕ್ಷಣ ಮುಗಿಸಿದ್ದರು. ಧಾರಾವಾಡದಲ್ಲಿ ಕೃಷಿ ವಿಜ್ಞಾನ ಪದವಿ ಪಡೆದು ಹೆಚ್ಚಿನ ಅಧ್ಯಯನಕ್ಕಾಗಿ ಅಮೆರಿಕಕ್ಕೆ ಹೋಗಿ, ಅಲ್ಲಿನ ಲೂಸಿಯಾನ ವಿ.ವಿ.ಯಲ್ಲಿ ವಿಷ ವಿಜ್ಞಾನ ಪ್ರೊಫೆಸರ್ ಮತ್ತು ಸಂಶೋಧಕರಾಗಿದ್ದರು. 100ಕ್ಕೂ ಹೆಚ್ಚು ವಿದ್ಯಾರ್ಥಿಗಳ ಪಿಎಚ್.ಡಿಗೆ ಮಾರ್ಗದರ್ಶನ ಮಾಡಿದ್ದರು. ಭಾರತದ ಹಲವು ಸಂಸ್ಥೆಗಳಿಗೆ ಮಾರ್ಗದರ್ಶಕರಾಗಿಯೂ ಕೆಲಸ ಮಾಡಿದ್ದರು.

ಅಲ್ಪಸಂಖ್ಯಾತರ ಆಯೋಗ: ಅಜೀಂ ಮರು ನೇಮಕ



ಬೆಂಗಳೂರು: ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರನ್ನಾಗಿ ಅಬ್ದುಲ್ ಅಜೀಂ ಅವರನ್ನು ಮರು ನೇಮಕ ಮಾಡಿ ಶನಿವಾರ ಆದೇಶ ಹೊರಡಿಸಲಾಗಿದೆ.

ಆಯೋಗದ ಅಧ್ಯಕ್ಷರಾಗಿದ್ದ ಮಾಜಿ ಪೊಲೀಸ್ ಅಧಿಕಾರಿ ಮತ್ತು ಮೇಲ್ಮನೆಯ ಮಾಜಿ ಸದಸ್ಯ ಅಜೀಂ ಅಧಿಕಾರವಧಿ ಶುಕ್ರವಾರ ಕೊನೆಗೊಂಡಿತ್ತು. ಮರು ನೇಮಕ ಕುರಿತು ಅಲ್ಪಸಂಖ್ಯಾತರ ಕಲ್ಯಾಣ, ಹಜ್, ವಕ್ಫ್ ಇಲಾಖೆ ಆದೇಶ ಹೊರಡಿಸಿದೆ.

ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಅಭಿಮತ

ನದಿಗಳ ಉಳಿವಿಗೆ ಕುಂಭಮೇಳ ಸಹಕಾರಿ

ಪ್ರಜಾವಾಣಿ ವಾರ್ತೆ

ತ್ರಿವೇಣಿ ಸಂಗಮ (ಮಂಡ್ಯ ಜಿಲ್ಲೆ): 'ಆಧುನಿಕ ಕಾಲಘಟ್ಟದಲ್ಲಿ ನದಿಗಳ ಉಳಿವು ಮತ್ತು ಸಂರಕ್ಷಣೆಗೆ ಕುಂಭಮೇಳ ಆಚರಣೆಗಳು ಸಹಕಾರಿಯಾಗುತ್ತವೆ' ಎಂದು ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಪ್ರತಿಪಾದಿಸಿದರು.

ಕೆ.ಆರ್.ಪೇಟೆ ತಾಲ್ಲೂಕಿನ ತ್ರಿವೇಣಿ ಸಂಗಮದಲ್ಲಿ ನಡೆಯುತ್ತಿರುವ ಕುಂಭಮೇಳದ 3ನೇ ದಿನ ಶನಿವಾರ ನಡೆದ ಧಾರ್ಮಿಕ ಸಭೆಯಲ್ಲಿ ಅವರು ಮಾತನಾಡಿ, 'ಉತ್ತರ ಭಾರತಕ್ಕಷ್ಟೇ ಸೀಮಿತವಾಗಿದ್ದ ಕುಂಭಮೇಳ ದಕ್ಷಿಣ ಭಾರತದಲ್ಲೂ ನಡೆಯುತ್ತಿರುವುದು ನದಿ, ಜಲಮೂಲಗಳ ರಕ್ಷಣೆಗೆ ಮಹತ್ವಪೂರ್ಣವಾದ ನಡೆ. ನದಿಗಳನ್ನು ರಕ್ಷಿಸದಿದ್ದರೆ ಭವಿಷ್ಯದಲ್ಲಿ ಅಪಾರ ತೊಂದರೆ ಅನುಭವಿಸಬೇಕಾಗುತ್ತದೆ' ಎಂದು ಎಚ್ಚರಿಸಿದರು.

'ಮೂರು ಜೀವಂತ ನದಿಗಳು ಕೂಡುವ ಸ್ಥಳ ಅತ್ಯಂತ ಪವಿತ್ರ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಪರಿಶ್ರಮದಿಂದಾಗಿ ಗಂಗಾನದಿ ಸ್ವಚ್ಛತೆಗೆ ಹೊಸ ಯೋಜನೆ ರೂಪಿಸಲಾಗಿದೆ. ಅಂತೆಯೇ ನಮ್ಮ ರಾಜ್ಯ ಸರ್ಕಾರ ಕೂಡ ತ್ರಿವೇಣಿ ಸಂಗಮವನ್ನು ಅಭಿವೃದ್ಧಿಗೊಳಿಸಿ ಪಾವಿತ್ರ್ಯವನ್ನು ಹೆಚ್ಚಿಸಬೇಕು' ಎಂದು ಹೇಳಿದರು.

ಬಾಳೆಹೊನ್ನೂರು ತೆಂಡೇಕೆರೆ ಶಾಖಾಮಠದ ಗಂಗಾಧರ ಶಿವಾಚಾರ್ಯ ಸ್ವಾಮೀಜಿ, ಆದಿಚುಂಚನಗಿರಿ ಪೀಠದ ಡಾ.ನಿರ್ಮಲಾನಂದ ನಾಥ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಬೇಬಿ ಮಠದ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಸಾಲೂರು ಬೃಹನ್ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ಕನಕ ಗುರುಪೀಠದ ಶಿವಾನಂದ ಪುರಿ ಅವರು ಇದ್ದರು.



ಕೆ.ಆರ್.ಪೇಟೆ ತಾಲ್ಲೂಕು ತ್ರಿವೇಣಿ ಸಂಗಮದಲ್ಲಿ ನಡೆಯುತ್ತಿರುವ ಕುಂಭಮೇಳದ ಅಂಗವಾಗಿ ನಡೆದ ಧಾರ್ಮಿಕ ಸಭೆಯನ್ನು ಆದಿಚುಂಚನಗಿರಿ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಶಿವಾನಂದ ಶಿವಯೋಗಿ ಸ್ವಾಮೀಜಿ, ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ, ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಕೆ.ಸಿ.ನಾರಾಯಣಗೌಡ, ಎಸ್‌ಅಶ್ವತಿ ಇದ್ದರು

ತ್ರಿವೇಣಿ ಸಂಗಮಕ್ಕೆ ಯೋಗಿ ಆದಿತ್ಯನಾಥ ಇಂದು

ಕುಂಭಮೇಳದ ಸಮಾರೋಪ ಸಮಾರಂಭ ಭಾನುವಾರ (ಅ.16) ನಡೆಯಲಿದ್ದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಭಾಗವಹಿಸಲಿದ್ದಾರೆ. ತ್ರಿವೇಣಿ ಸಂಗಮದಲ್ಲಿ ನಡೆಯುವ ಪುಣ್ಯಸ್ನಾನದಲ್ಲೂ ಅವರು ಪಾಲ್ಗೊಳ್ಳಲಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಪ್ರಹ್ಲಾದ ಜೋಶಿ, ಶೋಭಾ ಕರಂದ್ಲಾಜೆ, ಬಿಜೆಪಿ ಮುಖಂಡ ಬಿ.ಎಸ್.ಯಡಿಯೂರಪ್ಪ ಅವರು ಸಮಾರೋಪ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ.

ಎನ್‌ಜಿಟಿ: ರಾಜ್ಯ ಸರ್ಕಾರಕ್ಕೆ ₹2,900 ಕೋಟಿ ದಂಡ

ಒಂದನೇ ಪುಟದಿಂದ...

ಈ ಸಂಬಂಧ 2017ರಲ್ಲಿ ಆದೇಶ ಹೊರಡಿಸಿತ್ತು. ರಾಜ್ಯಗಳು ಕೈಗೊಂಡ ಕ್ರಮಗಳ ಬಗ್ಗೆ ನಿಗಾ ಇಡುವಂತೆ ಎನ್‌ಜಿಟಿಗೆ ಸೂಚಿಸಿತ್ತು. 2016ರ ಕಸ ವಿಲೇವಾರಿ ನಿಯಮ (ತಿದ್ದುಪಡಿ) ಅನುಷ್ಠಾನಕ್ಕೆ ರಾಜ್ಯ ಸರ್ಕಾರಗಳು ಕೈಗೊಂಡ ಕ್ರಮಗಳ ಬಗ್ಗೆ ಎನ್‌ಜಿಟಿ ಪ್ರಧಾನ ಪೀಠವು ನಿಗಾ ಇರಿಸಿದೆ. ವೈಜ್ಞಾನಿಕ ಕಸ ವಿಲೇವಾರಿಗೆ ರಾಜ್ಯ ಸರ್ಕಾರಗಳಿಗೆ ಪೀಠವು ಹಲವು ಗಡುವುಗಳನ್ನು ನೀಡಿತ್ತು. ಕಸ ವಿಲೇವಾರಿಗೆ ಕೈಗೊಂಡ ಉಪಕ್ರಮಗಳ ಬಗ್ಗೆ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರು ಎನ್‌ಜಿಟಿಗೆ ಮಂಗಳವಾರ ಪ್ರಮಾಣಪತ್ರ ಸಲ್ಲಿಸಿದ್ದರು.

ಈ ವರದಿಯನ್ನು ಪರಿಶೀಲಿಸಿದ ಎನ್‌ಜಿಟಿ ಮುಖ್ಯಸ್ಥ ನ್ಯಾಯಮೂರ್ತಿ ಆದರ್ಶ ಕುಮಾರ್ ಗೋಯೆಲ್, ನ್ಯಾಯಮೂರ್ತಿ ಸುಧೀರ್ ಅಗರವಾಲ್, ತಜ್ಞ ಸದಸ್ಯರಾದ ಪ್ರೊ.ಸೆಂಥಿಲ್ ವೇಲ್, ಡಾ.ಅಫ್ರೋಜ್ ಅಹ್ಮದ್ ಅವರನ್ನು ಒಳಗೊಂಡ ಪೀಠವು, 'ದ್ರವ ಹಾಗೂ ಘನ ತ್ಯಾಜ್ಯ ವಿಲೇವಾರಿಯಲ್ಲಿ ಗಣನೀಯ ಸುಧಾರಣೆ ಆಗಿಲ್ಲ. ಇದರಿಂದ ಪರಿಸರದ ಮೇಲೆ ಭಾರಿ ಹಾನಿ ಆಗುತ್ತಿದೆ' ಎಂದು ಪೀಠ ಅಭಿಪ್ರಾಯಪಟ್ಟಿದೆ.

'ಕೇಂದ್ರ ಸರ್ಕಾರದ 2016ರ ಘನತ್ಯಾಜ್ಯ ನಿಯಮದ (ತಿದ್ದುಪಡಿ) ಪ್ರಕಾರ, ಹಸಿ ಕಸ ವಿಂಗಡಿಸಿ ಗೊಬ್ಬರ ಮಾಡಬೇಕು ಹಾಗೂ ಒಣ ಕಸವನ್ನು ವಿಲೇವಾರಿ ಮಾಡಬೇಕು. ಭೂಭರ್ತಿ ಘಟಕಗಳಿಗೆ ಮಿಶ್ರ ಕಸ ಸಾಗಿಸುವಂತಿಲ್ಲ. ಆದರೆ, ಕರ್ನಾಟಕದಲ್ಲಿ ಈಗಲೂ 191 ಭೂಭರ್ತಿ ಘಟಕಗಳಿದ್ದು, ಪ್ರತಿನಿತ್ಯ ಅಪಾರ ಪ್ರಮಾಣದ ಕಸವನ್ನು ಈ ಘಟಕಗಳಲ್ಲಿ ಸುರಿಯಲಾಗುತ್ತಿದೆ. ಕೊಳಚೆ ನೀರು ಜಲಮೂಲಗಳಿಗೆ ಸೇರುತ್ತಿದೆ. ಜಲಮೂಲಗಳ ಮಾಲಿನ್ಯ ನಿಯಂತ್ರಣಕ್ಕೆ ರಾಜ್ಯ ಸರ್ಕಾರ ಕೈಗೊಂಡ ಉಪಕ್ರಮಗಳು ಸಾಲದು. ತ್ಯಾಜ್ಯ ನೀರುಸಂಸ್ಕರಣಾ ಘಟಕಗಳ ನಿರ್ಮಾಣಕಾಮಗಾರಿ ಸಹ ಗಡುವಿನೊಳಗೆ ಆಗಿಲ್ಲ' ಎಂದು ಪೀಠ ಅಸಮಾಧಾನ ವ್ಯಕ್ತಪಡಿಸಿದೆ.

'1,427 ದಶಲಕ್ಷ ಲೀಟರ್ ತ್ಯಾಜ್ಯ ನೀರು ಸಂಸ್ಕರಣೆ ಆಗುತ್ತಿಲ್ಲ. ಇದಕ್ಕೆ ₹2,856 ಕೋಟಿ ಪರಿಹಾರ ಪಾವತಿಸಬೇಕು. ಭೂಭರ್ತಿ ಘಟಕಗಳಲ್ಲಿ 178.50 ಲಕ್ಷ ಟನ್ ಹಳೆಯ ಕಸ ಹಲವು ಸಮಯಗಳಿಂದ ಉಳಿದುಕೊಂಡಿದೆ. ಈ ಕಸವನ್ನು ವೈಜ್ಞಾನಿಕ ವಿಲೇವಾರಿ ಮಾಡದ ಕಾರಣಕ್ಕೆ ₹540 ಕೋಟಿ ಪಾವತಿಸಬೇಕು. ಒಟ್ಟು ಪರಿಹಾರದ ಮೊತ್ತ ₹3,400 ಕೋಟಿ ಆಗಲಿದೆ. ಬೆಂಗಳೂರಿನ ಚಂದಾಪುರ ಕೆರೆ ಸಂರಕ್ಷಣೆಗೆ ಕ್ರಮ ಕೈಗೊಳ್ಳದ ಕಾರಣಕ್ಕೆ ₹500 ಕೋಟಿ ಪರಿಹಾರವನ್ನು ಅಕ್ಟೋಬರ್ 10ರಂದು ವಿಧಿಸಲಾಗಿದೆ. ಕರ್ನಾಟಕ ಸರ್ಕಾರವು ಎರಡು ತಿಂಗಳೊಳಗೆ ಪ್ರತ್ಯೇಕ ಖಾತೆ ತೆರೆದು ₹2900 ಕೋಟಿಯನ್ನು ಅದರಲ್ಲಿ ಇಡಬೇಕು. ಮುಖ್ಯ ಕಾರ್ಯದರ್ಶಿ ಅವರು ಮೇಲ್ವಿಚಾರಣೆ ವಹಿಸಬೇಕು. ಈ ಮೊತ್ತವನ್ನು ಕಸದ ವೈಜ್ಞಾನಿಕ ವಿಲೇವಾರಿಗೆ ಬಳಸಿ 6 ತಿಂಗಳಲ್ಲಿ ಪ್ರಗತಿ ತೋರಿಸಬೇಕು' ಎಂದು ಪೀಠ ನಿರ್ದೇಶಿಸಿದೆ. ವಿವಿಧ ಇಲಾಖೆಗಳ ಸಹಯೋಗದಲ್ಲಿ ಮುಖ್ಯ ಕಾರ್ಯದರ್ಶಿಯವರು ಕಾರ್ಯಕ್ರಮಗಳ ಯೋಜನೆ, ಕಾರ್ಯಗತಗೊಳಿಸುವಿಕೆ, ಮೇಲ್ವಿಚಾರಣೆಗೆ ಒಂದು ತಿಂಗಳೊಳಗೆ ಸಮಗ್ರ ಯೋಜನೆ ರೂಪಿಸಬೇಕು ಎಂದಿದೆ.

ಪರಿಸರಕ್ಕೆ ನಿರಂತರ ಹಾನಿ ನಿವಾರಿಸಲು, ಸುಪ್ರೀಂ ಕೋರ್ಟ್‌ನ ನಿರ್ದೇಶನಗಳನ್ನು ಅನುಸರಿಸಲು ಎನ್‌ಜಿಟಿ ಕಾಯ್ದೆಯ ಸೆಕ್ಷನ್ 15 ರ ಅಡಿ ಪರಿಹಾರ ನೀಡುವುದು ಅಗತ್ಯವಾಗಿದೆ ಎಂದಿದೆ. ರಾಜ್ಯವು ಕಾನೂನು ಮತ್ತು ನಾಗರಿಕರಿಗೆ ತಮ್ಮ ಕರ್ತವ್ಯಗಳನ್ನು ಅರಿತುಕೊಳ್ಳಲು ಮತ್ತು ತಮ್ಮದೇ ಹಂತದಲ್ಲಿ ಹೆಚ್ಚಿನ ಜವಾಬ್ದಾರಿ ವಹಿಸಲು ಇದು ಉತ್ತಮ ಸಮಯ ಎಂದು ಪೀಠ ಹೇಳಿದೆ.

ತ್ಯಾಜ್ಯ ನೀರು ಸಂಸ್ಕರಣೆ

3356 ದಶಲಕ್ಷ ಲೀಟರ್ — ರಾಜ್ಯದಲ್ಲಿ ಪ್ರತಿನಿತ್ಯ ಉತ್ಪಾದನೆಯಾಗುವ ತ್ಯಾಜ್ಯ ನೀರು

1929 ದಶಲಕ್ಷ ಲೀಟರ್ — ಸಂಸ್ಕರಣೆ ಆಗುತ್ತಿರುವ ತ್ಯಾಜ್ಯ ನೀರು


1427 ದಶಲಕ್ಷ ಲೀಟರ್ — ಉತ್ಪಾದನೆ–ಸಂಸ್ಕರಣೆ ನಡುವಿನ ಅಂತರ

804 ದಶಲಕ್ಷ ಲೀಟರ್ — ಸಂಸ್ಕರಿಸಿದ ತ್ಯಾಜ್ಯ ನೀರನ್ನು ಕೃಷಿ, ಉದ್ಯಮಗಳಿಗೆ ಬಳಕೆ

ರಾಜ್ಯದ ಕಸ ವಿಲೇವಾರಿ ಚಿತ್ರಣ

15,334 ಟನ್ — ರಾಜ್ಯದಲ್ಲಿ ಪ್ರತಿನಿತ್ಯ ಉತ್ಪಾದನೆಯಾಗುವ ಕಸ

9,153 ಟನ್ — ನಿತ್ಯ ಸಂಸ್ಕರಣೆ ಆಗುವ ಕಸ



6,181 ಟನ್ — ಉತ್ಪಾದನೆ ಹಾಗೂ ಸಂಸ್ಕರಣೆ ನಡುವಿನ ಅಂತರ

179.79 ಲಕ್ಷ ಟನ್ — ಭೂಭರ್ತಿ ಘಟಕಗಳಲ್ಲಿ ಇರುವ ಹಳೆಯ ಕಸ

6,181 ಟನ್ — ಭೂಭರ್ತಿ ಘಟಕಗಳಿಗೆ ಸೇರುತ್ತಿರುವ ಕಸ

1.38 ಲಕ್ಷ ಟನ್ — ಹಳೆಯ ಕಸ ವಿಲೇವಾರಿ ಮಾಡಿರುವುದು

196 — ರಾಜ್ಯದಲ್ಲಿರುವ ಭೂಭರ್ತಿ ಘಟಕಗಳು

ನಲುಗಿದ ‘ಕಾಮಧೇನು’



ಚರ್ಮಗಂಟು ರೋಗಕ್ಕೆ ತುತ್ತಾದ ಜಾನುವಾರು


...ಒಂದನೇ ಪುಟದಿಂದ

ಎರಡು ತಿಂಗಳ ಹಿಂದೆಯಷ್ಟೇ ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡಿರುವ ಬೆಳಗಾವಿ ಮೂಲಕ ರಾಜ್ಯ ಪ್ರವೇಶಿಸಿದ ಈ ಕಾಯಿಲೆ, ಎರಡು ಜಿಲ್ಲೆ ಹೊರತುಪಡಿಸಿ ಇನ್ನುಳಿದ 28 ಜಿಲ್ಲೆಗಳಲ್ಲಿ ಕಾಣಿಸಿಕೊಂಡಿದೆ. ಇದುವರೆಗೆ 1,620 ಜಾನುವಾರುಗಳು ಮೃತಪಟ್ಟಿವೆ. 45,451 ಜಾನುವಾರುಗಳು ರೋಗಪೀಡಿತವಾಗಿವೆ. 2,915 ಗ್ರಾಮಗಳಲ್ಲಿ ಕಾಣಿಸಿಕೊಂಡಿರುವ ಅಂಕಿಯೇ ರೋಗ ಹರಡುವಿಕೆಯ ತೀವ್ರತೆಯನ್ನು ತೋರಿಸುತ್ತದೆ.

ರೋಗ ತಗುಲಿದ ಪ್ರಾಣಿಯಿಂದ ರಕ್ತ ಹೀರುವ ಸೊಳ್ಳೆ, ಉಣ್ಣೆ, ನೊಣಗಳು ಆರೋಗ್ಯವಂತ ಜಾನುವಾರುಗಳಿಗೆ ಕಚ್ಚಿದಾಗ ಸೋಂಕು ಹರಡುತ್ತದೆ. ಸೋಂಕು ಕಾಣಿಸಿಕೊಂಡ ಜಾನುವಾರುಗಳಲ್ಲಿ ದೇಹದ ತುಂಬ 2ರಿಂದ 5 ಸೆಂ.ಮೀ ಸುತ್ತಳತೆಯ ಗಂಟುಗಳು ಕಾಣಿಸಿಕೊಳ್ಳುತ್ತವೆ. ಮುಖ್ಯವಾಗಿ ತಲೆ, ಕುತ್ತಿಗೆ, ಕಾಲುಗಳು, ಕೆಚ್ಚಲು, ಜನನಾಂಗ ಭಾಗದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ನಂತರ ನಿಧಾನವಾಗಿ ಗಂಟುಗಳು ದೊಡ್ಡದಾಗಿ, ಒಡೆಯುತ್ತವೆ. ರಕ್ತಸ್ರಾವವಾಗುವುದಲ್ಲದೇ, ಚರ್ಮ–ಮಾಂಸ ಕಿತ್ತು ಆಳವಾದ ಗಾಯಗಳು ಉಂಟಾಗುತ್ತವೆ. ಹೆಚ್ಚಿನ ಪ್ರಮಾಣದಲ್ಲಿ ರಕ್ತ ಸ್ರಾವವಾದರೆ ಜಾನುವಾರುಗಳು ಬದುಕುಳಿಯಲಾರವು.

ಮಕ್ಕಳಂತೆ ಸಾಕಿದ ಜಾನುವಾರುಗಳು ತಮ್ಮ ಕಣ್ಮುಂದೆ ಸಾವಿಗೀಡಾಗುತ್ತಿರುವುದನ್ನು ಕಂಡು ರೈತರು ಆತಂಕಕ್ಕೆ ಒಳಗಾಗಿದ್ದಾರೆ. ತಮ್ಮ ಕೃಷಿ ಹಾಗೂ ಕುಟುಂಬದ ನೊಗ ಹೊರುವ ಜಾನುವಾರುಗಳಿಗೆ ಬಂದಿರುವ ಈ ಪರಿಸ್ಥಿತಿ ಕಂಡು ಮಮ್ಮಲಮರುಗುತ್ತಿದ್ದಾರೆ. ಆರ್ಥಿಕ ಆಧಾರ ಸ್ತಂಭವಾಗಿರುವ ಜಾನುವಾರುಗಳು ಕುಸಿದುಬಿದ್ದಾಗ ಕುಟುಂಬವನ್ನು ಮುನ್ನಡೆಸುವುದಾದರೂ ಹೇಗೆ ಎನ್ನುವ ಚಿಂತೆಯಲ್ಲಿ ರೈತರಿದ್ದಾರೆ. ಭಾವನಾತ್ಮಕವಾಗಿಯೂ ಜರ್ಝರಿತರಾಗಿದ್ದಾರೆ.

ಅತಿವೃಷ್ಟಿಯಿಂದ ಬೆಳೆ ನಾಶವಾಗಿ ಈಗಾಗಲೇ ಆರ್ಥಿಕ ಸಂಕಷ್ಟದಲ್ಲಿರುವ ರೈತರಿಗೆ ಇದು ಮತ್ತೊಂದು ಹೊಡೆತ ನೀಡಿದೆ. ಕೆಲವು ಕಡೆ ರೋಗದಿಂದ ಮೃತಪಟ್ಟ ಜಾನುವಾರುಗಳ ಅಂತ್ಯಕ್ರಿಯೆ ಮಾಡಲು ಕೂಡ ರೈತರು ಪರದಾಡಿದ್ದಾರೆ. ಕಳೇಬರವನ್ನು ಹೂಳಲು ದೊಡ್ಡ ಗುಂಡಿ ತೆಗೆಸಬೇಕಾಗುತ್ತದೆ. ಇದಕ್ಕಾಗಿ ₹ 4,000ದಿಂದ ₹ 5,000ವರೆಗೆ ಖರ್ಚಾಗುತ್ತದೆ. ಇಷ್ಟು ಹಣ ಭರಿಸಲು ಕೂಡ ತಮ್ಮಿಂದ ಸಾಧ್ಯವಾಗದು ಎಂದು ಗದಗ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ ರೈತರು, ಜೆಸಿಬಿ ಮೂಲಕ ಗುಂಡಿ ತೆಗೆಸಿಕೊಡುವಂತೆ ಪುರಸಭೆಯ ಮೊರೆಹೋಗಿದ್ದು ಪರಿಸ್ಥಿತಿಗೆ ಕೈಗನ್ನಡಿ ಹಿಡಿದಂತಿದೆ.



ಹೈನೋದ್ಯಮಕ್ಕೆ ಹೊಡೆತ: ಹಸು ಮತ್ತು ಎಮ್ಮೆಗಳಲ್ಲಿ ಈ ರೋಗ ಕಂಡುಬಂದಿರುವುದರಿಂದ ಹೈನೋದ್ಯಮಕ್ಕೆ ಪೆಟ್ಟು ಬಿದ್ದಿದೆ. ಈ ಕಾಯಿಲೆಗೆ ತುತ್ತಾಗುವ ಜಾನುವಾರುಗಳಲ್ಲಿ ಶೇ 20ರಷ್ಟು ಹಾಲು ಉತ್ಪಾದನೆ ಕಡಿಮೆಯಾಗಿದೆ. ವಾರಗಟ್ಟಲೆ ಜ್ವರ ಇರುವುದರೊಂದಿಗೆ ಹಾಲು ನೀಡುವ ಪ್ರಮಾಣವೂ ಕಡಿಮೆಯಾಗುತ್ತಿದ್ದು, ರೈತರು ತತ್ತರಿಸಿ ಹೋಗಿದ್ದಾರೆ. ಇನ್ನೊಂದೆಡೆ, ರೋಗದಿಂದ ಬಳಲುತ್ತಿರುವ ಹಸುವಿನ ಹಾಲು ಕುಡಿಯಬಹುದೇ? ಮಕ್ಕಳು, ಗರ್ಭಿಣಿ ಹಾಗೂ ವೃದ್ಧರಿಗೆ ಯಾವುದಾದರೂ ತೊಂದರೆಯಾಗುತ್ತದೆಯೇ ಎಂದು ಕೆಲವೆಡೆ ಜನರು ಆತಂಕಕ್ಕೆ ಒಳಗಾಗಿದ್ದಾರೆ. ಇದು ಕೆಲವು ಪ್ರದೇಶಗಳಲ್ಲಿ ಹಾಲು ಮಾರಾಟದ ಮೇಲೂ ವ್ಯತಿರಿಕ್ತ ಪರಿಣಾಮ ಬೀರಿದೆ.



ಕೊಪ್ಪಳ ಜಿಲ್ಲೆಯಲ್ಲಿ ಜಾನುವಾರಿಗೆ ಚರ್ಮಗಂಟು ರೋಗ ತಗುಲಿರುವುದು

‘ಹಾಲು ಕಾಯಿಸಿ ಕುಡಿದರೆ ಏನೂ ಸಮಸ್ಯೆ ಇಲ್ಲ’ ಎಂದು ಕೋಲಾರ ಜಿಲ್ಲೆಯ ಪಶುಸಂಗೋಪನಾ ಇಲಾಖೆಯ ಉಪನಿರ್ದೇಶಕ ರಾಮಯ್ಯ ಹೇಳುತ್ತಾರೆ. ಪಶು ವೈದ್ಯಾಧಿಕಾರಿಗಳು ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿ ಜನರಲ್ಲಿ ವಿಶ್ವಾಸ ತುಂಬುವ ಕೆಲಸ ಮಾಡುತ್ತಿದ್ದಾರೆ.

ಜಾನುವಾರು ಸಂತೆ, ಜಾತ್ರೆ ನಿಷೇಧ: ರೋಗ ಹರಡುವಿಕೆಯನ್ನು ತಡೆಗಟ್ಟಲು ಸರ್ಕಾರ ಕೆಲವು ಕಟ್ಟುನಿಟ್ಟಿನ ಕ್ರಮಕೈಗೊಂಡಿದೆ. ಮುಖ್ಯವಾಗಿ ಜಾನುವಾರುಗಳನ್ನು ಒಂದೇ ಕಡೆ ಒಟ್ಟಾಗಿ ಸೇರಿಸುವುದರ ಮೇಲೆ ನಿಷೇಧ ಹೇರಿದೆ. ಜಾನುವಾರು ಸಂತೆ, ಜಾತ್ರೆಗಳನ್ನು ನಿಷೇಧಿಸಿದೆ. ರಾಸುಗಳ ಸಾಗಾಣಿಕೆಗೆ ನಿರ್ಬಂಧ ವಿಧಿಸಿದೆ. ರೋಗ ಕಾಣಿಸಿಕೊಂಡ 5 ಕಿ.ಮೀ ವ್ಯಾಪ್ತಿಯಲ್ಲಿನ ಎಲ್ಲಾ ರಾಸುಗಳ ಪರೀಕ್ಷೆ ಮಾಡಲು ಸೂಚಿಸಿದೆ. ಆದರೂ ಸೋಂಕು ಹರಡುವಿಕೆ ನಿಯಂತ್ರಣಕ್ಕೆ ಬಂದಿಲ್ಲ.

ಹಲವು ರೈತರು ಈಗಾಗಲೇ ಜಾನುವಾರು ಖರೀದಿಸುವುದನ್ನು ನಿಲ್ಲಿಸಿದ್ದಾರೆ. ಕೆಲವರು ಆತಂಕದಿಂದ ತಮ್ಮ ಜಾನುವಾರುಗಳನ್ನು ಪಶು ಆಸ್ಪತ್ರೆಗಳಿಗೆ ಕರೆತಂದು ತಪಾಸಣೆಗೆ ಒಳಪಡಿಸುತ್ತಿದ್ದಾರೆ.

ರೋಗ ಲಕ್ಷಣಗಳು, ಹರಡುವಿಕೆ ಹಾಗೂ ಮುಂಜಾಗ್ರತೆಯ ಬಗ್ಗೆ ಅರಿವು ಮೂಡಿಸಲು ಪಶು ಸಂಗೋಪನಾ ಇಲಾಖೆಯ ಸಿಬ್ಬಂದಿ ಶ್ರಮಿಸುತ್ತಿದ್ದಾರೆ. ಅಧಿಕಾರಿಗಳ ಶ್ರಮ ಇನ್ನೂ ತಳಮಟ್ಟಕ್ಕೆ ತಲುಪಿಲ್ಲ. ಇದುವರೆಗೆ ತಮ್ಮನ್ನು ಯಾವ ಅಧಿಕಾರಿಯೂ ಭೇಟಿಯಾಗಿಲ್ಲ, ಯಾವ ಮಾಹಿತಿಯನ್ನೂ ನೀಡಿಲ್ಲ ಎನ್ನುತ್ತಾರೆ ದಾವಣಗೆರೆ ಜಿಲ್ಲೆಯ ಕುಣೆಬೆಳಕೆರೆಯ ರೈತ ಚಂದ್ರು ಪೂಜಾರ.

ಸಿಬ್ಬಂದಿ ಕೊರತೆ: ರೋಗದ ಬಗ್ಗೆ ಅರಿವು ಮೂಡಿಸಲು, ಲಸಿಕೆ ಹಾಕಲು ಹಾಗೂ ಜಾನುವಾರುಗಳ ಆರೋಗ್ಯ ಪರೀಕ್ಷಿಸಲು ಸಮರ್ಪಕ ಸಿಬ್ಬಂದಿಗಳಿಲ್ಲ. ಹಲವು ಜಿಲ್ಲೆಗಳಲ್ಲಿ ಪಶು ವೈದ್ಯರು ಹಾಗೂ ಸಹಾಯಕ ಸಿಬ್ಬಂದಿಯ ಕೊರತೆ ಸಾಕಷ್ಟಿದೆ. ಇದರಿಂದಾಗಿ ಲಸಿಕಾಕರಣ ಪ್ರಕ್ರಿಯೆಯು ನಿಧಾನಗತಿಯಲ್ಲಿ ಸಾಗುತ್ತಿದೆ.

ಲಸಿಕೆ ಕೊರತೆ: ಈ ಕಾಯಿಲೆಗೆ ನಿರ್ದಿಷ್ಟವಾದ ಲಸಿಕೆಯನ್ನು ಇನ್ನೂ ಕಂಡುಹಿಡಿದಿಲ್ಲ. ಪ್ರಯೋಗಗಳು ಇನ್ನೂ ನಡೆಯುತ್ತಲೇ ಇವೆ. ತಾತ್ಕಾಲಿಕ ಶಮನಕ್ಕಾಗಿ ವೈದ್ಯಾಧಿಕಾರಿಗಳು ಗೋಟ್‌ಪಾಕ್ಸ್ ಲಸಿಕೆಗೆ ಮೊರೆಹೋಗಿದ್ದಾರೆ. ಕುರಿ ಜ್ವರ (ಶೀಪ್ ಪಾಕ್ಸ್), ಮೇಕೆ ಜ್ವರಕ್ಕೆ (ಗೋಟ್ ಪಾಕ್ಸ್) ಕಾರಣವಾಗುವ ವೈರಾಣುವೇ ಚರ್ಮಗಂಟು ರೋಗಕ್ಕೂ ಕಾರಣ ಎಂಬುದು ಸಂಶೋಧನೆಯಿಂದ ದೃಢಪಟ್ಟಿದ್ದರಿಂದ ಅದೇ ಲಸಿಕೆಯನ್ನು ನೀಡಲಾಗುತ್ತಿದೆ ಎನ್ನುತ್ತಾರೆ ತಜ್ಞರು.

ಈ ಲಸಿಕೆಯೂ ಈಗ ಸಮರ್ಪಕವಾಗಿ ಲಭ್ಯವಿಲ್ಲ. ರಾಜ್ಯದಲ್ಲಿ 1.10 ಕೋಟಿ ಜಾನುವಾರುಗಳಿವೆ. ಇವುಗಳಲ್ಲಿ ಇದುವರೆಗೆ 6.42 ಲಕ್ಷ ಜಾನುವಾರುಗಳಿಗೆ ಮಾತ್ರ ಲಸಿಕೆ ನೀಡಲಾಗಿದೆ. ಲಸಿಕೆಯು ಕೇಂದ್ರ ಸರ್ಕಾರದಿಂದ ಪೂರೈಕೆಯಾಗಬೇಕಾಗಿದ್ದು, ಪೂರೈಕೆಯಲ್ಲಿ ವಿಳಂಬವಾಗಿದೆ ಎನ್ನುತ್ತವೆ ಪಶುಸಂಗೋಪನಾ ಇಲಾಖೆಯ ಮೂಲಗಳು.

ರೋಗ ನಿಯಂತ್ರಣ ಮತ್ತು ತಡೆಗಟ್ಟುವುದು

- ರೋಗ ಪೀಡಿತ ರಾಸುಗಳನ್ನು ಆರೋಗ್ಯವಂತ ರಾಸುಗಳಿಂದ ಬೇರ್ಪಡಿಸಿ ಕೂಡಲೇ ಪಶುವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆಗೊಳಪಡಿಸಬೇಕು. ದನಗಳ ಕೊಟ್ಟಿಗೆಯನ್ನು ನಿತ್ಯ ಶುಚಿಗೊಳಿಸಬೇಕು.
- ಸೊಳ್ಳೆಗಳು, ನೊಣಗಳ ಹಾವಳಿಯನ್ನು ತಡೆಯಲು ನೊಣ, ಕೀಟ ನಿವಾರಣೆ ಮುಲಾಮು ಹಚ್ಚಿ ಹತೋಟಿಯಲ್ಲಿಡಬೇಕು. ದನಗಳಿಗೆ ಹರ್ಬಲ್ ಆಯಿಲ್ ಹಚ್ಚಬಹುದು ಅಥವಾ ಕೊಟ್ಟಿಗೆಯೊಳಗೆ ಸೊಳ್ಳೆಗಳು ಹೋಗದಂತೆ ದೊಡ್ಡ ನೆಟ್ ಹಾಕಬೇಕು. ಸಂಜೆ ವೇಳೆ ಬೇವಿನ ಎಲೆಗಳ ಹೊಗೆ ಹಾಕಿ ಸೊಳ್ಳೆ, ನೊಣಗಳನ್ನು ಓಡಿಸಬೇಕು.
- ರೋಗ ಕಾಣಿಸಿಕೊಂಡಿರುವ ಪ್ರದೇಶದಲ್ಲಿ ಜಾನುವಾರು ಸಾಗಾಣಿಕೆಯ ಮೇಲೆ ನಿರ್ಬಂಧ ವಿಧಿಸಬೇಕು. ರೋಗ ಕಂಡುಬಂದ ಪ್ರದೇಶದಿಂದ 5 ಕಿ.ಮೀ. ವ್ಯಾಪ್ತಿಯ ಗ್ರಾಮಗಳಲ್ಲಿನ ಜಾನುವಾರುಗಳಿಗೆ ಲಸಿಕೆ ಹಾಕಬೇಕು.
- ದನದ ಕೊಟ್ಟಿಗೆ ಸ್ವಚ್ಛಗೊಳಿಸಿ ಸೂಕ್ತವಾದ, ಅಂಟು ಜಾಡ್ಯ ನಿವಾರಕಗಳಾದ ಶೇ 2ರಿಂದ ಶೇ3ರಷ್ಟು ಸೋಡಿಯಂ ಹೈಪೋಕ್ಲೋರೈಡ್, ಶೇ 1ರಷ್ಟು ಫಾರ್ಮಲಿನ್, ಶೇ 2ರಷ್ಟು ಫಿನಾಲ್ ದ್ರಾವಣಗಳನ್ನು ಪಶುವೈದ್ಯರ ಸಲಹೆಯ ಮೇರೆಗೆ ಸಿಂಪಡಿಸಬೇಕು.
- ಸೋಂಕು ಕಾಣಿಸಿಕೊಂಡ ಜಾನುವಾರುಗಳು ನರಳುವುದು ಸಹಜ. ಅವುಗಳಿಗೆ ನೋವು ನಿವಾರಕ, ರೋಗ ನಿರೋಧಕ, ಶಕ್ತಿವರ್ಧಕ ಔಷಧಿ, ಪೋಷಕಾಂಶ ಹಾಗೂ ಖನಿಜಾಂಶದ ಮಾತ್ರೆಗಳನ್ನು ಕೊಡಬೇಕು. ಏಳು ದಿನ ನಿರಂತರ ಉಪಚಾರ ಮಾಡಬೇಕು. ಗಂಟು ಒಡೆದರೆ ಗುಣಮುಖವಾಗಲು ಕನಿಷ್ಠ 15 ದಿನ ಬೇಕು. ಗುಳ್ಳೆ ಒಡೆದ ಜಾಗದಲ್ಲಿ ಅರಿಶಿನ ಹಚ್ಚಬಹುದು. ಬೇಗ ವಾಸಿಯಾಗುತ್ತದೆ. ಈ ರೋಗ ಮನುಷ್ಯರಿಗೆ ಹರಡುವುದಿಲ್ಲ.

ನಾ ಸಾಕಿದ ಎರಡು ಹಸುಗಳು ಚರ್ಮಗಂಟು ರೋಗಕ್ಕೆ ಬಲಿಯಾದವು. ಮುಂದಿನ ವರ್ಷದ ವೇಳೆಗೆ ಆ ಎರಡೂ ಹಸುಗಳು ಹಾಲು ಕೊಡುವ ನಿರೀಕ್ಷೆ ಇತ್ತು. ಒಂದೊಂದರ ಬೆಲೆ ಕನಿಷ್ಠ ₹ 60,000ದಷ್ಟಿತ್ತು. ಚಿಕಿತ್ಸೆಗಾಗಿ ₹ 10,000 ಖರ್ಚು ಮಾಡಿದ್ದೆ. ಆದರೂ ಪ್ರಯೋಜನವಾಗಲಿಲ್ಲ. ಈಗ ಮತ್ತೊಂದು ಹಸು ಕೂಡ ಕಾಯಿಲೆಯಿಂದ ಬಳಲುತ್ತಿದ್ದು, ದಿಕ್ಕೇ ತೋಚದಂತಾಗಿದೆ

ಕೆ.ಜಿ. ಕೊಟ್ರೇಶಪ್ಪ
ರೈತ, ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕು ಹೊಳೆಸಿರಿಗೆರೆ

ಸರ್ಕಾರದ ಘೋಷಣೆಯಂತೆ ಪರಿಹಾರ ವಿತರಣೆ ಆರಂಭಿಸಲಾಗಿದೆ. ಮೃತ ರಾಸುಗಳ ಮಾಲೀಕರಿಗೆ ತಲಾ 20,000, ಎತ್ತುಗಳಿಗೆ ತಲಾ 30,000 ಮತ್ತು ಕರುಗಳಿಗೆ ತಲಾ 5,000 ಪರಿಹಾರ ನೀಡಲಾಗುತ್ತಿದೆ.

ಡಾ.ಮಂಜುನಾಥ್ ಎಸ್.ಪಾಳೇಗಾರ
ನಿರ್ದೇಶಕ, ಪಶು ಸಂಗೋಪನಾ ಇಲಾಖೆ

ನಾಟಿ ಔಷಧ ಮೊರೆ ಹೋದ ರೈತರು: ಚಿಕ್ಕಬಳ್ಳಾಪುರ ಜಿಲ್ಲೆಯ ಕೆಲವೆಡೆ ರೈತರು ನಾಟಿ ಔಷಧಕ್ಕೆ ಮೊರೆಹೋಗಿದ್ದಾರೆ. ವೀಳ್ಯದೆಲೆ, ಮೆಣಸು, ಉಪ್ಪು ಮತ್ತು ಬೆಲ್ಲವನ್ನು ರುಬ್ಬಿ ತಿನ್ನಿಸುತ್ತಿದ್ದಾರೆ. ಇದು ಎಷ್ಟರ ಮಟ್ಟಿಗೆ ಪರಿಣಾಮಕಾರಿ ಎನ್ನುವುದು ಸಾಬೀತಾಗಿಲ್ಲ.

ಸಾಕಿದ ಜಾನುವಾರುಗಳ ಬಗ್ಗೆ ರೈತರು ಎಚ್ಚರ ವಹಿಸುತ್ತಾರೆ.

ಜಿಲ್ಲೆಗಳು	ರೋಗದಿಂದ ಮೃತಪಟ್ಟ ಜಾನುವಾರುಗಳು	ಗುಣಮುಖವಾದ ರಾಸುಗಳು
ಬೆಳಗಾವಿ	176	905
ಗದಗ	171	3,050
ವಿಜಯಪುರ	00	01
ಉತ್ತರ ಕನ್ನಡ	01	11
ಬಳ್ಳಾರಿ	15	689
ವಿಜಯನಗರ	401	18,284
ಹಾವೇರಿ	640	4,491
ಬಾಗಲಕೋಟೆ	02	45
ಧಾರವಾಡ	17	851
ಕಲಬುರಗಿ	03	111
ಯಾದಗಿರಿ	00	05
ಬೀದರ್	07	277
ರಾಯಚೂರು	01	153
ಕೊಪ್ಪಳ	40	1,751
ಚಿಕ್ಕಮಗಳೂರು	01	826
ದಕ್ಷಿಣ ಕನ್ನಡ	01	02
ಬೆಂಗಳೂರು ಗ್ರಾಮಾಂತರ ಜಿಲ್ಲೆ	15	488
ಮೈಸೂರು	01	17
ಚಾಮರಾಜನಗರ	00	80
ಮಂಡ್ಯ	00	05
ಹಾಸನ	01	22
ಚಿಕ್ಕಬಳ್ಳಾಪುರ	03	205
ಕೋಲಾರ	60	1,671
ರಾಮನಗರ	04	14
ತುಮಕೂರು	01	311
ಶಿವಮೊಗ್ಗ	16	320
ದಾವಣಗೆರೆ	47	722
ಚಿತ್ರದುರ್ಗ	11	46

ಉಡುಪಿ ಮತ್ತು ಕೊಡಗು ಜಿಲ್ಲೆಯಲ್ಲಿ ಯಾವ ಜಾನುವಾರಿಗೂ ಈ ಕಾಯಿಲೆ ಬಂದಿಲ್ಲ

ಆದರೆ, ದೇವರಿಗೆ ಬಿಟ್ಟ ಹೋರಿಗಳಿಗೆ ರೋಗ ಬರುತ್ತಿದೆ. ಈ ಹೋರಿಯಿಂದ ಸುತ್ತಮುತ್ತಲ ಜಾನುವಾರುಗಳಿಗೆ ರೋಗ ಹರಡುವ ಅಪಾಯವಿದೆ. ಈ ಬಗ್ಗೆಯೂ ಸ್ಥಳೀಯ ಗ್ರಾಮ ಪಂಚಾಯಿತಿಗಳು ಕ್ರಮ ಕೈಗೊಳ್ಳಬೇಕು ಎಂಬುದು ಮಲ್ಲನಾಯಕನಹಳ್ಳಿಯ ರೇವಣಸಿದ್ದಪ್ಪ ಅವರ ಒತ್ತಾಯ.

ಪರಿಹಾರ ಸಾಕಾಗದು: ರೋಗ ನಿವಾರಣೆಗೆ ಲಸಿಕೆ, ಚಿಕಿತ್ಸೆ ನೀಡಲು ಹಾಗೂ ಮೃತಪಟ್ಟ ರಾಸುಗಳ ಮಾಲೀಕರಿಗೆ ಪರಿಹಾರ ಒದಗಿಸಲು ₹ 13 ಕೋಟಿ ಬಿಡುಗಡೆ ಮಾಡಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಆರ್ಥಿಕ ಇಲಾಖೆಗೆ ಸೂಚಿಸಿದ್ದಾರೆ. ರೋಗದಿಂದ ಸತ್ತ ಹಸುವಿಗೆ ₹ 20 ಸಾವಿರ ಹಾಗೂ ಸತ್ತ ಎತ್ತಿಗೆ ₹ 30 ಸಾವಿರ ಪರಿಹಾರವನ್ನು ಘೋಷಿಸಿದ್ದಾರೆ. ಆದರೆ, ಈ ಪರಿಹಾರ ಸಾಕಾಗುವುದಿಲ್ಲ. ಪರಿಹಾರ ಮೊತ್ತವನ್ನು ಹೆಚ್ಚಿಸಬೇಕು. ರೋಗ ತಡೆಯಲು ಸೂಕ್ತ ಲಸಿಕೆ ಕಂಡುಹಿಡಿಯಬೇಕು ಎಂದು ರೈತರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಪೂರಕ ಮಾಹಿತಿ: ಚಂದ್ರಕಾಂತ ಮಸಾನಿ, ಬಾಲಕೃಷ್ಣ ಪಿ.ಎಚ್., ಓಂಕಾರಮೂರ್ತಿ, ಸಚ್ಚಿದಾನಂದ ಕುರಗುಂದ

ಮೇಕೆ ಜ್ವರ ಲಸಿಕೆಗೆ ಮೊರೆ


ದಾವಣಗೆರೆ: ಜಾನುವಾರುಗಳಲ್ಲಿ ಒಂದೇ ಸಮನೆ ಹರಡುತ್ತಿರುವ ಚರ್ಮಗಂಟು ರೋಗ ತಡೆಗಟ್ಟಲು ಗೋಟ್‌ಪಾಕ್ಸ್ ಲಸಿಕೆಯೇ ಸದ್ಯ ಲಭ್ಯವಿರುವ ಔಷಧ ಎಂದು ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ ತಿಳಿಸಿದೆ.

ರಾಜ್ಯಕ್ಕೆ ಈಗಾಗಲೇ 10 ಲಕ್ಷ ಡೋಸ್ ಲಸಿಕೆ ಬಂದಿದೆ. ಶೀಘ್ರವೇ 30 ಲಕ್ಷ ಡೋಸ್ ಲಸಿಕೆ ಬರುವ ನಿರೀಕ್ಷೆ ಇದೆ. ನವೆಂಬರ್ 15ರೊಳಗೆ ಮತ್ತೆ 50 ಲಕ್ಷ ಡೋಸ್ ಲಸಿಕೆ ಪೂರೈಕೆಯಾಗಲಿದ್ದು, ಬಹುತೇಕ ಜಾನುವಾರುಗಳಿಗೆ ಲಸಿಕೆ ನೀಡುವ ಕಾರ್ಯ ಪೂರ್ಣಗೊಳ್ಳಲಿದೆ ಎಂದು ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ನಿರ್ದೇಶಕ ಡಾ. ಮಂಜು ಪಾಳೇಗಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

ವಿಮೆಯ ಅರಿವಿಲ್ಲ: ಮೃತಪಟ್ಟ ಎತ್ತಿನ ಮಾಲೀಕರಿಗೆ ₹ 30,000, ಹಸುಗಳ ಮಾಲೀಕರಿಗೆ ₹ 20,000 ಪರಿಹಾರವನ್ನು ಸರ್ಕಾರ ಘೋಷಿಸಿದೆ. ಇದು ಸಾಕಾಗುವುದಿಲ್ಲ. ವಿಮೆ ಇದ್ದಿದ್ದರೆ ಆಕಳು ಕಳೆದುಕೊಂಡಿದ್ದರಿಂದ ಆಗುವ ನಷ್ಟವು ವಿಮೆಯಿಂದ ಬರುತ್ತಿತ್ತು. ಆದರೆ, ನಮ್ಮಲ್ಲಿರುವ ಶೇ 2ರಷ್ಟು ಜಾನುವಾರುಗಳಿಗೂ ವಿಮೆ ಮಾಡಿಸಿಲ್ಲ. ದಾವಣಗೆರೆ ಜಿಲ್ಲೆಯಲ್ಲಿ 3.28 ಲಕ್ಷ ಜಾನುವಾರು ಇದ್ದರೂ 4,053 ಹಸುಗಳಿಗಷ್ಟೇ ವಿಮೆ ಇದೆ ಎಂದು ಹರಿಹರದ ರೈತ ಕುಮಾರ್ ದೂರಿದರು.

‘ವಿಮೆಯ ಒಟ್ಟು ಮೊತ್ತದ ಶೇ ಎರಡರಷ್ಟು ಮೊತ್ತ ಪ್ರೀಮಿಯಂ ಆಗಿರುತ್ತದೆ. ಅಂದರೆ, ಒಂದು ಜಾನುವಾರಿಗೆ ₹ 50,000 ವಿಮೆ ಮಾಡಿಸುವುದಾದರೆ, ವರ್ಷಕ್ಕೆ ₹ 1,000 ಪ್ರೀಮಿಯಂ ಇರಲಿದೆ. ಈ ಪ್ರೀಮಿಯಂನಲ್ಲಿ ಎಸ್‌ಸಿ/ ಎಸ್‌ಟಿ ಸಮುದಾಯದವರು ಶೇ 25ರಷ್ಟು, ಉಳಿದವರು ಶೇ 50ರಷ್ಟು ಭರಿಸಬೇಕು. ಉಳಿದ ಮೊತ್ತವನ್ನು ಸರ್ಕಾರ ಭರಿಸುತ್ತದೆ. ಜಾನುವಾರು ಸತ್ತರಷ್ಟೇ ಸಿಗುವ ವಿಮೆ ಇದಾಗಿರುವುದರಿಂದ ಎಷ್ಟೇ ಒತ್ತಾಯಿಸಿದರೂ ರೈತರು ವಿಮೆ ಮಾಡಲು ಮುಂದಾಗುತ್ತಿಲ್ಲ’ ಎಂದು ಡಾ. ಚಂದ್ರಶೇಖರ್ ಸುಂಕದ ವಿವರಿಸಿದರು.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 16-10-1997

- **ಕೊಲಂಬೊ: ಬಾಂಬ್ ದಾಳಿಗೆ 26 ಜನರ ಸಾವು**

ಕೊಲಂಬೊ, ಅಕ್ಟೋಬರ್ 15 (ಪಿಟಿಐ, ಯುಎನ್‌ಐ)– ಜನನಿಬಿಡ ವಾಣಿಜ್ಯ ಪ್ರದೇಶದಲ್ಲಿ ಎಲ್‌ಟಿಟಿಇ ಉಗ್ರಗಾಮಿಗಳು ಇಂದು ಬೆಳಿಗ್ಗೆ ನಡೆಸಿದ ಬೃಹತ್ ಸ್ಫೋಟಕಗಳ ದಾಳಿಯಲ್ಲಿ ಭಾರಿ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ 17 ಎಲ್‌ಟಿಟಿಇ ಗೆರಿಲ್ಲಾಗಳು ಮತ್ತು ಬೌದ್ಧ ಸನ್ಯಾಸಿ ಸೇರಿದಂತೆ ಒಟ್ಟು 26 ಮಂದಿ ಮೃತಪಟ್ಟರಲ್ಲದೇ ನೂರಕ್ಕೂ ಹೆಚ್ಚು ನಾಗರಿಕರು ಗಾಯಗೊಂಡರು.

ಸ್ಫೋಟಕಗಳಿಂದ ತುಂಬಿದ್ದ ಟ್ರಕ್ಕೊಂದು ಇಂದು ಬೆಳಿಗ್ಗೆ ಗಲಾದ್ರಿ ಪಂಚತಾರಾ ಹೋಟೇಲ್ ಪಕ್ಕದಲ್ಲಿ ಸ್ಫೋಟಗೊಂಡಿತು.

50 ವರ್ಷಗಳ ಹಿಂದೆ

ಸೋಮವಾರ, 16-10-1972

- **ರಾಜ್ಯದಲ್ಲಿ ಮತ್ತೊಂದು ಗೊಬ್ಬರ ಕಾರ್ಖಾನೆ ಸ್ಥಾಪನೆಗೆ ಅರಸು ಕರೆ**

ಬೆಂಗಳೂರು, ಅಕ್ಟೋಬರ್ 15 – ರಾಜ್ಯದಲ್ಲಿ ಎರಡನೆಯ ರಾಸಾಯನಿಕ ಗೊಬ್ಬರ ಕಾರ್ಖಾನೆ ಸ್ಥಾಪಿಸಲು ಮುಖ್ಯಮಂತ್ರಿ ದೇವರಾಜ ಅರಸು ಅವರು ಇಂದು ಇಲ್ಲಿ ಒತ್ತಾಯಪಡಿಸಿದರು.

ಪಣಂಬೂರು ಬಂದರು ನಿರ್ಮಾಣ ಸ್ಥಳದ ಸಮೀಪ ನಡೆದ ವರ್ಣರಂಜಿತ ಸಮಾರಂಭದಲ್ಲಿ ಅರವತ್ತು ಕೋಟಿ ರೂ. ವೆಚ್ಚದ ಬೆಂಗಳೂರು ರಾಸಾಯನಿಕ ಗೊಬ್ಬರ ಕಾರ್ಖಾನೆಯ ಶಂಕುಸ್ಥಾಪನೆ ನೆರವೇರಿಸಿದ ಅವರು ರಾಸಾಯನಿಕ ಗೊಬ್ಬರಗಳ ಪ್ರಗತಿಪರ ಬಳಕೆ ಮೂಲಕ ಅಧಿಕ ಕೃಷಿ ಉತ್ಪಾದನೆ ಸಾಧಿಸಲು ದೂರದೃಷ್ಟಿಯ ಯೋಜನೆ ಅಗತ್ಯವೆಂದು ಒತ್ತಿ ಹೇಳಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಅಕ್ಟೋಬರ್ 16, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ಷಷ್ಠಿ ಗಂ. 07-04 ನಕ್ಷತ್ರ: ಆರ್ದ್ರಾ ಗಂ. 26-15 ಯೋಗ: ಪರಿಘ ಗಂ. 15-08, ಕರಣ: ವಣಿಜ ಗಂ. 07-04, ಕನ್ಯಾ ಮಾಸದ 29 ನೇ ದಿನ.
ರಾಹುಕಾಲ : ಸಾಯಂಕಾಲ 04-30 – 06:00
ಸೂರ್ಯೋದಯ : 06-24 ಸೂರ್ಯಾಸ್ತ : 06-07
ಮುಸ್ಲಿಂ ದಿನಾಂಕ : 19 ರಬಿಉಲ್ಲಾವಲ್
ಅದೃಷ್ಟ ಸಂಖ್ಯೆ : 4, 10

ಮೇಷ: ಹೊಸ ವಾಹನ ಖರೀದಿ ಅಗತ್ಯವೆನಿಸುತ್ತದೆ. ನಿಮ್ಮ ಮಾನಸಿಕ ಶಕ್ತಿಗಳು ಬಲಯುತವಾಗಿ ಇಂದು ನಿಮ್ಮ ಯೋಚನೆಗಳನ್ನು ಶೀಘ್ರವೇ ಕಾರ್ಯರೂಪಕ್ಕೆ ಇಳಿಸುತ್ತೀರಿ. ತಾಂತ್ರಿಕ ವಿದ್ಯಾರ್ಥಿಗಳಿಗೆ ಸುಲಭವಾಗಿ ನೌಕರಿ ಸಿಗುವ ಲಕ್ಷಣವಿದೆ.

ವೃಷಭ: ಕುಟುಂಬದಲ್ಲಿ ನಿಮ್ಮ ಮಾತಿಗೆ, ಶ್ರಮಕ್ಕೆ ಉತ್ತಮ ಸಹಕಾರದ ವಾತಾವರಣವಿದ್ದು ಸಂತಸ, ಸಮಾಧಾನ ತರಲಿದೆ. ಕಮಿಷನ್ ಏಜೆಂಟ್‌ಗಳಿಗೆ ಅಧಿಕ ಆದಾಯ ಉಂಟಾಗುವುದು. ಅವಿವಾಹಿತರಿಗೆ ಕಂಕಣ ಭಾಗ್ಯ ಕೂಡಿಬರಲಿದೆ.

ಮಿಥುನ: ದಿನದ ಆರಂಭದಿಂದಲೇ ಹಂತ ಹಂತವಾಗಿ ಪ್ರಗತಿದಾಯಕವಾಗಲಿದೆ. ನಿಮ್ಮನ್ನು ನೀವೇ ವಿಮರ್ಶಿಸಿಕೊಳ್ಳಿ. ನಿಮ್ಮ ಸರಿ ತಪ್ಪುಗಳು ನಿಮಗೇ ಅರಿವಾಗುವುದು. ಭವಿಷ್ಯತ್ತಿನ ನಿಶ್ಚಿತತೆಯಿಂದ ಮಾನಸಿಕ ನೆಮ್ಮದಿ.

ಕರ್ಕಾಟಕ: ಅನವಶ್ಯಕ ಚಿಂತೆ, ದೂರ ಪ್ರವಾಸದಿಂದ ಅನವಶ್ಯಕ ಖರ್ಚು. ಹಾಳು ವ್ಯಸನಗಳು ಈ ದಿನ ನಿಮ್ಮನ್ನು ಆವರಿಸಿಕೊಳ್ಳಬಹುದು, ಎಚ್ಚರದಿಂದಿರಿ. ಕ್ರೀಡಾಪಟುಗಳ ಅಭ್ಯಾಸದ ಕೊರತೆಯು ವೈಫಲ್ಯಕ್ಕೆ ಕಾರಣವಾಗುವುದು.

ಸಿಂಹ: ಕುಟುಂಬದ ಸದಸ್ಯರಲ್ಲಿ ನಿಮ್ಮ ಬಾಲ್ಯದ ಕ್ಷಣಗಳನ್ನು ನೆನಪಿಸಿಕೊಳ್ಳುವಿರಿ. ಅನ್ಯರ ಗುಣ ನಡತೆಯನ್ನು ಅವರ ಮೊದಲ ಬೇಟಿಯಲ್ಲಿ ತೀರ್ಮಾನವನ್ನು ಮಾಡಬೇಡಿ. ಪರೋಪಕಾರದ ಫಲ ಮತ್ತು ಆತ್ಮವಿಶ್ವಾಸ ನಿಮ್ಮನ್ನು ರಕ್ಷಿಸಲಿದೆ.

ಕನ್ಯಾ: ನಿಮಗೆ ಕಾಡುವ ಸಮಸ್ಯೆಯಿಂದಾಗಿ ಯಾರಲ್ಲೂ ನಂಬಿಕೆ ಇಡದಂಥ ಪರಿಸ್ಥಿತಿ ತೋರಿಬರುವುದು. ನಂಬಿಕಸ್ಥರ ಮೋಸವನ್ನು ಮರೆಯಲು ಅಥವಾ ತಡೆದುಕೊಳ್ಳಲು ಕಷ್ಟವಾಗುತ್ತದೆ. ಲಕ್ಷ್ಮೀನರಸಿಂಹನ ಆರಾಧನೆಯಿಂದ ಶುಭ.

ತುಲಾ: ನಿಮಗಿಂದು ಸ್ನೇಹಿತರಿಂದ ಅಪೇಕ್ಷಿಸುವ ಸಹಕಾರ ಸಿಗಲಿದೆ. ಬಂಧುಗಳ ಮನೆಯ ಸತ್ಕಾರ ಕೂಟಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಿರಿ. ಹೆಚ್ಚಿನ ಹೊಣೆಗಾರಿಕೆಯನ್ನು ಹೊರಲು ನೀವು ಸಿದ್ಧರಾಗಿರುವಿರಿ ಮತ್ತು ಶಕ್ತರಾಗಿರುವಿರಿ.

ವೃಶ್ಚಿಕ: ವೃತ್ತಿ ಪರವಾಗಿ ಯಾವುದೇ ಬದಲಾವಣೆಗೆ ಇಂದು ಸಮಂಜಸ ದಿನವಲ್ಲ. ವಿದೇಶ ವ್ಯವಹಾರಗಳಿಂದ ಹೆಚ್ಚಿನ ಲಾಭ. ಸ್ವ ಉದ್ಯೋಗಿಗಳಿಗೆ ವರಮಾನದಲ್ಲಿ ಉತ್ತಮ ಸುಧಾರಣೆಯು ಕಂಡು ಬರುವುದು.

ಧನು: ಕಬ್ಬಿಣ ಅಥವಾ ಗ್ಲಾಸ್‌ನಿಂದ ಗಾಯವಾಗುವ ಲಕ್ಷಣ. ಅಂತಹ ವಸ್ತು ಬಳಸುವ ಕೆಲಸ ಕಾರ್ಯಗಳಲ್ಲಿ ಅಧಿಕ ಗಮನವಿರಲಿ. ತಾಂತ್ರಿಕ ಕ್ಷೇತ್ರದಲ್ಲಿರುವವರು ಸೋಲನ್ನು ಒಪ್ಪಿಕೊಳ್ಳುವ ಮನಸ್ಥಿತಿಯನ್ನು ರೂಢಿಸಿಕೊಳ್ಳಬೇಕಾಗುತ್ತದೆ.

ಮಕರ: ಬಹುದಿನಗಳಿಂದ ಕೂಡಿಟ್ಟ ಹಣದಿಂದ ಬಂಗಾರ ಖರೀದಿಸುವ ಮನಸ್ಸಾಗುವುದು, ಹಾಗೆ ಮಾಡುವುದರಿಂದ ಲಾಭ ಹೊಂದುವಿರಿ. ಮನಸ್ಸಿಗೆ ಮುದ ನೀಡುವ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಭಾಗವಹಿಸುವಿರಿ.

ಕುಂಭ: ವ್ಯಾಪಾರ-ವ್ಯವಹಾರದಲ್ಲಿ ಲಾಭಾಂಶ ಕಡಿಮೆಯಾದರೂ ಮೂಲಧನಕ್ಕೆ ಮೋಸವಾಗುವುದಿಲ್ಲ. ಆಟಿಕೆಗಳ ಮಾರಾಟದವರಿಗೆ ಲಾಭ. ವಿದ್ಯಾರ್ಥಿಗಳಿಗೆ ಓದಿನತ್ತ ಗಮನ ಹೆಚ್ಚುವುದು.


ಮೀನ: ಸಂಗೀತ ಕಲಾವಿದರಿಗೆ ಉತ್ತಮ ವೇದಿಕೆಯ ಮುನ್ಸೂಚನೆ ಸಿಗಲಿದೆ. ಓದು ಅಥವಾ ಉದ್ಯೋಗ ಆಯ್ಕೆ ವಿಚಾರದಲ್ಲಿ ಸ್ನೇಹಿತರಿಂದ ಸೂಕ್ತ ಸಲಹೆ. ಎದುರಾಗುವ ಸಂದಿಗ್ಧ ಪರಿಸ್ಥಿತಿಗಳನ್ನು ಧೈರ್ಯದಿಂದ ಎದುರಿಸಿ.

ಪದಬಂಧ 5110

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಗಿಲಿ ಗಿಲಿ ಶಬ್ದಮಾಡುವ ಮಕ್ಕಳಾಟಿಕೆ (3)
2.ಜಲದಲ್ಲಿ ಹುಟ್ಟಿರುವ ತಾವರೆ (3)
4.ಆರೋಹದ ನಂತರ ಇಳಿಯುವಿಕೆ (4)
7.ಮಾಡಿದ ಕೆಲಸಕ್ಕೆ ಪ್ರತಿಯಾಗಿ ದೊರೆತ ಲಾಭ (4)
9.ವನದಲ್ಲಿದ್ದವನದು ಹೊಸಪ್ರಾಯ (5)
12.ಸ್ವಾಮಿಗಿರುವ ಆತ್ಮಾಭಿಮಾನ (4)
13.ಶುರುವಿನಲ್ಲೇ ಕೇಳಿದ ಲಂಚ (4)
15.ಕಕ್ಷದಲ್ಲಿ ಗೋಚರಿಸಿದ ತಾರೆ (3)
16.ಮನದಿಂದ ಮಾಡಿಕೊಂಡಿರುವ ಅರಿಕೆ (3)

ಮೇಲಿಂದ ಕೆಳಕ್ಕೆ
1.ಅಂಗಿ ತೊಟ್ಟಿಕೊಳ್ಳುವಾಗ ಪತ್ನಿ ತಿರುಗಿದ್ದಾಳಲ್ಲಾ? (3)
3.ಕುಟಿಲತೆ ತೋರುವಲ್ಲಿನ ಸಂಕೀರ್ಣ (3)
5.ವಠಾರದಲ್ಲಿರುವ ಮದುವೆ ಗಂಡು (2)
6.ಇದು ಕುದುರೆ ಮುಖ (5)
7.ಪ್ರತಿಭಾವಂತನಿಗೆ ಹೀಗೆ ವರ್ಚಸ್ಸು ಬೀರು! (5)
8.ಫಲಕದ ಹತ್ತಿರವಿರುವ ಹಣ್ಣು (2)
10.ಅಭಿನಯಿಸುವಾಗ ತೋರಿಸಿದ ಹೊಕ್ಕುಳು (2)
11.ಮನವನ್ನು ಸೆಳೆದ ಹೊಸತು (2)
12.ಸ್ವಾಭಿಮಾನದಿಂದ ಪಡಿಸಿಕೊಂಡಿರುವ ವಶ! (3)
14.ಆ ಹೊತ್ತು ಒದಗಿದ ತೊಂದರೆಯಿಲ್ಲಿ ಉಲ್ಟಾ! (3)



5109ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ರಣರಂಗ 5.ಜಾಯಮಾನ
6.ದಾರಿಹೋಕ 8.ಕಳಕಳಿ
11.ಮಕರಂದ 13.ಸವಿಸ್ತಾರ
15.ಪ್ರಕರಣ 16.ಕರಗತ

ಮೇಲಿಂದ ಕೆಳಕ್ಕೆ:
1.ಹಜಾರ 2.ಪ್ರಾಮಾಣಿಕ
3.ರಸದಾಳಿ 4.ಗಣಕ
7.ಹೋಲಿಕೆ 9.ಕಳಂಕ
10.ಹರವಿ 11.ಮರಕತ
12.ದಸಕತ್ತು 13.ಸರೀಕ
14.ಪ್ರಣಯ

ಸುಡೊಕು 5496

	7			2				5
3		6	5		8			
	4			7		2		
	6				5			
9		1		8			6	2
4			2			1	3	
		2	3		7		5	
7	1			5		6		3
5		3	4					1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5495 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ಇಂದಿನಿಂದ ಆರ್‌ಎಸ್‌ಎಸ್ ಕಾರ್ಯಕಾರಿಣಿ: ದಲಿತರ ಓಲೈಕೆ ಕುರಿತು ಚರ್ಚೆ

ನವದೆಹಲಿ: ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ನಾಲ್ಕು ದಿನಗಳ ರಾಷ್ಟ್ರೀಯ ಕಾರ್ಯಕಾರಿಣಿ ಉತ್ತರಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಭಾನುವಾರ ಆರಂಭವಾಗಲಿದೆ. ದಲಿತರ ಓಲೈಕೆ ನೀತಿಯನ್ನು ಬಲಪಡಿಸಲು ಅನುಸರಿಸಬೇಕಾದ ಮಾರ್ಗೋಪಾಯಗಳ ಕುರಿತು ಸಭೆಯಲ್ಲಿ ಮುಖ್ಯವಾಗಿ ಚರ್ಚೆ ನಡೆಯುವ ಸಾಧ್ಯತೆ ಇದೆ.

2025ರಲ್ಲಿ ಆರ್‌ಎಸ್‌ಎಸ್ ಶತಮಾನೋತ್ಸವ ಕಾರ್ಯಕ್ರಮ ನಡೆಸಲು ಉದ್ದೇಶಿಸಿದ್ದು, ಇದರ ಪೂರ್ವಭಾವಿ ಸಿದ್ಧತೆ, 2024ರ ವೇಳೆಗೆ ಸಂಘದ ಶಾಖೆಗಳನ್ನು 55 ಸಾವಿರದಿಂದ 1 ಲಕ್ಷಕ್ಕೆ ಹೆಚ್ಚಳ ಮಾಡುವ ಕುರಿತೂ ಸಭೆಯಲ್ಲಿ ಚರ್ಚಿಸಲಾಗುತ್ತದೆ.

'ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಇದೇ 5ರಂದು ನಾಗಪುರದಲ್ಲಿ ನಡೆದಿದ್ದ ವಿಜಯದಶಮಿ ಕಾರ್ಯಕ್ರಮದಲ್ಲಿ ಸಂಘದ ಪ್ರಮುಖ ಚಟುವಟಿಕೆಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸುವ, ಮಾತೃಭಾಷೆಯಲ್ಲಿ ಶಿಕ್ಷಣ ನೀಡುವ, ಮುಸ್ಲಿಂ ಬುದ್ಧಿಜೀವಿಗಳು ಹಾಗೂ ಪಾದ್ರಿಗಳೊಂದಿಗೆ ಸಂವಾದ ನಡೆಸುವುದೂ ಸೇರಿದಂತೆ ಅನೇಕ ವಿಚಾರಗಳ ಕುರಿತು ಪ್ರಸ್ತಾಪಿಸಿದ್ದರು. ಇದರ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಸಲಾಗುತ್ತದೆ' ಎಂದು ಆರ್‌ಎಸ್‌ಎಸ್‌ನ ಪ್ರಚಾರ ವಿಭಾಗದ ಮುಖ್ಯಸ್ಥ ಸುನಿಲ್ ಅಂಬೇಡ್ಕರ್ ಮಾಹಿತಿ ನೀಡಿದ್ದಾರೆ.

ಜೈಲಿನಿಂದ ಬಿಡುಗಡೆಗೆ ಬಾಂಬೆ ಹೈಕೋರ್ಟ್ ಶುಕ್ರವಾರ ಆದೇಶ • 'ಸುಪ್ರೀಂ'ನಿಂದ ಶನಿವಾರ ತಡೆ

ಸಾಯಿಬಾಬಾ ಖುಲಾಸೆ ಆದೇಶ ರದ್ದು

ನವದೆಹಲಿ (ಪಿಟಿಐ): ದೆಹಲಿ ವಿಶ್ವವಿದ್ಯಾಲಯದ ಮಾಜಿ ಪ್ರಾಧ್ಯಾಪಕ ಜಿ.ಎನ್. ಸಾಯಿಬಾಬಾ ಅವರನ್ನು ಖುಲಾಸೆಗೊಳಿಸಿ ಬಾಂಬೆ ಹೈಕೋರ್ಟ್ ಶುಕ್ರವಾರ ನೀಡಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ಶನಿವಾರ ರದ್ದುಗೊಳಿಸಿದೆ. ಎಲ್ಲ ಆರೋಪಿಗಳನ್ನು ಜೈಲಿನಿಂದ ಬಿಡುಗಡೆ ಮಾಡುವ ಆದೇಶವನ್ನು ತಡೆಹಿಡಿದಿದೆ.

ನಕ್ಸಲರ ಜೊತೆ ನಂಟು ಹೊಂದಿದ ಆರೋಪದಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿದ್ದ ಸಾಯಿಬಾಬಾ ಅವರನ್ನು ಪ್ರಕರಣದಿಂದ ಖುಲಾಸೆಗೊಳಿಸಿದ್ದ ಬಾಂಬೆ ಹೈಕೋರ್ಟ್‌ನ ನಾಗಪುರ ಪೀಠ, ಅವರನ್ನು ಜೈಲಿನಿಂದ ಬಿಡುಗಡೆ ಮಾಡಲು ಶುಕ್ರವಾರ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಮಹಾರಾಷ್ಟ್ರ ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

ಹೈಕೋರ್ಟ್ ಆದೇಶ ಪ್ರಶ್ನಿಸಿ ಮಹಾರಾಷ್ಟ್ರ ಸರ್ಕಾರ ಸಲ್ಲಿಸಿದ್ದ ಅರ್ಜಿ ಕುರಿತು ತುರ್ತು ಕಲಾಪ ನಡೆಸಿದ ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಹಾಗೂ ಬೇಲಾ ಎಂ. ತ್ರಿವೇದಿ ಅವರ ಪೀಠ, ಪ್ರತಿಕ್ರಿಯೆ ನೀಡುವಂತೆ ಸಾಯಿಬಾಬಾ ಹಾಗೂ ಇತರರಿಗೆ ಡಿಸೆಂಬರ್ 8ರವರೆಗೆ ಕಾಲಾವಕಾಶ ನೀಡಿತು.

ಅನಾರೋಗ್ಯ ಹಾಗೂ ದೈಹಿಕ ಅಸಮರ್ಥತೆ ಕಾರಣಕ್ಕೆ ತಮ್ಮನ್ನು ಗೃಹಬಂಧನದಲ್ಲಿ ಇರಿಸಬೇಕು ಎಂದು ಸಾಯಿಬಾಬಾ ಅವರು ಮಾಡಿದ್ದ ಮನವಿಯನ್ನೂ ಸುಪ್ರೀಂ ಕೋರ್ಟ್ ಇದೇ ವೇಳೆ ತಿರಸ್ಕರಿಸಿತು. ಸಾಯಿಬಾಬಾ ಅವರು ಗೃಹಬಂಧನ ಕುರಿತು ಮಾಡಿದ ಮನವಿಗೆ ವಿರೋಧ ವ್ಯಕ್ತಪಡಿಸಿದ ಮಹಾರಾಷ್ಟ್ರ ಸರ್ಕಾರದ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಗೃಹಬಂಧನದಲ್ಲಿ ಇರಿಸುವಂತೆ ನಗರ ನಕ್ಸಲರು ಕೇಳಿಕೊಳ್ಳುವ ಹೊಸ ಪ್ರವೃತ್ತಿ ಶುರುವಾಗಿದೆ' ಎಂದು ಹೇಳಿತು.

ತಪ್ಪಿತಸ್ಥರ ವಿರುದ್ಧ ಇರುವ ಆರೋಪಗಳ ಗಂಭೀರತೆಯನ್ನು ಪರಿಗಣಿಸದೇ ಹೈಕೋರ್ಟ್ ನೀಡಿರುವ ಆದೇಶದ ಬಗ್ಗೆ ವಿಸ್ತೃತ ಪರಿಶೀಲನೆ ಅಗತ್ಯ ಎಂದು ಪೀಠ ಅಭಿಪ್ರಾಯಪಟ್ಟಿತು. 'ಸಾಕ್ಷ್ಯಾಧಾರಗಳ ಆಧಾರದಲ್ಲಿಯೇ ಆರೋಪಿಗಳನ್ನು ದೋಷಿ ಎಂದು ಪರಿಗಣಿಸಲಾಗಿದೆ. ಭಾರತದ ಸಾರ್ವಭೌಮತೆ, ಅಖಂಡತೆ ಹಾಗೂ ಸಮಾಜದ ಹಿತಾಸಕ್ತಿಗೆ ವಿರುದ್ಧವಾದ ಚುಟುವಟಿಕೆಗಳು ಗಂಭೀರ ಸ್ವರೂಪದ ಅಪರಾಧಗಳಾಗಿವೆ. ಆದರೆ ಹೈಕೋರ್ಟ್ ಈ ಎಲ್ಲ ಆಯಾಮಗಳಲ್ಲಿ ಪರಿಶೀಲನೆ ನಡೆಸದೇ, ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆಯನ್ನಷ್ಟೇ (ಯುಎಪಿಎ) ಪರಿಗಣಿಸಿ ಆದೇಶ ಹೊರಡಿಸಿದೆ' ಎಂದು ಪೀಠ ಹೇಳಿತು.



ಜಿ.ಎನ್. ಸಾಯಿಬಾಬಾ

ನಕ್ಸಲ್ ದಾಳಿಯಲ್ಲಿ ಹುತಾತ್ಮರಾದ ಪೊಲೀಸರ ಕುಟುಂಬಗಳಿಗೆ ಸುಪ್ರೀಂ ಆದೇಶದಿಂದ ನೆಮ್ಮದಿ ಸಿಕ್ಕಿದೆ. ವಿಚಾರಣೆಗೆ ಪೀಠ ರಚಿಸಿದ ಸುಪ್ರೀಂ ಕೋರ್ಟ್‌ಗೆ ಧನ್ಯವಾದ

ದೇವೇಂದ್ರ ಫಡಣವೀಸ್, ಮಹಾರಾಷ್ಟ್ರ ಉಪಮುಖ್ಯಮಂತ್ರಿ

'ಮಿದುಳು ಅಪಾಯಕಾರಿ'

ಸಾಯಿಬಾಬಾ ಅವರು ಮಾವೋವಾದಿಗಳ ಜತೆ ನಂಟು ಹೊಂದಿದ್ದರು ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು. 'ಸಾಯಿಬಾಬಾ ಅವರು ಜಮ್ಮು ಕಾಶ್ಮೀರ ಪ್ರತ್ಯೇಕತಾವಾದಿ ಸಶಸ್ತ್ರ ಚಳವಳಿಯ ಭಾಗವಾಗಿದ್ದರು. ಮಾವೋವಾದಿ ನಾಯಕರಿಗೆ ಸಭೆಗಳನ್ನು ನಡೆಸಲು ನೆರವಾಗಿದ್ದರು. ಅಷ್ಟೇ ಅಲ್ಲ, ಮಾವೋವಾದಿಗಳ ಮಿದುಳಾಗಿ ಅವರು ಕೆಲಸ ಮಾಡುತ್ತಿದ್ದರು' ಎಂದು ಆರೋಪಿಸಿದರು.

ಈ ಆರೋಪಕ್ಕೆ ಪ್ರತಿಕ್ರಿಯಿಸಿದ ಸಾಯಿಬಾಬಾ ಪರ ವಕೀಲ ಬಸಂತ್, 'ಸಾಯಿಬಾಬಾ ಅವರು ಮಾವೋವಾದಿ ಸಿದ್ಧಾಂತದ ಬಗ್ಗೆ ಸ್ವಲ್ಪ ಒಲವು ಹೊಂದಿದ್ದಿರಬಹುದು. ಆದರೆ, ಅವರು ಮಾವೋವಾದಿಗಳ ಮೆದುಳಾಗಿ ಕೆಲಸ ಮಾಡಿರಲಿಲ್ಲ' ಎಂದರು. ಈ ವೇಳೆ ಮಧ್ಯಪ್ರವೇಶಿದ ಕೋರ್ಟ್, 'ಭಯೋತ್ಪಾದಕರು ಹಾಗೂ ಮಾವೋವಾದಿಗಳ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಮಿದುಳು ಅತಿ ಅಪಾಯಕಾರಿ. ಅವರು ಪ್ರಕರಣದಲ್ಲಿ ನೇರವಾಗಿ ಭಾಗಿಯಾಗಬೇಕು ಎಂದೇನಿಲ್ಲ' ಎಂದು ಅಭಿಪ್ರಾಯಪಟ್ಟಿತು.

'ನನ್ನ ಕಕ್ಷಿದಾರರು ಶೇ 90–95ರಷ್ಟು ದೈಹಿಕ ನ್ಯೂನತೆ ಹೊಂದಿದ್ದು, ಗಾಲಿಕುರ್ಚಿಯನ್ನು ಆಶ್ರಯಿಸಿದ್ದಾರೆ. ಅವರಿಗೆ ಓಡಾಡಲು ಸಾಧ್ಯವೇ ಇಲ್ಲದ ಪರಿಸ್ಥಿತಿಯಲ್ಲಿದ್ದಾರೆ. ಅವರನ್ನು ಮತ್ತೆ ಜೈಲಿಗೆ ಕಳುಹಿಸಬೇಡಿ. ಬೇಕಾದರೆ, ಗೃಹಬಂಧನದಲ್ಲಿ ಇರಿಸಬಹುದು. ಅವರ ದೂರವಾಣಿ ಸಂಪರ್ಕವನ್ನು ಕಡಿತಗೊಳಿಸಬಹುದು. ಕೋರ್ಟ್ ನಿರ್ದೇಶನಗಳನ್ನು ಅವರು ಪಾಲಿಸುತ್ತಾರೆ' ಎಂದು ಸಾಯಿಬಾಬಾ ಪರ ವಕೀಲ ಆರ್. ಬಸಂತ್ ಅವರು ವಾದ ಮಂಡಿಸಿದರು. ಆದರೆ, ಈ ವಾದವನ್ನು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಒಪ್ಪಲಿಲ್ಲ.

ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳು ವಶಕ್ಕೆ (ದೆಹಲಿ ವರದಿ): ಸಾಯಿಬಾಬಾ ಅವರ ಬಿಡುಗಡೆಗೆ ಸುಪ್ರೀಂ ಕೋರ್ಟ್ ತಡೆ ನೀಡಿದ ಬಳಿಕ ಅಖಿಲ ಭಾರತ ವಿದ್ಯಾರ್ಥಿ ಸಂಘಟನೆ (ಎಐಎಸ್‌ಎ) ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು. ಆದರೆ ಶಾಂತಿಯುತ ಪ್ರತಿಭಟನೆ ನಡೆಸಿದ ಐವರು ವಿದ್ಯಾರ್ಥಿಗಳನ್ನು ಪೊಲೀಸರು ಶನಿವಾರ ವಶಕ್ಕೆ ಪಡೆದರು ಎಂದು ಸಂಘಟನೆ ಹೇಳಿದೆ. ವಿಶ್ವವಿದ್ಯಾಲಯದ ಕಲಾ ವಿಭಾಗದಿಂದ ವಿದ್ಯಾರ್ಥಿಗಳನ್ನು ಪೊಲೀಸರು ಕ್ರೂರವಾಗಿ ಕರೆದೊಯ್ದರು ಎಂದು ವಿದ್ಯಾರ್ಥಿಯೊಬ್ಬರು ಆರೋಪಿಸಿದ್ದಾರೆ.

ಹಕ್ಕಿ ಡಿಕ್ಕಿ: ಮಾರ್ಗಮಧ್ಯೆಯೇ ವಿಮಾನ ವಾಪಸ್

ಮುಂಬೈ (ಪಿಟಿಐ): ಪ್ರಯಾಣಿಕರನ್ನು ಹೊತ್ತು ಮುಂಬೈನಿಂದ ಬೆಂಗಳೂರಿಗೆ ಬರುತ್ತಿದ್ದ ಆಕಾಸಾ ಏರ್ ವಿಮಾನಕ್ಕೆ ಹಕ್ಕಿ ಡಿಕ್ಕಿಯಾಗಿರುವ ಘಟನೆ ಶನಿವಾರ ಮಧ್ಯಾಹ್ನ ನಡೆದಿದೆ.

ಕ್ಯಾಬಿನ್‌ನಲ್ಲಿ ಸುಟ್ಟ ವಾಸನೆ ಬಂದಿದ್ದರಿಂದ ಪೈಲಟ್ ಆಕಾಸಾ ಏರ್ ಕಂಪನಿಯ ಎಕೆಜೆ1103 ವಿಮಾನವನ್ನು ಮುಂಬೈ ವಿಮಾನನಿಲ್ದಾಣದಲ್ಲಿ ಇಳಿಸಲಾಗಿದ್ದು, ಎಲ್ಲ ಪ್ರಯಾಣಿಕರು ಸುರಕ್ಷಿತವಾಗಿದ್ದಾರೆ ಎಂದು ನಾಗರಿಕ ವಿಮಾನಯಾನ ನಿರ್ದೇಶನಾಲಯ ತಿಳಿಸಿದೆ.

ಇಂಜಿನ್‌ನಲ್ಲಿ ಯಾವುದೇ ತಾಂತ್ರಿಕ ದೋಷ ಪತ್ತೆಯಾಗಿಲ್ಲ. ಮೊದಲ ಎಂಜಿನ್‌ನಲ್ಲಿ ಹಕ್ಕಿ ಸತ್ತು ಬಿದ್ದಿರುವುದು ಪತ್ತೆಯಾಗಿದೆ ಎಂದು ಡಿಜಿಸಿಎ ಅಧಿಕಾರಿಗಳು ತಿಳಿಸಿದ್ದಾರೆ.

ಗೃಹ ಸಚಿವಾಲಯ ಸಲಹೆಗಾರ ರಾಜೀನಾಮೆ

ನವದೆಹಲಿ (ಪಿಟಿಐ): ಕಾಡುಗಳ್ಳ ವೀರಪ್ಪನ್ ಹತ್ಯೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಪೊಲೀಸ್ ಅಧಿಕಾರಿ ಕೆ.ವಿಜಯ್ ಕುಮಾರ್ ಅವರು ಗೃಹ ಸಚಿವಾಲಯದ (ಎಂಎಚ್‌ಎ) ಹಿರಿಯ ಭದ್ರತಾ ಸಲಹೆಗಾರ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಎಡಿಟರ್ಸ್ ಗಿಲ್ಡ್‌ಗೆ ಅಧ್ಯಕ್ಷರಾಗಿ ಸೀಮಾ ಮುಸ್ತಾಫಾ ಪುನರಾಯ್ಕೆ



ನವದೆಹಲಿ (ಪಿಟಿಐ): 'ದಿ ಸಿಟಿಜನ್' ಸಂಪಾದಕಿ ಸೀಮಾ ಮುಸ್ತಾಫಾ ಅವರು ಭಾರತೀಯ ಸಂಪಾದಕರ ಒಕ್ಕೂಟದ (ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾ) ಅಧ್ಯಕ್ಷೆಯಾಗಿ ಶನಿವಾರ ಅವಿರೋಧವಾಗಿ ಪುನರಾಯ್ಕೆಯಾಗಿದ್ದಾರೆ.

ಒಕ್ಕೂಟದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ 'ದಿ ಕಾರವಾನ್' ಸಂಪಾದಕ ಅನಂತ್ ನಾಥ್ ಮತ್ತು 'ಸಕಾಳ್' ಮಾಧ್ಯಮ ಸಮೂಹದ ಮುಖ್ಯ ಸಂಪಾದಕ ಶ್ರೀರಾಮ್ ಪವಾರ್ ಅವರು ಕೂಡಾ ಕ್ರಮವಾಗಿ ಪ್ರಧಾನ ಕಾರ್ಯದರ್ಶಿ, ಖಜಾಂಚಿಯಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪತ್ರಕರ್ತರಾದ ರಾಜ್‌ದೀಪ್ ಸರ್ದೇಸಾಯಿ, ವಿಜಯ್ ನಾಯ್ಕ್ ಮತ್ತು ಕ್ಯು.ಡಬ್ಲ್ಯು. ನಖ್ವಿ ಅವರನ್ನೊಳಗೊಂಡ ಮೂವರು ಸದಸ್ಯರ ಚುನಾವಣಾ ಸಮಿತಿಯ ಪದಾಧಿಕಾರಿಗಳ ಆಯ್ಕೆಯನ್ನು ಘೋಷಿಸಿದೆ.

ಸೆ. 23ರಂದು ನಡೆದ ಒಕ್ಕೂಟದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಈ ಮೂವರು ಪದಾಧಿಕಾರಿಗಳ ಕೆಲಸಗಳ ಬಗ್ಗೆ ಮೆಚ್ಚುಗೆ ವ್ಯಕ್ತವಾಗಿತ್ತು.

ನರಬಲಿ ಪ್ರಕರಣ: ಕೇರಳಕ್ಕೆ ಮಾನವ ಹಕ್ಕುಗಳ ಆಯೋಗ ನೋಟಿಸ್

ನವದೆಹಲಿ (ಪಿಟಿಐ): ಕೇರಳದಲ್ಲಿ ಈಚೆಗೆ ನಡೆದ ನರಬಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ರಮ ಕೈಗೊಂಡ ವರದಿಯನ್ನು ಕೋರಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು (ಎನ್‌ಎಚ್‌ಆರ್‌ಸಿ) ಕೇರಳ ಸರ್ಕಾರಕ್ಕೆ ನೋಟಿಸ್ ನೀಡಿದೆ.

ಕೇರಳ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಪೊಲೀಸ್ ಮಹಾನಿರ್ದೇಶಕರಿಗೆ ಆಯೋಗವು ನೋಟಿಸ್ ಜಾರಿ ಮಾಡಿದ್ದು, ತನಿಖೆಯ ಸ್ಥಿತಿ ಮತ್ತು ಸಂತ್ರಸ್ತೆಯರ ಕುಟುಂಬಗಳಿಗೆ ಪಾವತಿಸಿದ ಪರಿಹಾರವನ್ನು ಒಳಗೊಂಡಂತೆ ಕೈಗೊಂಡ ಕ್ರಮದ ವರದಿಯನ್ನು ನಾಲ್ಕು ವಾರಗಳ ಅವಧಿಯಲ್ಲಿ ಕಳುಹಿಸಿಕೊಡುವಂತೆ ಸೂಚಿಸಿದೆ.

'ಆರ್ಥಿಕ ಸಮಸ್ಯೆ ಎದುರಿಸುತ್ತಿದ್ದ ದಂಪತಿಗೆ ಅದೃಷ್ಟವನ್ನು ತಂದುಕೊಡುವುದಾಗಿ ನಂಬಿಸಿ, ಲಾಟರಿ ಟಿಕೆಟ್ ಮಾರುವ ವೃತ್ತಿಯಲ್ಲಿದ್ದ ಇಬ್ಬರು ಮಹಿಳೆಯರನ್ನು ಹತ್ಯೆ ಮಾಡಿರುವ ಕುರಿತು ಮಾಧ್ಯಮಗಳ ವರದಿಯನ್ನು ಗಮನಿಸಿ ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಳ್ಳಲಾಗಿದೆ' ಎಂದು ಆಯೋಗದ ಸಮಿತಿಯು ಹೇಳಿದೆ.

'ಕಾನೂನಿನ ಭಯವಿಲ್ಲದೇ ಧಾರ್ಮಿಕ ಆಚರಣೆಯ ಹೆಸರಿನಲ್ಲಿ ಮನುಷ್ಯರನ್ನು ಕೊಲ್ಲುವ ಇಂಥ ಘಟನೆಗಳನ್ನು ನಾಗರಿಕ ಸಮಾಜದಲ್ಲಿ ನಿರೀಕ್ಷಿಸಲು ಸಾಧ್ಯವಿಲ್ಲ. ಆ ಇಬ್ಬರು ನತದೃಷ್ಟ ಮಹಿಳೆಯರ ಬದುಕುವ ಹಕ್ಕನ್ನು ಉಲ್ಲಂಘಿಸಲಾಗಿದೆ' ಎಂದೂ ಆಯೋಗವು ಕಿಡಿಕಾರಿದೆ.

ಆರೋಪಿಗಳ ಮನೆಯ ಸುತ್ತ ಪೊಲೀಸ್ ಶೋಧ

ತಿರುವನಂತಪುರ: ಪತ್ತನಂತಿಟ್ಟ ಜಿಲ್ಲೆಯ ಎಲಾಂತೂರ್‌ನಲ್ಲಿ ನಡೆದಿರುವ ಭೀಕರ ಅಪರಾಧಕ್ಕೆ ಮತ್ತಷ್ಟು ಮಂದಿ ಬಲಿಯಾಗಿರಬಹುದು ಎಂಬ ಅನುಮಾನದ ಮೇಲೆ ಪೊಲೀಸರು ಆರೋಪಿತ ದಂಪತಿ ವಾಸವಿದ್ದ ಮನೆಯ ಸುತ್ತಮುತ್ತ ಶನಿವಾರ ಶೋಧ ಕಾರ್ಯ ನಡೆಸಿದ್ದಾರೆ.

ಆರೋಪಿಗಳಾದ ಭಾಗವಲ್ ಸಿಂಗ್ ಮತ್ತು ಆತನ ಹೆಂಡತಿ ಲೈಲಾ ನೆಲೆಸಿದ್ದ ಮನೆಯ ಸುತ್ತ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಶ್ವಾನದಳದವರು ಪರಿಶೀಲನೆ ನಡೆಸಿದರು. ಪ್ರಕರಣದ ಆರೋಪಿಗಳಾದ ಶಫಿ, ಭಾಗವಲ್ ಮತ್ತು ಲೈಲಾ ಅವರನ್ನೂ ಸ್ಥಳಕ್ಕೆ ಕರೆದೊಯ್ಯಲಾಗಿತ್ತು. ಇಬ್ಬರು ಮಹಿಳೆಯರ ಶವಗಳನ್ನು ಹೊರತೆಗೆಯಲು ನೆರವಾಗಿದ್ದ ಸ್ಥಳೀಯ ಕಾರ್ಮಿಕರೂ ಶೋಧ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು.

1,000 ಕಿ.ಮೀ ಕ್ರಮಿಸಿದ ಭಾರತ್ ಜೋಡೊ ಯಾತ್ರೆ • ಎಪಿಎಂಸಿ ಬಳಿ ಹಮಾಲಿಗಳ ಜತೆ ಮಾತುಕತೆ

ಬಳ್ಳಾರಿಯಲ್ಲಿ ರಾಹುಲ್‌ಗೆ ಭಾರಿ ಜನಬೆಂಬಲ

ಪ್ರಜಾವಾಣಿ ವಾರ್ತೆ



ಬಳ್ಳಾರಿಯಲ್ಲಿ ಶನಿವಾರ ನಡೆದ ಭಾರತ್ ಜೋಡೊ ಯಾತ್ರೆಯ ಬಹಿರಂಗ ಸಭೆಯಲ್ಲಿ ಸೇರಿದ್ದ ಜನಸ್ತೋಮ

ಬಳ್ಳಾರಿ: ರಾಜ್ಯದೊಳಗೆ ಕಳೆದ 15 ದಿನಗಳಿಂದ ಭಾರತ್ ಜೋಡೊ ಯಾತ್ರೆ ಕೈಗೊಂಡಿರುವ ರಾಹುಲ್ ಗಾಂಧಿ ಅವರಿಗೆ ಬಳ್ಳಾರಿಯಲ್ಲಿ ಶನಿವಾರ ಭಾರಿ ಜನಬೆಂಬಲ ವ್ಯಕ್ತವಾಯಿತು.

ರಾಹುಲ್ ಗಾಂಧಿ ಶನಿವಾರ ಬೆಳಿಗ್ಗೆ 6.43ರ ಸುಮಾರಿಗೆ ಹೊರವಲಯದ ಹಲಕುಂದಿ ಮಠದಿಂದ ಹೊರಬಂದು ಜನರೊಂದಿಗೆ ಬೆರೆತು ಮುನ್ನಡೆದರು. ತಮ್ಮ ನಾಯಕನನ್ನು ನೋಡುತ್ತಿದ್ದಂತೆ ಅಭಿಮಾನಿಗಳು ಮತ್ತು ಕಾರ್ಯಕರ್ತರು ಉತ್ಸಾಹದಿಂದ ಜೈಕಾರದ ಘೋಷಣೆಗಳನ್ನು ಕೂಗಿದರು.

ರಸ್ತೆ ಇಕ್ಕೆಲಗಳಲ್ಲೂ ಜನರು ಕಾಂಗ್ರೆಸ್ ನಾಯಕನನ್ನು ನೋಡಲು ತುದಿಗಾಲಲ್ಲಿ ನಿಂತಿದ್ದರು. ಬಿಳಿ ಟೀ ಶರ್ಟ್, ಬಿಸ್ಕತ್ ಬಣ್ಣದ ಪ್ಯಾಂಟ್ ಧರಿಸಿ, ಸ್ಪೋರ್ಟ್ಸ್ ಶೂ ಹಾಗೂ ಕೈಗೆ ಸ್ಮಾರ್ಟ್‌ವಾಚ್ ಕಟ್ಟಿದ್ದ ರಾಹುಲ್ ಬಿರುಸಾಗಿ ಹೆಜ್ಜೆಹಾಕಿದರು.

ಎರಡು ಸುತ್ತಿನ ಭಾರಿ ಭದ್ರತೆ ನಡುವೆ ಮುನ್ನಡೆಯುತ್ತಿದ್ದ ರಾಹುಲ್ ದಾರಿಯುದ್ದಕ್ಕೂ ಜನರತ್ತ ಕೈಬೀಸುತ್ತಿದ್ದರು, ಕೆಲವೆಡೆ ಕೈ ಮುಗಿಯುತ್ತಿದ್ದರು. ಅಲ್ಲಲ್ಲಿ ನಿಂತು ಜನರ ಕಷ್ಟಸುಖ ಕೇಳುತ್ತಿದ್ದರು. ಅನತಿ ದೂರದಲ್ಲಿ ಕಾಂಗ್ರೆಸ್ ಮುಖಂಡನನ್ನು ಅಡ್ಡಗಟ್ಟಿದ ಲಂಬಾಣಿ ಮಹಿಳೆಯೊಬ್ಬರು ಕಸೂತಿ ಇದ್ದ ಶಲ್ಯವನ್ನು ಕೊರಳಿಗೆ ಹಾಕಿದರು.

ಸ್ವಲ್ಪ ಮುಂದೆ ಕುಳ್ಳಗಿನ ವ್ಯಕ್ತಿಯೊಬ್ಬನನ್ನು ಬಳಿಗೆ ಕರೆದ ರಾಹುಲ್ ಅವರ ಜತೆ ಫೋಟೊ ತೆಗೆಸಿಕೊಂಡರು. ಆರಂಭದಲ್ಲಿ ರಾಹುಲ್ ಜತೆ ವಿಧಾನ-ಪರಿಷತ್‌ನ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಎಐಸಿಸಿ ಕರ್ನಾಟಕ ಉಸ್ತುವಾರಿ ರಣಜಿತ್ ಸುರ್ಜೆವಾಲಾ, ಕೆ.ಸಿ.ವೇಣುಗೋಪಾಲ್, ಕಾಂಗ್ರೆಸ್ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ, ವಿ.ಎಸ್. ಉಗ್ರಪ್ಪ, ಶಾಸಕರಾದ ಬಿ. ನಾಗೇಂದ್ರ, ಗಣೇಶ್ ಇದ್ದರು.

ಬಳ್ಳಾರಿ ಎಪಿಎಂಸಿ ಮಾರುಕಟ್ಟೆ ಬಳಿ ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್, ರಾಜ್ಯಸಭಾ ಸದಸ್ಯ ಸೈಯದ್ ನಾಸಿರ್ ಹುಸೇನ್, ಶಾಸಕ ದಿನೇಶ್ ಗುಂಡೂರಾವ್ ಮತ್ತಿತರರು ಸೇರಿಕೊಂಡರು.

ಎಪಿಎಂಸಿ ಬಳಿ ಹಮಾಲಿಗಳ ಜತೆ ರಾಹುಲ್ ಮಾತನಾಡಿದರು. ರಸ್ತೆಯ ಮೇಲೆ ರಂಗೋಲಿಯಲ್ಲಿ ತಮ್ಮ ಚಿತ್ರ ಬಿಡಿಸಿದ ಕಲಾವಿದೆಯೊಬ್ಬರ ಕುಶಲೋಪರಿ ವಿಚಾರಿಸಿದರು. ಗುಗ್ಗರಹಟ್ಟಿಯ ಬಳಿ ಹುಡುಗರಿಬ್ಬರ ಜೊತೆ ಶುಭಾಶಯ ವಿನಿಮಯ ಮಾಡಿಕೊಂಡರು. ಜಾನಪದ ಕಲಾ ತಂಡಗಳ ಕಲಾವಿದರು ರಸ್ತೆ ಉದ್ದಕ್ಕೂ ವಾದ್ಯಗಳನ್ನು ಬಾರಿಸಿದರು. ಡೊಳ್ಳು, ಕೊಂಬು, ಕಹಳೆ, ನಂದಿ ಧ್ವಜ ಕುಣಿತ, ವೀರಗಾಸೆ ಕುಣಿತದ ತಂಡಗಳು ಪಾಲ್ಗೊಂಡಿದ್ದವು.

ಎಪಿಎಂಸಿ, ಬಂಡಿಮೋಟ್, ಬೆಂಗಳೂರು ರಸ್ತೆ, ಬ್ರೂಸ್ ಪೇಟೆ, ಮೀನಾಕ್ಷಿ ಸರ್ಕಲ್, ಗಡಗಿ ಚನ್ನಪ್ಪ ಸರ್ಕಲ್, ಈಡಿಗ ಹಾಸ್ಟೆಲ್ ಮೂಲಕ ಹಾದು ಕೋರ್ಟ್ ರಸ್ತೆಯಲ್ಲಿರುವ ಕಮ್ಮಾ ಭವನಕ್ಕೆ ಬಂದ ರಾಹುಲ್ ಗಾಂಧಿ ಅಲ್ಲಿ ವಿಶ್ರಾಂತಿ ಪಡೆದರು. ಬಳ್ಳಾರಿಗೆ ತಲುಪುವ ಮೂಲಕ ರಾಹುಲ್ 1,000 ಕಿ.ಮೀ ದೂರ ಕ್ರಮಿಸಿದರು.

'ಸಾಮೂಹಿಕ ತೀರ್ಮಾನ'

ಬಳ್ಳಾರಿ: 'ನಾನು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧ್ಯಕ್ಷನಾಗಿ ಆಯ್ಕೆಯಾದರೂ ರಾಜ್ಯದಲ್ಲಿ ಸಾಮೂಹಿಕ ತೀರ್ಮಾನದ ವ್ಯವಸ್ಥೆ ಮುಂದುವರಿಯಲಿದೆ' ಎಂದು ಹಿರಿಯ ಮುಖಂಡ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಭಾರತ್ ಜೋಡೊ ಯಾತ್ರೆಯಲ್ಲಿ ಭಾಗವಹಿಸಿದ್ದ ಅವರು ಪತ್ರಕರ್ತರ ಜತೆ ಮಾತನಾಡಿದರು. 'ನಾನು ಅಧ್ಯಕ್ಷನಾಗಿ ಆಯ್ಕೆಯಾದರೂ ಎಲ್ಲ ನಾಯಕರು ಕೂತು ಚರ್ಚಿಸಿ ಸಾಮೂಹಿಕ ನಿರ್ಧಾರಗಳನ್ನು ಮಾಡುತ್ತೇವೆ. ಸಾಮೂಹಿಕ ಸಮಾಲೋಚನೆಗಳು ಮುಂದುವರಿಯಲಿವೆ' ಎಂದರು.

ಚುನಾವಣಾ ಕಹಳೆ ಮೊಳಗಿಸಿದ ಕಾಂಗ್ರೆಸ್

ಬಳ್ಳಾರಿ: ಉಕ್ಕಿನ ನಗರ ಬಳ್ಳಾರಿಯಲ್ಲಿ ಶನಿವಾರ ಕಾಂಗ್ರೆಸ್ ಏರ್ಪಡಿಸಿದ್ದ ಭಾರತ್ ಜೋಡೊ ಯಾತ್ರೆ ಬಹಿರಂಗ ಸಭೆಯಲ್ಲಿ ವಿಧಾನಸಭೆ ಚುನಾವಣೆ ಕಹಳೆ ಮೊಳಗಿತು. ಉತ್ಸಾಹದಿಂದ ಕುಣಿದು ಕುಪ್ಪಳಿಸಿ ಜೈಕಾರದ ಘೋಷಣೆಗಳನ್ನು ಕೂಗುತ್ತಿದ್ದ ಕಾರ್ಯಕರ್ತರನ್ನು ಕಂಡು ಪಕ್ಷದ ಮುಖಂಡರ ಉತ್ಸಾಹವೂ ಇಮ್ಮಡಿಗೊಂಡಿತು.

ಯಾತ್ರೆ ಆರಂಭವಾದಾಗಿನಿಂದ ಈವರೆಗೆ 1000 ಕಿ.ಮೀ ಪಾದಯಾತ್ರೆ ಮಾಡಿರುವ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಕಾರ್ಯಕರ್ತರ ಉತ್ಸಾಹ- ಹುಮ್ಮಸ್ಸನ್ನು ಕಂಡು ಹರ್ಷಚಿತ್ತರಾದರು. ಕಾರ್ಯಕ್ರಮದ ಉದ್ದಕ್ಕೂ ಘೋಷಣೆಗಳು ಮುಗಿಲು ಮುಟ್ಟಿದವು.

'ಚುನಾವಣೆ ಲಾಭದ ದೃಷ್ಟಿಯಿಂದ ಯಾತ್ರೆ ಕೈಗೊಂಡಿಲ್ಲ' ಎಂದು ಕಾಂಗ್ರೆಸ್ ನಾಯಕರೂ ಹೇಳಿದರಾದರೂ, '2023ರ ಚುನಾವಣೆಯಲ್ಲಿ ಬಿಜೆಪಿ ಸರ್ಕಾರ ಕಿತ್ತೊಗೆಯಬೇಕು' ಎಂದು ಸಭೆಯಲ್ಲಿ ಮಾತನಾಡಿದ ಬಹುತೇಕರು ಮನವಿ ಮಾಡಿದರು. ನರೇಂದ್ರ ಮೋದಿ ಹಾಗೂ ಬಸವರಾಜ ಬೊಮ್ಮಾಯಿ ಸರ್ಕಾರವನ್ನು ಮುಖಂಡರು ಟೀಕಿಸಿದಾಗಲೆಲ್ಲಾ ಕಾರ್ಯಕರ್ತರು ಹರ್ಷೋದ್ಗಾರಗಳ ಮೂಲಕ ಅನುಮೋದಿಸುತ್ತಿದ್ದರು.

'ಇದು ಚುನಾವಣೆಗಾಗಿ ನಡೆದಿರುವ ಯಾತ್ರೆ ಅಲ್ಲ' ಎಂದು ಹಿರಿಯ ಕಾಂಗ್ರೆಸ್ ಮುಖಂಡ ಮಲ್ಲಿಕಾರ್ಜುನ ಖರ್ಗೆ ಹೇಳಿದರಾದರೂ, 'ಮುಂದಿನ ಚುನಾವಣೆಯಲ್ಲಿ ಕಮಿಷನ್ ಸರ್ಕಾರವನ್ನು ಕಿತ್ತೊಗೆದು ಪುನಃ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಎಲ್ಲರೂ ಒಗ್ಗೂಡಿ ಕೆಲಸ ಮಾಡಬೇಕು' ಎಂದು ಮನವಿ ಮಾಡಿದರು.

ಛತ್ತೀಸ್‌ಗಡ ಮುಖ್ಯಮಂತ್ರಿ ಭೂಪೇಶ್ ಬಘೇಲ್, 'ರಾಹುಲ್ ಯಾತ್ರೆಯಿಂದ ದೇಶದ ಮೂಡ್ ಬದಲಾಗಲಿದೆ. ಇದು ಬಿಜೆಪಿಗೆ ಭೀತಿ ತಂದಿದೆ' ಎಂದರು

'ರೈತರು, ಕಾರ್ಮಿಕರು, ಬಡವರ ಬದುಕನ್ನು ಹಸನಾಗಿಸಲು ರಾಹುಲ್ ಯಾತ್ರೆ ಕೈಗೊಂಡಿದ್ದಾರೆ' ಎಂದು ರಾಜಸ್ತಾನದ ಮುಖ್ಯಮಂತ್ರಿ ಅಶೋಕ್ ಗೆಹಲೋಟ್ ಅಭಿಪ್ರಾಯಪಟ್ಟರು.

ರಾಜ್ಯದಲ್ಲಿ ಸೆ. 30ರಿಂದ ಪಾದಯಾತ್ರೆ ಕೈಗೊಂಡಿರುವ ರಾಹುಲ್ ಗಾಂಧಿಯವರ ಮೊದಲ ಬಹಿರಂಗ ಸಭೆ ಇದಾಗಿತ್ತು. ರಾಹುಲ್ ನೇರವಾಗಿ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆ ಪ್ರಸ್ತಾಪ ಮಾಡದಿದ್ದರೂ ಪರೋಕ್ಷವಾಗಿ ಉಲ್ಲೇಖಿಸಿದರು.

ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, 'ಭಾರತ್ ಜೋಡೊ ಯಾತ್ರೆ ವಿಶ್ವಗುರು ನಿದ್ದೆಗೆಡಿಸಿದೆ. ಇದೊಂದು ಐತಿಹಾಸಿಕ ಯಾತ್ರೆಯಾಗಿದ್ದು, ಇದರಿಂದಾಗಿ ಬಿಜೆಪಿ ಪತ್ರಿಕೆಗಳಲ್ಲಿ ಕಾಂಗ್ರೆಸ್ ಬಗ್ಗೆ ನಕಾರಾತ್ಮಕ ಜಾಹೀರಾತು ನೀಡುತ್ತಿದೆ' ಎಂದು ಟೀಕಿಸಿದರು.

'ಭಾರತ್ ಜೋಡೊ ಯಾತ್ರೆ'ಗೆ ಪರ್ಯಾಯವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಹಿರಿಯ ಮುಖಂಡ ಬಿ.ಎಸ್. ಯಡಿಯೂರಪ್ಪ ನಡೆಸುತ್ತಿರುವ ಜನ ಸಂಕಲ್ಪ ಯಾತ್ರೆಯನ್ನು ಲೇವಡಿ ಮಾಡಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ಜನ ನಿಮ್ಮನ್ನು ಕಿತ್ತೊಗೆಯಲು ಸಂಕಲ್ಪ ಮಾಡಿದ್ದಾರೆ' ಎಂದು ಚುಚ್ಚಿದಾಗ ಸಭೆಯಲ್ಲಿದ್ದವರ ಉತ್ಸಾಹ ಮೇರೆ ಮೀರಿತ್ತು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಭಾರತ್ ಜೋಡೊ ಯಾತ್ರೆ ಕ್ವಿಟ್ ಬಿಜೆಪಿ ಯಾತ್ರೆ ಆಗಿದೆ'. ಭ್ರಷ್ಟವಾಗಿರುವ ಬಿಜೆಪಿ ಸರ್ಕಾರ ಕಿತ್ತೊಗೆದು, ಕಾಂಗ್ರೆಸ್‌ಗೆ 150 ಸೀಟುಗಳನ್ನು ಗೆಲ್ಲಿಸಿ ಆಶೀರ್ವದಿಸಿ ಎಂದು ಮನವಿ ಮಾಡಿದರು.

ನಗರದ ಬೀದಿಗಳಲ್ಲೂ ನೆಚ್ಚಿನ ನಾಯಕರ ಪೋಸ್ಟರ್, ಕಟೌಟ್‌ಗಳು ರಾರಾಜಿಸಿದವು.

ಬಳ್ಳಾರಿಯಲ್ಲಿ ನಡೆದ ಪಾದಯಾತ್ರೆಯ ಮೊದಲ ಬಹಿರಂಗ ಸಭೆ; ಬಿಜೆಪಿ ವಿರುದ್ಧ ನಾಯಕರ ವಾಗ್ದಾಳಿ

ಮೀಸಲಾತಿ ಹೆಚ್ಚಳಕ್ಕೆ ನಾಂದಿ ಹಾಡಿದ್ದು ಕಾಂಗ್ರೆಸ್: ರಾಹುಲ್

ಪ್ರಜಾವಾಣಿ ವಾರ್ತೆ



ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ನೇತೃತ್ವದಲ್ಲಿ ಬಳ್ಳಾರಿಯಲ್ಲಿ ಶನಿವಾರ ನಡೆದ ಬಹಿರಂಗ ಸಭೆಯಲ್ಲಿ ಮುಖಂಡರಾದ ಬಿ.ಕೆ.ಹರಿಪ್ರಸಾದ್, ಡಿ.ಕೆ.ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ, ಕೆ.ಸಿ.ವೇಣುಗೋಪಾಲ್, ಅಶೋಕ್ ಗೆಹಲೋತ್ ಅವರು ಜನರತ್ತ ಕೈಬೀಸಿದರು

ಬಳ್ಳಾರಿ: ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮೀಸಲಾತಿ ಹೆಚ್ಚಳ ಕುರಿತು ವರದಿ ಸಲ್ಲಿಸಲು ನ್ಯಾ. ನಾಗಮೋಹನ ದಾಸ್ ಸಮಿತಿ ನೇಮಿಸಿದ್ದು ಕಾಂಗ್ರೆಸ್ ಸರ್ಕಾರ, ಯಾವುದೇ ನೆಪ ಹೇಳದೆ ಬಿಜೆಪಿ ಸರ್ಕಾರ ಈ ವರದಿಯನ್ನು ಕೂಡಲೇ ಜಾರಿಗೆ ತರಬೇಕು ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಆಗ್ರಹಿಸಿದರು.

ಇಲ್ಲಿನ ಮುನ್ಸಿಪಲ್ ಹೈಸ್ಕೂಲ್ ಮೈದಾನದಲ್ಲಿ ಶನಿವಾರ ನಡೆದ ಭಾರತ್ ಜೋಡೊ ಯಾತ್ರೆಯ ಮೊದಲ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರ ನಾಗಮೋಹನ ದಾಸ್ ಶಿಫಾರಸ್ಸನ್ನು ಏಕೆ ಜಾರಿಗೊಳಿಸುತ್ತಿಲ್ಲ ಎಂದು ಪ್ರಶ್ನಿಸಿದರು.

ಅತ್ಯಂತ ಹಿಂದುಳಿದಿರುವ ಕಲ್ಯಾಣ ಕರ್ನಾಟಕ ಭಾಗಕ್ಕೆ ಸಂವಿಧಾನದ 371ನೇ ಕಲಮಿಗೆ ತಿದ್ದುಪಡಿ ಮಾಡಿ ವಿಶೇಷ ಸ್ಥಾನಮಾನ ಕಲ್ಪಿಸಿದ್ದು ಕಾಂಗ್ರೆಸ್ ಸರ್ಕಾರ. ಇದರಿಂದ ಈ ಭಾಗದ ಯುವಕರಿಗೆ ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿ ಸಿಗುವಂತಾಗಿದೆ. ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಬಿಜೆಪಿ ಸರ್ಕಾರದಲ್ಲಿದ್ದ ಎಲ್.ಕೆ. ಅಡ್ವಾಣಿಯವರು ರಾಜ್ಯದಿಂದ ಹೋಗಿದ್ದ ಈ ಪ್ರಸ್ತಾವನೆಯನ್ನು ತಿರಸ್ಕರಿಸಿದ್ದರು ಎಂದು ವಿವರಿಸಿದರು.

'ರಾಜ್ಯ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಪಿಎಸ್‌ಐ ಹುದ್ದೆಗಳನ್ನು ಮಾರಾಟಕ್ಕಿಟ್ಟಿದೆ. ₹ 80 ಲಕ್ಷ ಇದ್ದರೆ ನೀವು ಹುದ್ದೆ ಖರೀದಿಸಬಹುದು. ಹಣವಿಲ್ಲದಿದ್ದರೆ ಜೀವನ ಪರ್ಯಂತ ನಿರುದ್ಯೋಗಿಗಳಾಗಿ ಉಳಿಯಬೇಕಾಗುತ್ತದೆ' ಎಂದು ರಾಹುಲ್ ಹೇಳಿದರು.

ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹಲೋತ್, ಛತ್ತೀಸ್‌ಗಡದ ಮುಖ್ಯಮಂತ್ರಿ ಭೂಪೇಶ್ ಬಘೇಲ್, ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ, ಮಾಜಿ ಸಚಿವ ಎಚ್.ಕೆ. ಪಾಟೀಲ, ರಾಜ್ಯಸಭಾ ಸದಸ್ಯರಾದ ಸಯ್ಯದ್ ನಾಸಿರ್ ಹುಸೇನ್, ಎಲ್. ಹನುಮಂತಯ್ಯ, ಪಕ್ಷದ ಶಾಸಕರು ಸೇರಿದಂತೆ ಅನೇಕರು ವೇದಿಕೆಯಲ್ಲಿದ್ದರು.

ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ಸ್ವಾಗತಿಸಿದರು. ಶಾಸಕ ಬಿ. ನಾಗೇಂದ್ರ ಪ್ರಾಸ್ತಾವಿಕ ಮಾತನಾಡಿದರು.

ಭಾರತ ಒಗ್ಗೂಡಿಸಲು ಯಾತ್ರೆ

'ನಾನು ಪಾದಯಾತ್ರೆ ಆರಂಭಿಸಿದ ಸಮಯದಲ್ಲಿ 3500 ಕಿ.ಮೀ ನಡೆಯುವುದು ಸುಲಭದ ಕೆಲಸವಲ್ಲ ಎಂಬ ಭಾವನೆ ಬಂದಿತ್ತು. ಒಂದು, ಎರಡು, ಮೂರು, ಐದು ಹೀಗೆ ದಿನಗಳು ಉರುಳಿದಂತೆ ನಡಿಗೆ ಸರಳವಾಯಿತು. ಯಾವುದೋ ಶಕ್ತಿ ಹಿಂದೆ ನಿಂತು ಮುಂದೆ ನಡೆಯಲಿಕ್ಕೆ ಶಕ್ತಿ ಕೊಡುತ್ತಿದೆ ಎಂದನಿಸುತ್ತಿದೆ' ಎಂದು ರಾಹುಲ್ ವಿವರಿಸಿದರು.

'ಭಾರತ್ ಜೋಡೊ ಯಾತ್ರೆ' ಎಂಬ ಹೆಸರು ಇಟ್ಟಿರುವುದರ ಹಿಂದೆ ಕೋಟ್ಯಂತರ ಜನರ ಭಾವನೆಗಳಿವೆ. ಬಿಜೆಪಿ ಸರ್ಕಾರ ಜನರ ನಡುವೆ ಹಿಂಸೆ, ದ್ವೇಷ ಹರಡುತ್ತಿದೆ. ಜಾತಿ, ಧರ್ಮ, ಭಾಷೆಗಳ ಹೆಸರಿನಲ್ಲಿ ಸಮಾಜವನ್ನು ಒಡೆಯುತ್ತಿದೆ. ಇದು ಒಂದು ರೀತಿಯ ಆಕ್ರಮಣ ಎಂದು ವಿಶ್ಲೇಷಿಸಿದರು.

'ಸಮಾಜ, ದೇಶವನ್ನು ಒಡೆಯುವುದು ದೇಶ ಭಕ್ತಿ ಅಲ್ಲ. ನಾವು ಪಾದ ಯಾತ್ರೆ ಮೂಲಕ ಜನರ ಮನಸ್ಸು, ಹೃದಯಗಳನ್ನು ಬೆಸೆಯುತ್ತಿದ್ದೇವೆ. ನಮ್ಮ ಯಾತ್ರೆ ಪ್ರೀತಿ– ವಿಶ್ವಾಸದ ವಿಚಾರಧಾರೆ ಹರಡುತ್ತಿದೆ. ಬಸವಣ್ಣ, ಅಂಬೇಡ್ಕರ್, ನಾರಾಯಣ ಗುರು ಇದೇ ವಿಚಾರಧಾರೆ ಹರಡಿದ್ದಾರೆ. ಇದು ಬರೀ ನಮ್ಮ ವಿಚಾರಧಾರೆ ಅಲ್ಲ; ಕರ್ನಾಟಕ ಮತ್ತು ದೇಶದ ವಿಚಾರಧಾರೆ' ಎಂದು ಹೇಳಿದರು.

ಬಳ್ಳಾರಿ, ಚಿಕ್ಕಮಗಳೂರು ನಂಟು ಮೆಲುಕು

ರಾಹುಲ್ ಗಾಂಧಿ ತಮ್ಮ ಭಾಷಣ ಮುಗಿಸುವ ಮುನ್ನ ಚಿಕ್ಕಮಗಳೂರು, ಬಳ್ಳಾರಿ ಜತೆಗಿನ ತಮ್ಮ ಕುಟುಂಬದ ನಂಟನ್ನು ಮೆಲುಕು ಹಾಕಿದರು.

'1999ರ ಲೋಕಸಭಾ ಚುನಾವಣೆಯಲ್ಲಿ ನನ್ನ ತಾಯಿ ಸೋನಿಯಾ ಗಾಂಧಿ ಅವರನ್ನು ಬಳ್ಳಾರಿ ಕ್ಷೇತ್ರದ ಮತದಾರರು ಭಾರಿ ಮತದಿಂದ ಆರಿಸಿ ಕಳಿಸಿದ್ದರು' ಎಂದರು.

'ಚಿಕ್ಕಮಗಳೂರು ಕ್ಷೇತ್ರದಿಂದ ನನ್ನ ಅಜ್ಜಿ ಇಂದಿರಾ ಗಾಂಧಿ ಅವರನ್ನು ಅಲ್ಲಿನ ಜನ ಆಯ್ಕೆ ಮಾಡಿ ಕಳಿಸಿದ್ದರು. ನಿಮ್ಮ ಋಣವನ್ನು ನಾನು ಮರೆಯಲಿಕ್ಕೆ ಸಾಧ್ಯವಿಲ್ಲ. ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಬಳ್ಳಾರಿ ಸಮಗ್ರ ಅಭಿವೃದ್ಧಿ ಮಾಡುತ್ತೇವೆ' ಎಂದು ಭರವಸೆ ನೀಡಿದರು.

ಈಶ್ವರಪ್ಪ, ಜಾರಕಿಹೊಳಿಗೆ ನೋಟಿಸ್: ಕಾಗೇರಿ

ಶಿರಸಿ: 'ಸೂಕ್ತ ಕಾರಣ ನೀಡದೆ, ಅನುಮತಿಯನ್ನೂ ಪಡೆಯದೆ ವಿಧಾನಸಭೆ ಅಧಿವೇಶನಕ್ಕೆ ಗೈರಾಗಿರುವ ಶಾಸಕರಾದ ಕೆ.ಎಸ್.ಈಶ್ವರಪ್ಪ, ರಮೇಶ ಜಾರಕಿಹೊಳಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ' ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಇಲ್ಲಿ ಶನಿವಾರ ಮಾಧ್ಯಮದವರ ಜತೆ ಮಾತನಾಡಿದ ಅವರು, 'ಅಧಿವೇಶನದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದಿದ್ದರೆ ಸಚಿವರು ಅಥವಾ ಶಾಸಕರು ಸೂಕ್ತ ಕಾರಣವನ್ನು ಲಿಖಿತವಾಗಿ ಅಥವಾ ಮೌಖಿಕವಾಗಿ ನೀಡುತ್ತಾರೆ. ಆದರೆ, ಈಶ್ವರಪ್ಪ ಮತ್ತು ರಮೇಶ್ ಮಾಹಿತಿ ನೀಡದೆ ಗೈರಾಗಿದ್ದಾರೆ. ಈ ಬಗ್ಗೆ ಸದನದ ಒಪ್ಪಿಗೆ ಪಡೆದು ನೋಟಿಸ್ ನೀಡಲಾಗಿದೆ' ಎಂದರು.

'ಪರೇಶ್ ಮೇಸ್ತ ಸಾವಿನ ಪ್ರಕರಣ ಬಿ ರಿಪೋರ್ಟ್ ನೀಡುವ ಪ್ರಕರಣ ವಲ್ಲ. ಸಿಬಿಐಗೆ ವಹಿಸುವ ಮುನ್ನ ಸಾಕ್ಷಿ ನಾಶದಿಂದ ಸತ್ಯ ಹೊರಬಂದಿಲ್ಲ. ಮರು ತನಿಖೆಗೆ ಮುಖ್ಯಮಂತ್ರಿ, ಗೃಹ ಸಚಿವರ ಜತೆ ಚರ್ಚಿಸಲಾಗಿದೆ' ಎಂದರು.

ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಅಮೃತ ಮಹೋತ್ಸವಕ್ಕೆ ಜನಸಾಗರ

'ರಾಜಕೀಯ ಬದುಕು ತ್ಯಾಗ ಮಾಡಿದ ಕೋರೆ'

ಪ್ರಜಾವಾಣಿ ವಾರ್ತೆ



ಬೆಳಗಾವಿಯಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಪ್ರಭಾಕರ ಕೋರೆ ದಂಪತಿಯನ್ನು ಗೋವಾ ಮುಖ್ಯಮಂತ್ರಿ ಪ್ರಮೋದ ಸಾವಂತ್, ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಸನ್ಮಾನಿಸಿದರು.

ಬೆಳಗಾವಿ: 'ಪ್ರಭಾಕರ ಕೋರೆ ಅವರು ಕೆಎಲ್‌ಇ ಸಂಸ್ಥೆಯನ್ನು ಬೆಳೆಸಲು ಎಷ್ಟು ಶ್ರಮ, ಸಮಯ ನೀಡಿದ್ದಾರೋ ಅಷ್ಟೇ ಶ್ರಮ- ಸಮಯವನ್ನು ರಾಜಕಾರಣಕ್ಕೆ ನೀಡಿದ್ದರೆ ದೊಡ್ಡ ಸ್ಥಾನದಲ್ಲಿ ಇರುತ್ತಿದ್ದರು. ಶಿಕ್ಷಣ ಹಾಗೂ ಆರೋಗ್ಯ ಸೇವೆಗಳ ಸುಧಾರಣೆಗಾಗಿ ಅವರು ತಮ್ಮ ರಾಜಕೀಯ ಬದುಕನ್ನೇ ತ್ಯಾಗ ಮಾಡಿದ್ದಾರೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶಂಸೆ ಮಾಡಿದರು.

ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಅವರಿಗೆ 75 ವರ್ಷ ತುಂಬಿದ ಹಿನ್ನೆಲೆಯಲ್ಲಿ, ನಗರದಲ್ಲಿ ಶನಿವಾರ ಆಯೋಜಿಸಿದ್ದ ಅಮೃತ ಮಹೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, 'ಏಳು ದಾನಿಗಳು ಸೇರಿ 20ನೇ ಶತಮಾನದಲ್ಲಿ ಈ ಸಂಸ್ಥೆ ಕಟ್ಟಿದ್ದಾರೆ. ಇದು 21ನೇ ಶತಮಾನದ ಶೈಕ್ಷಣಿಕ ಅಗತ್ಯಗಳನ್ನೂ ಪೂರೈಸುತ್ತಿದೆ. ಭವಿಷ್ಯದ ಬಗ್ಗೆ ಆ 'ಸಪ್ತರ್ಷಿ'ಗಳಿಗೆ ಇದ್ದ ದೂರದೃಷ್ಟಿ ಅವರ್ಣನೀಯ' ಎಂದರು.

'ಪ್ರಭಾಕರ ಅವರ ಮೇಲೆ ಗುಂಡಿನ ದಾಳಿ ನಡೆದಿತ್ತು. ಈಗಲೂ ಒಂದು ಬುಲೆಟ್ ಅವರ ದೇಹದೊಳಗಿದೆ. ಹಾಗಾಗಿ ಅವರನ್ನು 'ಬುಲೆಟ್ ಮ್ಯಾನ್' ಎಂದು ಕಾಲೆಳೆಯುತ್ತೇನೆ ನಾನು. ಆ ದಾಳಿ ನಂತರ ಮರುಜನ್ಮ ಪಡೆದ ಅವರು, ಸಮಾಜಕ್ಕಾಗಿ ಮಾತ್ರ ಬದುಕುತ್ತೇನೆ ಎಂದು ಪ್ರತಿಜ್ಞೆ ಮಾಡಿ, ಅದರಂತೇ ಬದುಕಿದ್ದಾರೆ' ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕೇಂದ್ರ ಶಿಕ್ಷಣ ಮತ್ತು ಕೌಶಲ ಅಭಿವೃದ್ಧಿ ಸಚಿವ ಧರ್ಮೇಂದ್ರ ಪ್ರಧಾನ್, 'ಆದರ್ಶ ಸಮಾಜ ಹೇಗಿರಬೇಕು ಎಂದು 12ನೇ ಶತಮಾನದಲ್ಲೇ ಬಸವಾದಿ ಶರಣರು ಹೇಳಿದ್ದಾರೆ. ಕೆಎಲ್‌ಇ ಸಂಸ್ಥೆ ಅದೇ ಆದರ್ಶಗಳನ್ನು ಮುಂದುವರಿಸಿದೆ. ನಮ್ಮ ಸರ್ಕಾರ ಅನುಷ್ಠಾನಗೊಳಿಸಿದ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಬಸವಣ್ಣನವರ ಆಶಯಗಳೂ ಅಡಗಿವೆ' ಎಂದು ಹೇಳಿದರು.

ಪ್ರಭಾಕರ ಕೋರೆ ಮಾತನಾಡಿ, 'ಬೆಳಗಾವಿಯಲ್ಲಿ ಶಾಸಕರ ಭವನ ಕಟ್ಟಬೇಕು, ಪರಿಪೂರ್ಣ ವಿಧಾನ ಮಂಡಲ ಅಧಿವೇಶನ ನಡೆಸಬೇಕು, ಶಿಕ್ಷಣ ವ್ಯವಸ್ಥೆಯಲ್ಲಿ ಉತ್ತರ ಕರ್ನಾಟಕ ಭಾಗಕ್ಕೆ ಪ್ರತ್ಯೇಕ ಮೀಸಲಾತಿ ಒದಗಿಸಬೇಕು. ಕೆಎಲ್‌ಇ ಸಂಸ್ಥೆಯಿಂದ ರೈತರ ಮಕ್ಕಳಿಗೆ ಉಚಿತ ಶಿಕ್ಷಣ ನೀಡಲು ಸಿದ್ಧವಿದ್ದು, ಸರ್ಕಾರ ಕೈ ಜೋಡಿಸಬೇಕು' ಎಂದು ಕೋರಿದರು.

ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ ಜೋಶಿ, ಶಾಸಕ ಬಿ.ಎಸ್.ಯಡಿಯೂರಪ್ಪ, ಗೋವಾ ಮುಖ್ಯಮಂತ್ರಿ ಪ್ರಮೋದ ಸಾವಂತ್, ಪ್ರಭಾಕರ ಕೋರೆ ಅವರ ಪತ್ನಿ ಆಶಾತಾಯಿ, ಸಂಸ್ಥೆಯ ಅಧ್ಯಕ್ಷ, ಶಾಸಕ ಮಹಾಂತೇಶ ಕೌಜಲಗಿ ಸೇರಿದಂತೆ ಕರ್ನಾಟಕ, ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳ ಹಲವು ಧುರೀಣರು ವೇದಿಕೆ ಮೇಲಿದ್ದರು. ಪ್ರಭಾಕರ ಕೋರೆ ಅವರ ಬದುಕು- ಸಾಧನೆಗಳ ಗ್ರಂಥ ಲೋಕಾರ್ಪಣೆ ಮಾಡಲಾಯಿತು. ಅಭಿಮಾನಿಗಳು ಅವರಿಗೆ ಪುಸ್ತಕಗಳ ತುಲಾಭಾರ ನೆರವೇರಿಸಿದರು.

ಮಳೆ: ಸಂಚಾರ ಅಸ್ತವ್ಯಸ್ತ

ಪ್ರಜಾವಾಣಿ ವಾರ್ತೆ



ಮಂಡ್ಯ ನಗರದ ಬೀಡಿ ಕಾಲೊನಿಯಲ್ಲಿ ವಯೋವೃದ್ಧರು ಹಾಗೂ ಅವರ ಕುಟುಂಬದವರನ್ನು ಸುರಕ್ಷಿತ ಸ್ಥಳಕ್ಕೆ ಕರೆದುಕೊಂಡು ಹೋಗಲು ಜೆಸಿಬಿ ವಾಹನ ಬಳಸಿಕೊಳ್ಳಲಾಯಿತು

ಬೆಂಗಳೂರು: ರಾಜ್ಯದ ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಶುಕ್ರವಾರ ರಾತ್ರಿಯಿಂದ ಶನಿವಾರ ನಸುಕಿನವರೆಗೂ ಭಾರಿ ಮಳೆಯಾಗಿದೆ.

ಭಾರಿ ಮಳೆಯಿಂದ ಒಂದೂವರೆ ತಿಂಗಳ ಹಿಂದಷ್ಟೇ ಒಡೆದಿದ್ದ ಮಂಡ್ಯ ತಾಲ್ಲೂಕಿನ ಹಳೇಬೂದನೂರು ಕೆರೆಯು, ಅದೇ ಸ್ಥಳದಲ್ಲೇ ಒಡೆದಿದ್ದು, ಬೆಂಗಳೂರು- ಮೈಸೂರು ರಾಷ್ಟ್ರೀಯ ಹೆದ್ದಾರಿಗೆ ನೀರು ನುಗ್ಗಿ ಸಂಚಾರ ಅಸ್ತವ್ಯಸ್ತಗೊಂಡಿದೆ. ಈ ಮಾರ್ಗ ಸಂಪೂರ್ಣ ಮುಳುಗಿದೆ. ಇನ್ನೊಂದು ಮಾರ್ಗದಲ್ಲಿ ಎರಡೂ ಕಡೆ ವಾಹನಗಳು ಸಂಚರಿಸುತ್ತಿರುವುದರಿಂದ ವಾಹನ ದಟ್ಟಣೆ ಹೆಚ್ಚಾಗಿದೆ.

ತಾಲ್ಲೂಕಿನ ಭೂತನಹೊಸೂರು ಬಳಿ ಸೇತುವೆ ಕುಸಿದಿದ್ದು, ಮಂಡ್ಯ– ಭಾರತೀನಗರ– ಮಳವಳ್ಳಿ ಸಂಚಾರ ಸ್ಥಗಿತಗೊಂಡಿದೆ. ನಾಲೆ ನೀರು ರಸ್ತೆಗೆ ನುಗ್ಗಿ ಜನಜೀವನ ಅಸ್ತವ್ಯಸ್ತಗೊಂಡಿದೆ. ರಸ್ತೆಬದಿ ಪೆಟ್ರೋಲ್ ಬಂಕ್ ಮುಳುಗಿದೆ.

ಚಾಮರಾಜನಗರ ತಾಲ್ಲೂಕಿನ ಸುವರ್ಣಾವತಿ, ಚಿಕ್ಕ ಹೊಳೆ ಜಲಾಶಯಗಳಿಂದ ಒಟ್ಟು 1,400 ಕ್ಯುಸೆಕ್‌ಗಳಷ್ಟು ನೀರನ್ನು ಹೊರ ಬಿಡಲಾಗುತ್ತಿದೆ.

ರಾಮನಗರ ಜಿಲ್ಲೆಯ ನದಿ ಮತ್ತು ಹಳ್ಳಗಳಲ್ಲಿ ಮತ್ತೆ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಅರ್ಕಾವತಿ ನದಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು, ಇದರಿಂದಾಗಿ ಮಂಚನಬೆಲೆ ಜಲಾಶಯದಿಂದ 6 ಸಾವಿರ ಕ್ಯುಸೆಕ್‌ನಷ್ಟು ನೀರು ಹರಿದಿದ್ದು, ನದಿ ಅಕ್ಕಪಕ್ಕದ ಜಮೀನು, ಕಾಲುಸೇತುವೆಗಳು ಮುಳುಗಡೆ ಆಗಿವೆ.

ಗೌರಿಬಿದನೂರು ತಾಲ್ಲೂಕಿನ ಇಡಗೂರು ಮತ್ತು ಜಾಲಹಳ್ಳಿ ನಡುವೆ ಹರಿಯುತ್ತಿರುವಕುಮುದ್ವತಿ ನದಿಯಲ್ಲಿ ಕೊಚ್ಚಿ ಹೋಗಿದ್ದ ಶಿರಾದ ಬಸವರಾಜ್ ಶನಿವಾರ ಶವವಾಗಿ ಪತ್ತೆ ಆಗಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.58	27,687	20,954
ಹಾರಂಗಿ	2,859	2,853.33	1,108	1,050
ಕಬಿನಿ	2,284	2,282.56	3,541	800
ಹೇಮಾವತಿ	2,922	2,922	10,555	8,817
ಲಿಂಗನಮಕ್ಕಿ	1,819	1,814	5,465	5,366
ಸೂಪಾ (ಮೀ)	564	553.73	1,954	1,110
ಮಾಣಿ	595	589	180	744
ತುಂಗಭದ್ರಾ	1,633	1632.84	42,471	43,436
ಮಲಪ್ರಭಾ	2079.50	2,079.50	3,294	3,294
ಘಟಪ್ರಭಾ	2,175	2,175	2,693	2,693
ಭದ್ರಾ	186	185	12,223	13,439
ಆಲಮಟ್ಟಿ (ಮೀ)	519.60	519.26	79,686	1,20,451
ನಾರಾಯಣಪುರ (ಮೀ)	492.25	491.46	60,000	44,900

* ನೆಲಮಟ್ಟದಿಂದ

'ಸಂಪುಟ ವಿಸ್ತರಣೆ: ಸದ್ಯದಲ್ಲೇ ದೆಹಲಿಗೆ'

ಬೆಳಗಾವಿ: 'ಜನಸಂಕಲ್ಪ ಯಾತ್ರೆ ವೇಳೆಯೇ ನವದೆಹಲಿಗೆ ಭೇಟಿ ನೀಡಿ, ಸಚಿವ ಸಂಪುಟ ವಿಸ್ತರಣೆ ಕುರಿತು ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಹಾಗೂ ಹಿರಿಯ ನಾಯಕರೊಂದಿಗೆ ಚರ್ಚಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸುದ್ದಿಗಾರರಿಗೆ ಹೇಳಿದರು.

'ಸಂಪುಟ ವಿಸ್ತರಿಸುವಾಗ ಬೆಳಗಾವಿಗೆ ಶುಭ ಸುದ್ದಿ ಇದೆಯೇ' ಎಂಬ ಪ್ರಶ್ನೆಗೆ, 'ಸಂಪುಟ ವಿಸ್ತರಣೆ ನಿರ್ಣಯ ಕೈಗೊಂಡಾಗ ಈ ಬಗ್ಗೆ ತಿಳಿಸಲಾಗುವುದು' ಎಂದರು.

ಮಹಾರಾಷ್ಟ್ರದ ಕೊಲ್ಹಾಪುರದ ಕನ್ಹೇರಿ ಮಠದಲ್ಲಿ ಕನ್ನಡ ಭವನ ಕಟ್ಟಲು ಶಿವಸೇನೆ ವಿರೋಧಿಸುತ್ತಿರುವ ಕುರಿತು ಪ್ರತಿಕ್ರಿಯಿಸಿದ ಅವರು, 'ಈಗಾಗಲೇ ಮಹಾರಾಷ್ಟ್ರದಲ್ಲಿ ಹತ್ತಾರು ಸಂಘಗಳ ಕನ್ನಡ ಭವನಗಳಿವೆ.ಈ ವಿಚಾರದಲ್ಲಿ ರಾಜ್ಯ ಹಾಗೂ ಭಾಷೆಗಳು ಅಡಚಣೆ ಆಗಬಾರದು' ಎಂದು ತಿಳಿಸಿದರು.

ಮುರುಘಾ ಮಠದ ಅಧೀನದಲ್ಲಿರುವ ಎಸ್‌ಜೆಎಂ ವಿದ್ಯಾಪೀಠದ ಆಡಳಿತಾತ್ಮಕ ನಿರ್ಧಾರದ ಅಧಿಕಾರ

ನಿವೃತ್ತ ನ್ಯಾಯಾಧೀಶರಿಗೆ ಪವರ್ ಆಫ್ ಅಟಾರ್ನಿ

ಪ್ರಜಾವಾಣಿ ವಾರ್ತೆ



ಎಸ್.ಬಿ. ವಸ್ತ್ರಮಠ

ಚಿತ್ರದುರ್ಗ: ಮುರುಘಾ ಮಠದ ಅಧೀನದಲ್ಲಿರುವ ಎಸ್‌ಜೆಎಂ ವಿದ್ಯಾಪೀಠದ ಆಡಳಿತಾತ್ಮಕ ನಿರ್ಧಾರ ಕೈಗೊಳ್ಳುವ ಅಧಿಕಾರವನ್ನು (ಪವರ್ ಆಫ್ ಅಟಾರ್ನಿ) ಕಾರಾಗೃಹದಲ್ಲಿರುವ ಶಿವಮೂರ್ತಿ ಮುರುಘಾ ಶರಣರು ನಿವೃತ್ತ ನ್ಯಾಯಾಧೀಶ ಎಸ್.ಬಿ.ವಸ್ತ್ರಮಠ ಅವರಿಗೆ ಹಸ್ತಾಂತರಿಸಿದ್ದಾರೆ.

ಹೈಕೋರ್ಟ್ ಅನುಮತಿ ಪಡೆದು ಅಧಿಕಾರ ಪತ್ರ ಹಸ್ತಾಂತರ ಪ್ರಕ್ರಿಯೆಯನ್ನು ಕಾರಾಗೃಹದಲ್ಲಿ ಪೂರ್ಣಗೊಳಿಸಲಾಗಿದೆ. ವಿದ್ಯಾಪೀಠದ ಶಿಕ್ಷಣ ಸಂಸ್ಥೆಗಳ ಆಡಳಿತಾತ್ಮಕ ನಿರ್ಧಾರ, ಚೆಕ್‌ಗಳಿಗೆ ಸಹಿ ಹಾಕುವ ಅಧಿಕಾರವನ್ನು ಎಸ್‌ಜೆಎಂ ವಿದ್ಯಾಪೀಠದ ಕಾರ್ಯದರ್ಶಿಯೂ ಆಗಿರುವ ವಸ್ತ್ರಮಠ ಕಾನೂನಾತ್ಮಕವಾಗಿ ಪಡೆದಿದ್ದಾರೆ.

'ಎಸ್‌ಜೆಎಂ ವಿದ್ಯಾಪೀಠದ ಕಾರ್ಯದರ್ಶಿಗೆ ಅಧಿಕಾರ ಪತ್ರ (ಪವರ್ ಆಫ್ ಅಟಾರ್ನಿ) ನೀಡಬೇಕು ಎಂಬ ನಿಯಮ ಇದೆ. ಈ ಪ್ರಕ್ರಿಯೆಯನ್ನು ಹೈಕೋರ್ಟ್ ಆದೇಶಕ್ಕೆ ಅನುಗುಣವಾಗಿ ಪೂರ್ಣಗೊಳಿಸಲಾಗಿದೆ. ಕಾರಾಗೃಹದಲ್ಲಿ ನ್ಯಾಯಬದ್ಧವಾಗಿ ಪ್ರಕ್ರಿಯೆ ನಡೆದಿದೆ' ಎಂದು ಎಸ್.ಬಿ.ವಸ್ತ್ರಮಠ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಶಿವಮೂರ್ತಿ ಮುರುಘಾ ಶರಣರು ವಿದ್ಯಾಪೀಠದ ಅಧ್ಯಕ್ಷರಾಗಿದ್ದಾರೆ. ಅಧಿಕಾರ ಅವರಲ್ಲಿದ್ದ ಕಾರಣಕ್ಕೆ ವೇತನ ಹಾಗೂ ಇತರ ಆಡಳಿತಾತ್ಮಕ ವಿಚಾರಕ್ಕೆ ತೊಂದರೆ ಉಂಟಾಗಿತ್ತು. ಅವರೇ ಸ್ವ ಇಚ್ಛೆಯಿಂದ ಅಧಿಕಾರವನ್ನು ಹಸ್ತಾಂತರಿಸಿದ್ದಾರೆ. ಇನ್ನು ಮುಂದೆ ಆಡಳಿತ ಸುಲಲಿತವಾಗಿ ನಡೆಯಲಿದೆ' ಎಂದು ಮಾಹಿತಿ ನೀಡಿದರು.

ಪ್ರೌಢಶಾಲೆಯ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣದಲ್ಲಿ ಬಂಧಿತರಾಗಿರುವ ಶಿವಮೂರ್ತಿ ಮುರುಘಾ ಶರಣರು ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ. ಇದರಿಂದ ವಿದ್ಯಾಪೀಠದ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಯ ವೇತನಕ್ಕೆ ತೊಂದರೆ ಉಂಟಾಗಿತ್ತು. ನೌಕರರ ವೇತನದ ಉದ್ದೇಶಕ್ಕೆ ಕಾರಾಗೃಹದಲ್ಲಿ ಚೆಕ್‌ಗಳಿಗೆ ಸಹಿ ಹಾಕಲು ಒಮ್ಮೆ ಮಾತ್ರ ನ್ಯಾಯಾಲಯ ಅವಕಾಶ ಕಲ್ಪಿಸಿತ್ತು. ಪರ್ಯಾಯ ಮತ್ತು ತಾತ್ಕಾಲಿಕ ವ್ಯವಸ್ಥೆ ರೂಪಿಸಿಕೊಳ್ಳಲು 'ಪವರ್ ಆಫ್ ಅಟಾರ್ನಿ' ಚಲಾಯಿಸಲು ಅನುಮತಿ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ಮಾನ್ಯ ಮಾಡಿತು.

'ಪೀಠತ್ಯಾಗದ ಪ್ರಶ್ನೆಯೇ ಇಲ್ಲ'

ಶಿವಮೂರ್ತಿ ಮುರುಘಾ ಶರಣರು ಪೀಠತ್ಯಾಗ ಮಾಡುವ ಪ್ರಶ್ನೆಯೇ ಉದ್ಭವಿಸಿಲ್ಲ. ಚಿನ್ಮೂಲಾದ್ರಿ ಶ್ರೀಜಗದ್ಗುರು ಮುರುಘರಾಜೇಂದ್ರ ಟ್ರಸ್ಟ್‌ಗೆ ಅವರೇ ಅಧ್ಯಕ್ಷರಾಗಿದ್ದು, ಪೀಠಾಧ್ಯಕ್ಷರಾಗಿ ಮುಂದುವರಿಯಲಿದ್ದಾರೆ ಎಂದು ಎಸ್.ಬಿ.ವಸ್ತ್ರಮಠ ಸ್ಪಷ್ಟನೆ ನೀಡಿದ್ದಾರೆ.

'ಮಠ ಹಾಗೂ ವಿದ್ಯಾಪೀಠ ಎರಡೂ ಪ್ರತ್ಯೇಕವಾಗಿವೆ. ವಿದ್ಯಾಪೀಠದ ಆಡಳಿತಾತ್ಮಕ ವಿಚಾರಕ್ಕೆ ಸಂಬಂಧಿಸಿದ ಅಧಿಕಾರವನ್ನು ಮಾತ್ರ ಹಸ್ತಾಂತರಿಸಲಾಗಿದೆ. ಮಠದ ವಿಚಾರದಲ್ಲಿ ಹಬ್ಬಿರುವ ವದಂತಿಗಳಿಗೆ ಭಕ್ತರು ಕಿವಿಗೊಡುವ ಅಗತ್ಯವಿಲ್ಲ. ಪೀಠಾಧ್ಯಕ್ಷರಾಗಿ ಶರಣರೇ ಮುಂದುವರಿಯಲಿದ್ದಾರೆ' ಎಂದು ಹೇಳಿದರು.

ಕಾನೂನು ಚೌಕಟ್ಟಿನೊಳಗೆ ಕ್ರಮ: ಸಿ.ಎಂ

ಬೆಂಗಳೂರು: ಚಿತ್ರದುರ್ಗದ ಮುರುಘಾ ಮಠದ ಆಡಳಿತಕ್ಕೆ ಸಂಬಂಧಿಸಿದಂತೆ ಕಾನೂನು ಚೌಕಟ್ಟಿನೊಳಗೆ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶನಿವಾರ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮಾಜಿ ಸಚಿವ ಏಕಾಂತಯ್ಯ ನೇತೃತ್ವದಲ್ಲಿ ಮಠದ ಭಕ್ತಮಂಡಳಿ ನಿಯೋಗ ನನ್ನನ್ನು ಭೇಟಿ ಮಾಡಿತ್ತು. ಮಠವು ಒಂದು ಟ್ರಸ್ಟ್ ವ್ಯಾಪ್ತಿಯಲ್ಲಿದೆ. ಹೀಗಾಗಿ, ಕಾನೂನು ಚೌಕಟ್ಟಿನಲ್ಲಿ ಸೂಕ್ತಕ್ರಮ ಕೈಗೊಳ್ಳಲಾಗುವುದು' ಎಂದರು.


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.


ಜಾಗತಿಕ ಹಸಿವು: ಸುಧಾರಿಸದ ಭಾರತದ ರ್‍ಯಾಂಕ್

ನೆರೆಯದೇಶಗಳಾದ ಪಾಕಿಸ್ತಾನ, ಬಾಂಗ್ಲಾದೇಶಗಳಿಗಿಂತಲೂ ಭಾರತದ ಮಕ್ಕಳು ಹೆಚ್ಚು ಅಪೌಷ್ಟಿಕತೆ ಹಾಗೂ ಹಸಿವಿನಿಂದ ಬಳಲುತ್ತಿರುವುದನ್ನು 'ಜಾಗತಿಕ ಹಸಿವು ಸೂಚ್ಯಂಕ-2022' ವರದಿ ಬಹಿರಂಗ ಮಾಡಿದೆ.

ಅಪೌಷ್ಟಿಕತೆ, ಕುಂಠಿತ ಬೆಳವಣಿಗೆ, ಕಡಿಮೆ ತೂಕದ ಮಕ್ಕಳು ಹಾಗೂ ಶಿಶು ಮರಣಗಳನ್ನು ಹಸಿವು ಸೂಚಿಗಳೆಂದು ಪರಿಗಣಿಸಲಾಗಿದೆ. ಈ ಪೈಕಿ, ಕಡಿಮೆ ತೂಕದ ಮಕ್ಕಳ ಸೂಚಿಯಲ್ಲಿ ಭಾರತವು (ಶೇ 19.3), ಸುಡಾನ್, ಯೆಮನ್ ದೇಶಗಳಿಗಿಂತಲೂ ಕಳಪೆ ಸಾಧನೆ ಮಾಡಿದೆ. ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಈ ಸೂಚಿಗೆ ಪರಿಗಣಿಸಲಾಗುತ್ತದೆ. 121 ದೇಶಗಳ ಪೈಕಿ ಈ ಸಮಸ್ಯೆ ಅತಿ ಹೆಚ್ಚು ಇರುವುದು ಭಾರತದಲ್ಲಿ ಎಂದು ವರದಿ ತಿಳಿಸಿದೆ. 2020ನೇ ವರ್ಷವನ್ನು ಹೊರತುಪಡಿಸಿದರೆ, ಐದು ವರ್ಷಗಳಲ್ಲಿ ಭಾರತದ ಶ್ರೇಯಾಂಕ ಇಳಿಕೆ ಕಂಡಿದೆ.

ಕೇಂದ್ರ ಆಕ್ಷೇಪ: ವರದಿಯನ್ನು ತಿರಸ್ಕರಿಸಿರುವ ಕೇಂದ್ರ ಸರ್ಕಾರ, 'ಇದು ದೇಶದ ವರ್ಚಸ್ಸು ಕೆಡಿಸುವ ಯತ್ನ' ಎಂದು ಕರೆದಿದೆ. ಅಧ್ಯಯನ ವಿಧಾನ ಸಮರ್ಪಕವಾಗಿಲ್ಲ ಎಂದು ಆರೋಪಿಸಿದೆ.





ಸಾಲ: ಬ್ಯಾಂಕಿಗೆ ಬಾಂಬ್ ಬೆದರಿಕೆ

ಮುಂಬೈ (ಪಿಟಿಐ): ₹ 10 ಲಕ್ಷ ಸಾಲ ಕೇಳಿದ ವ್ಯಕ್ತಿಯೊಬ್ಬ ಕೊಡದಿದ್ದರೆ ಬ್ಯಾಂಕ್‌ನ್ನು ಬಾಂಬ್‌ನಿಂದ ಉಡಾಯಿಸುವುದಾಗಿ ಬೆದರಿಕೆ ಒಡ್ಡಿದ ಘಟನೆ ದಕ್ಷಿಣ ಮುಂಬೈನ ಎಸ್‌ಬಿಐ ಬ್ಯಾಂಕ್‌ನಲ್ಲಿ ನಡೆದಿದೆ. ಬ್ಯಾಂಕ್‌ನ ಮುಖ್ಯಸ್ಥನನ್ನು ಅಪಹರಿಸಿ, ಹತ್ಯೆ ಮಾಡುವುದಾಗಿಯೂ ಹೆದರಿಸಿದ್ದಾನೆ. ಬೆದರಿಕೆ ಹಾಕಿ ರುವ ವ್ಯಕ್ತಿಯು ತನ್ನನ್ನು ಮೊಹಮ್ಮದ್ ಜಿಯಾ ಅಲಿ ಎಂದು ಪರಿಚಯಿಸಿಕೊಂಡಿದ್ದಾನೆ.

ಗಿನ್ನಿಸ್ ದಾಖಲೆ ಸೇರಿದ ಟೋಪಿ ಪ್ರದರ್ಶನ



ನವದೆಹಲಿ (ಪಿಟಿಐ): ಉಣ್ಣೆಯಿಂದ ಹೆಣೆದಿರುವ 41,541 ಟೋಪಿಗಳನ್ನು ಪ್ರದರ್ಶಿಸುವ ಮೂಲಕ ವಾಯುಪಡೆ ಸಿಬ್ಬಂದಿ ಪತ್ನಿಯರ ಕಲ್ಯಾಣ ಸಂಘಟನೆಯು (ಎಎಫ್‌ಡಬ್ಲ್ಯುಡಬ್ಲ್ಯುಎ) ಶನಿವಾರ ಗಿನ್ನಿಸ್ ವಿಶ್ವ ದಾಖಲೆ ಬರೆಯಿತು.

ಸಂಘಟನೆ ಹಮ್ಮಿಕೊಂಡಿದ್ದ 'ನಿಟ್ಟಾಥಾನ್' ಅಭಿಯಾನದ ಅಂಗವಾಗಿ ದೇಶದಾದ್ಯಂತ ಎಎಫ್‌ಡಬ್ಲ್ಯುಡಬ್ಲ್ಯುಎಗೆ ಸೇರಿದ ಸುಮಾರು 3,000 ಮಹಿಳೆಯರು ಮೂರು ತಿಂಗಳ ಅವಧಿಯಲ್ಲಿ 41,541 ಟೋಪಿ ಹೆಣೆದಿದ್ದಾರೆ. ಜುಲೈ 15ರಿಂದ ಆರಂಭವಾದ ಈ ಅಭಿಯಾನದ ಸಮಾರೋಪ ಸಮಾರಂಭವು ಅಕ್ಟೋಬರ್ 15ರಂದು ದೆಹಲಿಯ ವಾಯುಪಡೆ ಸಭಾಂಗಣದಲ್ಲಿ ನಡೆಯಿತು.

ಪಟ್ಟಾಭಿಷೇಕಕ್ಕೆ 'ಸುಪ್ರೀಂ' ತಡೆ

ನವದೆಹಲಿ (ಪಿಟಿಐ): ಉತ್ತರಾಖಂಡ ಬದರಿಕಾಶ್ರಮದ ಜ್ಯೋತಿಷ್ ಪೀಠದ ನೂತನ ಶಂಕರಾಚಾರ್ಯ ಸ್ವಾಮಿ ಅವಿಮುಕ್ತೇಶ್ವರಾನಂದ ಸರಸ್ವತಿ ಅವರ ಪಟ್ಟಾಭಿಷೇಕಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡಿದೆ.

ನ್ಯಾಯಮೂರ್ತಿಗಳಾದ ಬಿ. ಆರ್. ಗವಾಯಿ ಮತ್ತು ಬಿ. ವಿ. ನಾಗರತ್ನ ಅವರ ಪೀಠ ಈ ಆದೇಶ ನೀಡಿದೆ.

ಜ್ಯೋತಿಷ್ ಪೀಠದ ನೂತನ ಶಂಕರಾಚಾರ್ಯರಾಗಿ ಅವಿಮುಕ್ತೇಶ್ವರಾನಂದ ಅವರ ನೇಮಕವನ್ನು ಅನುಮೋದಿಸಲಾಗಿಲ್ಲ ಎಂದು ಪುರಿಯ ಗೋವರ್ಧನ ಮಠದ ಶಂಕರಾಚಾರ್ಯರು ಪ್ರಮಾಣ ಪತ್ರ ಸಲ್ಲಿಸಿದ್ದಾರೆ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ತಿಳಿಸಿದ್ದಾರೆ.

ಕಲುಷಿತ ನೀರು ಪೂರೈಕೆ: 'ನೀಟ್' ಆಕಾಂಕ್ಷಿ ಸಾವು

ಕೋಟಾ, ರಾಜಸ್ಥಾನ (ಪಿಟಿಐ): ಹೆಪಾಟಿಕ್ ಎನ್ಸೆಫಾಲೋಪತಿ (ಯಕೃತ್ತಿನ ಕಾಯಿಲೆಯಿಂದ ಉಂಟಾಗುವ ನರಮಂಡಲದ ಅಸ್ವಸ್ಥತೆ) ಕಾಯಿಲೆಗೆ ತುತ್ತಾಗಿದ್ದ 18 ವರ್ಷದ 'ನೀಟ್' ಆಕಾಂಕ್ಷಿ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ವೇಳೆ ಮೃತಪಟ್ಟಿದ್ದಾರೆ ಎಂದು ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ. ಕಲುಷಿತ ನೀರು ಪೂರೈಕೆಯಿಂದಲೇ ಈ ದುರಂತ ಸಂಭವಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವೈಭವ್ ರಾಯ್ ಮೃತ ಯುವಕ. ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಇಲ್ಲಿನ ಜವಾಹರ್ ನಗರ ಪ್ರದೇಶದ 36 ವಿದ್ಯಾರ್ಥಿಗಳಲ್ಲಿ ವೈಭವ್ ಸಹ ಒಬ್ಬರು. ಈ ಪೈಕಿ 18 ಮಂದಿ ಗುಣಮುಖರಾಗಿದ್ದು, ಇತರರು ಮೂರು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಅಧಿಕ ದಟ್ಟಣೆಯ ರಾಜ್ಯ ಹೆದ್ದಾರಿಗಳು ಕೇಂದ್ರದ ಸುಪರ್ದಿಗೆ: ಸಚಿವ ಗಡ್ಕರಿ

ನವದೆಹಲಿ (ಪಿಟಿಐ): 'ಅಧಿಕ ದಟ್ಟಣೆಯ ರಾಜ್ಯ ಹೆದ್ದಾರಿಗಳನ್ನು ತನ್ನ ಸುಪರ್ದಿಗೆ ಪಡೆದು ಅವುಗಳನ್ನು ನಾಲ್ಕು ಅಥವಾ ಆರು ಪಥಗಳ ಹೆದ್ದಾರಿಗಳನ್ನಾಗಿ ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರ ಯೋಜನೆ ರೂಪಿಸಿದೆ' ಎಂದು ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಅಸೋಸಿಯೇಷನ್ ಆಫ್ ನ್ಯಾಷನಲ್ ಎಕ್ಸ್‌ಚೇಂಜಸ್ ಮೆಂಬರ್ಸ್ ಆಫ್ ಇಂಡಿಯಾ (ಎಎನ್‌ಎಂಐ) ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶನಿವಾರ ಮಾತನಾಡಿದ ಅವರು, '25 ವರ್ಷಗಳ ಅವಧಿಗೆ ಈ ಹೆದ್ದಾರಿಗಳನ್ನು ಸುಪರ್ದಿಗೆ ಪಡೆಯಲಾಗುತ್ತದೆ. ಭೂ ಸ್ವಾಧೀನ ಪ್ರಕ್ರಿಯೆ ಸೇರಿದಂತೆ ಈ ಹೆದ್ದಾರಿಗಳ ಒಟ್ಟಾರೆ ಅಭಿವೃದ್ಧಿಗೆ ವಿನಿಯೋಗಿಸಲಾಗುವ ಮೊತ್ತವನ್ನು ಟೋಲ್ ಸಂಗ್ರಹದ ಮೂಲಕ 12 ಅಥವಾ 13 ವರ್ಷದೊಳಗೆ ಮರಳಿ ಪಡೆಯಲಾಗುತ್ತದೆ' ಎಂದು ಹೇಳಿದ್ದಾರೆ.

'ಮುಂಬೈ ಮತ್ತು ಬೆಂಗಳೂರು ನಡುವಣ ಪ್ರಯಾಣದ ಅವಧಿಯನ್ನು ಐದು ಗಂಟೆಗೆ ತಗ್ಗಿಸುವ ಆಲೋಚನೆ ಇದೆ. ಇದಕ್ಕಾಗಿ ಹಸಿರು ಎಕ್ಸ್‌ಪ್ರೆಸ್ ಹೆದ್ದಾರಿ ನಿರ್ಮಾಣ ಮಾಡಲು ಚಿಂತನೆ ನಡೆಸಲಾಗಿದೆ. ದೇಶದಲ್ಲಿ ಇಂತಹ ಒಟ್ಟು 27 ಹಸಿರು ಎಕ್ಸ್‌ಪ್ರೆಸ್ ಹೆದ್ದಾರಿಗಳನ್ನು ನಿರ್ಮಿಸಲಾಗುತ್ತದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ಅತ್ಯಾಚಾರ: ಬಿಎಸ್‌ಪಿ ನಾಯಕನ ಮೂವರು ಮಕ್ಕಳ ವಿರುದ್ಧ ದೂರು

ಸಹಾರನ್‌ಪುರ (ಉತ್ತರ ಪ್ರದೇಶ) (ಪಿಟಿಐ): ಸಾಮೂಹಿಕ ಅತ್ಯಾಚಾರ ಎಸಗಿದ ಆರೋಪ ಸಂಬಂಧ ಬಿಎಸ್‌ಪಿ ಮಾಜಿ ಎಂಎಲ್‌ಸಿ ಹಾಜಿ ಇಕ್ಬಾಲ್ ಅವರ ಮೂವರು ಮಕ್ಕಳು ಸೇರಿ ನಾಲ್ವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ಸದ್ಯ ಹಾಜಿ ಇಕ್ಬಾಲ್ ತಲೆಮರೆಸಿಕೊಂಡಿದ್ದು, ಅವರ ಮಕ್ಕಳು ಬೇರೆ ಬೇರೆ ಪ್ರಕರಣಗಳಲ್ಲಿ ಈಗಾಗಲೇ ಜೈಲಿನಲ್ಲಿದ್ದಾರೆ. ನಾಲ್ಕನೇ ಆರೋಪಿ ಶಹಬಾನ್‌ನನ್ನು ಶನಿವಾರ ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ.

ಪುರನ್ ಕಿಶನ್ ಭಟ್ ಮೇಲೆ ಗುಂಡು ಹಾರಿಸಿದ ಉಗ್ರರು

ಮತ್ತೊಬ್ಬ ಕಾಶ್ಮೀರಿ ಪಂಡಿತನ ಹತ್ಯೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಶೋಪಿಯಾನ್ ಜಿಲ್ಲೆಯಲ್ಲಿ ಶನಿವಾರ ಕಾಶ್ಮೀರಿ ಪಂಡಿತ ರೈತರೊಬ್ಬರನ್ನು ಉಗ್ರರು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ದಕ್ಷಿಣ ಕಾಶ್ಮೀರ ಜಿಲ್ಲೆಯ ಚೌಧರಿ ಗುಂಡ್ ಪ್ರದೇಶದ ನಿವಾಸಿ ಪುರನ್ ಕ್ರಿಶನ್ ಭಟ್ ಅವರು ಶೋಪಿಯಾನ್‌ನಲ್ಲಿ ಹಣ್ಣಿನ ತೋಟಕ್ಕೆ ಹೋಗುತ್ತಿದ್ದಾಗ ಉಗ್ರರು ಗುಂಡು ಹಾರಿಸಿದ್ದಾರೆ. ಅವರನ್ನು ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಮೃತಪಟ್ಟಿದ್ದಾರೆ ಎಂದು ವೈದ್ಯರು ಘೋಷಿಸಿದರು' ಎಂದು ಕಾಶ್ಮೀರ ವಲಯ ಪೊಲೀಸರು ಟ್ವಿಟರ್‌ನಲ್ಲಿ ತಿಳಿಸಿದ್ದಾರೆ.

ಘಟನೆ ನಡೆದ ಪ್ರದೇಶ ಸುತ್ತುವರಿಯಲಾಗಿದ್ದು, ಉಗ್ರರ ಸೆರೆಗೆ ಕಾರ್ಯಾಚರಣೆ ಪ್ರಾರಂಭಿಸಲಾಗಿದೆ ಎಂದು ಅವರು ಹೇಳಿದರು.

'ಕ್ರಿಶನ್ ಭಟ್ ಮೇಲೆ ನಡೆಸಿದ ದಾಳಿ ಹೇಡಿತನದ ಕೃತ್ಯವಾಗಿದೆ. ದುಷ್ಕರ್ಮಿಗಳು ಮತ್ತು ಭಯೋತ್ಪಾದಕರಿಗೆ ಸಹಾಯ ಮಾಡುವವರಿಗೆ ಕಠಿಣ ಶಿಕ್ಷೆ ವಿಧಿಸಲಾಗುವುದು ಎಂದು ಜನರಿಗೆ ಭರವಸೆ ನೀಡುತ್ತೇನೆ' ಎಂದು ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಟ್ವೀಟ್ ಮಾಡಿದ್ದಾರೆ.

ಸಂಬಂಧಿಕರೊಬ್ಬರ ಪ್ರಕಾರ, 'ಮೃತ ಭಟ್ ಅವರಿಗೆ ಇಬ್ಬರು ಶಾಲೆಗೆ ಹೋಗುವ ಮಕ್ಕಳಿದ್ದಾರೆ. ಅವರು ಮನೆಯಿಂದ ಹೊರಬರಲಿಲ್ಲ. ನಮಗೆ ತುಂಬಾ ಭಯವಾಗಿದೆ' ಎಂದು ಹೇಳಿದರು.

'ಕಾಶ್ಮೀರದಲ್ಲಿ ಯಾವುದೇ ಸಮುದಾಯದ ಸದಸ್ಯರು ಸುರಕ್ಷಿತವಾಗಿಲ್ಲ. ಕಾಶ್ಮೀರಿ ಪಂಡಿತರಿಗೆ ಒಂದೇ ಒಂದು ಆಯ್ಕೆ ಉಳಿದಿದೆ. ಕಾಶ್ಮೀರ ತೊರೆಯಿರಿ ಅಥವಾ ಸ್ಥಳೀಯ ಜನರ ಬೆಂಬಲ ಹೊಂದಿರುವ ಧಾರ್ಮಿಕ ಮತಾಂಧ ಮನಸ್ಸುಗಳಿಂದ ಹತ್ಯೆಯಾಗುತ್ತೀರಿ' ಎಂದು ಕಾಶ್ಮೀರಿ ಪಂಡಿತ್ ಸಂಘರ್ಷ ಸಮಿತಿ ಹೇಳಿದೆ.



ಶೋಪಿಯಾನ್‌ನಲ್ಲಿ ಕಾಶ್ಮೀರಿ ಪಂಡಿತನ ಹತ್ಯೆ ಖಂಡಿಸಿ ಶನಿವಾರ ಕಾಶ್ಮೀರಿ ಪಂಡಿತ ನೌಕರರು ಪೂಂಚ್ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಹೆದ್ದಾರಿ ತಡೆ

ಪುರನ್ ಕ್ರಿಶನ್ ಭಟ್ ಹತ್ಯೆ ಖಂಡಿಸಿ ಕಾಶ್ಮೀರಿ ಪಂಡಿತ್ ನೌಕರರು ಶನಿವಾರ ಜಮ್ಮು-ಅಖ್ನೂರ್ ರಸ್ತೆತಡೆ ನಡೆಸಿದರು. ಸರ್ಕಾರದ ವೈಫಲ್ಯ ಖಂಡಿಸಿ ಘೋಷಣೆ ಕೂಗಿ, ಹೆದ್ದಾರಿ ತಡೆದರು.

ರಾಷ್ಟ್ರೀಯ ಬಜರಂಗದಳದ ಕಾರ್ಯಕರ್ತರು ಸಹ ಪ್ರತಿಭಟನಾಕಾರರಿಗೆ ಬೆಂಬಲ ಸೂಚಿಸಿದರು.

'ಒಂದು ವರ್ಷದಲ್ಲಿ ಸರಣಿ ಹತ್ಯೆ ನಂತರ ಕಣಿವೆಯಿಂದ ತಮ್ಮನ್ನು ಸ್ಥಳಾಂತರಿಸುವಂತೆ ಮನವಿ ಮತ್ತು ಪ್ರತಿಭಟನೆಗಳ ಮೂಲಕ ಸರ್ಕಾರವನ್ನು ಆಗ್ರಹಿಸಿದ್ದೇವೆ. ಈ ಸರ್ಕಾರ ಕಿವುಡ, ಮೂಗ ಮತ್ತು ಕುರುಡಾಗಿದೆ. ಎಂದು ಪ್ರತಿಭಟನಾಕಾರ ಯೋಗೇಶ್ ಪಂಡಿತ್‌ಆ ಕ್ರೋಶ ವ್ಯಕ್ತಪಡಿಸಿದರು.

ಹೊಸ ಕಾನೂನು ಪ್ರಾದೇಶಿಕ ಭಾಷೆಯಲ್ಲಿ ಇರಲಿ: ಮೋದಿ

ಕೆವಾಡಿಯಾ (ಗುಜರಾತ್) (ಪಿಟಿಐ): 'ಹೊಸ ಕಾನೂನುಗಳನ್ನು ಸ್ಪಷ್ಟವಾದ ರೀತಿಯಲ್ಲಿ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ಬರೆಯಬೇಕು. ಇದರಿಂದ ಬಡವರು, ಸಾಮಾನ್ಯ ಜನರಿಗೂ ಕಾನೂನು ಸುಲಭವಾಗಿ ಅರ್ಥವಾಗುತ್ತದೆ. ನ್ಯಾಯದಾನವೂ ಸುಲಭವಾಗುತ್ತದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಇಲ್ಲಿಗೆ ಸಮೀಪದ ಏಕತಾ ನಗರದಲ್ಲಿ ನಡೆಯುತ್ತಿರುವ ಎರಡು ದಿನಗಳ 'ಕಾನೂನು ಸಚಿವರು ಮತ್ತು ಕಾನೂನು ಕಾರ್ಯದರ್ಶಿಗಳ ಅಖಿಲ ಭಾರತ ಸಮಾವೇಶ'ದ ಉದ್ಘಾಟನಾ ಸಮಾರಂಭದಲ್ಲಿ ವಿಡಿಯೊ ಸಂದೇಶದ ಮೂಲಕ ಪ್ರಧಾನಿ ಮಾತನಾಡಿದರು.

'ಕಾನೂನನ್ನು ಅರ್ಥ ಮಾಡಿಕೊಳ್ಳಲು ಜನರಿಗೆ ಭಾಷೆ ಅಡ್ಡಿಯಾಗಬಾರದು' ಎಂದು ಹೇಳಿದರು.

'ನ್ಯಾಯ ಪಡೆಯುವಲ್ಲಿ ವಿಳಂಬವಾಗುತ್ತಿರುವುದು ನಮ್ಮ ದೇಶದ ಜನರು ಎದುರಿಸುತ್ತಿರುವ ಪ್ರಮುಖ ಸವಾಲುಗಳಲ್ಲಿ ಒಂದಾಗಿದೆ' ಎಂದು ಬೇಸರ ವ್ಯಕ್ತಪಡಿಸಿರುವ ಪ್ರಧಾನಿ ನರೇಂದ್ರ ಮೋದಿ, 'ಸಮರ್ಥ ರಾಷ್ಟ್ರ ಮತ್ತು ಸಾಮರಸ್ಯ ಸಮಾಜಕ್ಕೆ ಸೂಕ್ಷ್ಮ ನ್ಯಾಯಾಂಗ ವ್ಯವಸ್ಥೆ ಅತ್ಯಗತ್ಯ' ಎಂದು ಪ್ರತಿಪಾದಿಸಿದರು.

'ನಮ್ಮ ನ್ಯಾಯಾಂಗವು ಈ ಸಮಸ್ಯೆ ಪರಿಹರಿಸಲು ಗಂಭೀರವಾಗಿ ಕಾರ್ಯನಿರ್ವಹಿಸುತ್ತಿದೆ. ಈ ಅಮೃತ ಕಾಲದಲ್ಲಿ, ಇದನ್ನು ನಿಭಾಯಿಸಲು ನಾವು ಒಟ್ಟಾಗಿ ಕೆಲಸ ಮಾಡಬೇಕಾಗಿದೆ' ಎಂದು ತಿಳಿಸಿದರು.

ಲೋಕ ಅದಾಲತ್‌ಗಳಂತಹ ವ್ಯವಸ್ಥೆಗಳು ನ್ಯಾಯಾಲಯಗಳ ಮೇಲಿನ ಹೊರೆಯನ್ನು ಕಡಿಮೆ ಮಾಡಲು ಮತ್ತು ಬಡವರಿಗೆ ಸುಲಭವಾಗಿ ನ್ಯಾಯ ದೊರೆಯುವಂತೆ ಮಾಡಲು ನೆರವಾಗಿವೆ ಎಂದು ಅವರು ಸ್ಮರಿಸಿದರು.

'ನಮ್ಮ ಸರ್ಕಾರವು ಎಂಟು ವರ್ಷಗಳಲ್ಲಿ 1,500ಕ್ಕೂ ಹೆಚ್ಚು ಹಳೆಯ ಹಾಗೂ ಅಪ್ರಸ್ತುತ ಕಾನೂನುಗಳನ್ನು ರದ್ದುಗೊಳಿಸಿದೆ' ಎಂದು ಮೋದಿ ತಿಳಿಸಿದರು.

'ಕೆಲ ದೇಶಗಳು ಕಾನೂನನ್ನು ರೂಪಿಸುವಾಗಲೇ ಅದರ ಕಾಲ ಮಿತಿ ನಿರ್ಧರಿಸಲಾಗುತ್ತದೆ. ಆ ನಿಗದಿತ ದಿನಾಂಕ ಬಂದಾಗ, ಅದೇ ಕಾನೂನನ್ನು ಹೊಸ ಸಂದರ್ಭಗಳಲ್ಲಿ ಪರಿಶೀಲಿಸಲಾಗುತ್ತದೆ. ಭಾರತವೂ ಇದೇ ಮನೋಭಾವನೆಯಿಂದ ಮುನ್ನಡೆಯಬೇಕು' ಎಂದು ಮೋದಿ ಸೂಚಿಸಿದರು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹450

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1660 (1660)
ಸೋಯಾ (ರಿಫೈನ್ಡ್)	₹1270 (1290)
ಸೂರ್ಯಕಾಂತಿ (ರಿಫೈನ್ಡ್)	₹1500 (1500)
ಪಾಮೋಲಿನ್	₹930 (940)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1600-1800
ಮಧ್ಯಮ	₹1000-1500
ಸಣ್ಣ	₹200-800

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಸಲಹೆ ನೀಡಿದ ಅಂತರರಾಷ್ಟ್ರೀಯ ಹಣಕಾಸು ನಿಧಿಯ ತಜ್ಞರು

ವಿದೇಶಿ ವಿನಿಮಯ ಮೀಸಲು ರಕ್ಷಿಸಿಕೊಳ್ಳಿ

ವಾಷಿಂಗ್ಟನ್ (ಪಿಟಿಐ): ಭವಿಷ್ಯದಲ್ಲಿ ಎದುರಾಗಬಹುದಾದ ಆರ್ಥಿಕ ಸಮಸ್ಯೆಗಳನ್ನು ಎದುರಿಸಲು ವಿದೇಶಿ ವಿನಿಮಯ ಮೀಸಲು ಸಂಗ್ರಹವನ್ನು ಜೋಪಾನ ಮಾಡಿಕೊಳ್ಳುವಂತೆ ಅಂತರರಾಷ್ಟ್ರೀಯ ಹಣಕಾಸು ನಿಧಿಯು (ಐಎಂಎಫ್) ಎಲ್ಲಾ ದೇಶಗಳಿಗೂ ಸಲಹೆ ನೀಡಿದೆ.

ಅಮೆರಿಕದ ಡಾಲರ್ ಮೌಲ್ಯ ವೃದ್ಧಿ ಆಗುತ್ತಿರುವುದು ಹಾಗೂ ಭಾರತದ ಕರೆನ್ಸಿ ಒಳಗೊಂಡು ಇತರೆ ಪ್ರಮುಖ ಕರೆನ್ಸಿಗಳು ಕುಸಿತ ಕಾಣುತ್ತಿರುವ ಬೆನ್ನಲ್ಲೇ ಐಎಂಎಫ್ ಹೀಗೆ ಹೇಳಿದೆ.

ಪ್ರವರ್ಧಮಾನಕ್ಕೆ ಬರುತ್ತಿರುವ ದೇಶಗಳು ಈ ಹಿಂದಿನ ಬಿಕ್ಕಟ್ಟುಗಳಿಂದ ಪಾಠ ಕಲಿತಿರುವಂತೆ ತೋರುತ್ತಿದೆ. ಹೀಗಾಗಿಯೇ ಈ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಈಚಿನ ವರ್ಷಗಳಲ್ಲಿ ಡಾಲರ್ ಸಂಗ್ರಹವನ್ನು ಹೆಚ್ಚಿಸಿಕೊಳ್ಳುತ್ತಿವೆ. ಆದರೆ ಡಾಲರ್ ಸಂಗ್ರಹವು ಸೀಮಿತವಾಗಿದ್ದು, ಅದನ್ನು ವಿವೇಚನೆಯಿಂದ ಬಳಸುವ ಅಗತ್ಯ ಇದೆ ಎಂದು ಐಎಂಎಫ್‌ನ ಡೆಪ್ಯುಟಿ ವ್ಯವಸ್ಥಾಪಕ ನಿರ್ದೇಶಕಿ ಗೀತಾ ಗೋಪಿನಾಥ್ ಮತ್ತು ಮುಖ್ಯ ಆರ್ಥಿಕ ತಜ್ಞ ಪಿಯರ್ ಒಲಿವರ್ ಗೌರಿಂಚ ಅವರು ಬ್ಲಾಗ್‌ನಲ್ಲಿ ಬರೆದಿದ್ದಾರೆ.

ಅಮೆರಿಕದ ಡಾಲರ್ ಮೌಲ್ಯವು 2000ನೇ ಇಸವಿಯ ಬಳಿಕ ಅತ್ಯಂತ ಗರಿಷ್ಠ ಮಟ್ಟದಲ್ಲಿದೆ. ಈ ವರ್ಷದ ಆರಂಭದಿಂದ ಈವರೆಗೆ ಯೆನ್ ಎದುರು ಶೇ 22ರಷ್ಟು, ಯುರೊ ಎದುರು ಶೇ 13ರಷ್ಟು ಹಾಗೂ ಪ್ರವರ್ಧಮಾನಕ್ಕೆ ಬರುತ್ತಿರುವ ಮಾರುಕಟ್ಟೆಗಳ ಇತರೆ ಕರೆನ್ಸಿಗಳ ಎದುರು ಶೇ 6ರಷ್ಟು ಏರಿಕೆ ಕಂಡಿದೆ.

ಡಾಲರ್ ಮೌಲ್ಯವು ಈ ಪ್ರಮಾಣದಲ್ಲಿ ಏರಿಕೆ ಕಂಡಿರುವುದರಿಂದ ಅಂತರರಾಷ್ಟ್ರೀಯ ವ್ಯಾಪಾರ ಮತ್ತು ಹಣಕಾಸಿನಲ್ಲಿ ಡಾಲರ್ ಪ್ರಾಬಲ್ಯ ಹೆಚ್ಚಾಗಲಿದೆ. ಬಹುತೇಕ ಎಲ್ಲಾ ದೇಶಗಳ ಆರ್ಥಿಕತೆಗಳ ಮೇಲೆಯೂ ಡಾಲರ್ ಮೌಲ್ಯ ವೃದ್ಧಿಯು ಪ್ರತಿಕೂಲ ಪರಿಣಾಮ ಬೀರಲಿದೆ ಎಂದು ಬ್ಲಾಗ್‌ನಲ್ಲಿ ಹೇಳಿದ್ದಾರೆ.



ಹಣದುಬ್ಬರವನ್ನು ತಗ್ಗಿಸಲು ಹಲವು ದೇಶಗಳು ಪ್ರಯತ್ನಿಸುತ್ತಿವೆ. ಡಾಲರ್ ಎದುರು ಆ ದೇಶಗಳ ಕರೆನ್ಸಿಗಳು ದುರ್ಬಲ ಆಗುವುದರಿಂದ ಹಣದುಬ್ಬರ ತಗ್ಗಿಸುವ ಪ್ರಯತ್ನವು ಇನ್ನಷ್ಟು ಕಷ್ಟವಾಗಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಹಾಗೂ ಬೆಳವಣಿಗೆ ಕಾಣಲು ಕಷ್ಟಪಡುತ್ತಿರುವ ದೇಶಗಳ ವಿದೇಶಿ ವಿನಿಮಯ ಮೀಸಲು ಸಂಗ್ರಹವು ಈ ವರ್ಷದ ಏಳು ತಿಂಗಳಿನಲ್ಲಿ ಶೇ 6ಕ್ಕಿಂತಲೂ ಹೆಚ್ಚು ಇಳಿಕೆ ಕಂಡಿದೆ ಎಂದು ಅವರು ತಿಳಿಸಿದ್ದಾರೆ.

ಮೀಸಲು ಸಂಗ್ರಹ ಕುಸಿತ ಕಾಣುವುದನ್ನು ತಡೆಯಲು ಸೂಕ್ತವಾದ ನೀತಿಯ ಬೆಂಬಲದ ಅಗತ್ಯ ಇದೆ ಎಂದೂ ಹೇಳಿದ್ದಾರೆ.

ಜಿಯೊದಿಂದ 'ಬೆಸ್ಟಿವಲ್ ಸೇಲ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಲಯನ್ಸ್ ರಿಟೇಲ್‌ನ ಜಿಯೋಮಾರ್ಟ್ ಮತ್ತು ಸ್ಮಾರ್ಟ್ ಸ್ಟೋರ್‌ಗಳ 'ಬೆಸ್ಟಿವಲ್ ಸೇಲ್' ಇದೇ 24 ರವರೆಗೆ ನಡೆಯಲಿದೆ.

ದೇಶದ ಕೈಮಗ್ಗ ಮತ್ತು ಕುಶಲಕರ್ಮಿಗಳ ಉತ್ಪನ್ನಗಳು ಈ ಸೇಲ್‌ನ ಪ್ರಮುಖ ಆಕರ್ಷಣೆ ಆಗಿವೆ. ಚನ್ನಪಟ್ಟಣದ ಮರದ ಆಟಿಕೆಗಳನ್ನು ಒಳಗೊಂಡು, ಗುಜರಾತ್‌ನ ಸೀರೆಗಳು, ಮೊರಾದಾಬಾದ್‌ನ ವಿಶೇಷ ಪೂಜಾ ಪರಿಕರಗಳು ಹಾಗೂ ಇನ್ನೂ ಅನೇಕ ಉತ್ಪನ್ನಗಳನ್ನು ಖರೀದಿಸಬಹುದು ಎಂದು ಕಂಪನಿಯು ತಿಳಿಸಿದೆ.

ಎಲೆಕ್ಟ್ರಾನಿಕ್ಸ್, ಗೃಹೋಪಯೋಗಿ ವಸ್ತುಗಳು, ಸೌಂದರ್ಯವರ್ಧಕಗಳ ಮೇಲೆ ಬಂಪರ್ ಆಫರ್ ಸಿಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್ ಲಾಭ ಹೆಚ್ಚಳ

ಮುಂಬೈ (ಪಿಟಿಐ/ರಾಯಿಟರ್ಸ್): ಖಾಸಗಿ ವಲಯದ ಎಚ್‌ಡಿಎಫ್‌ಸಿ ಬ್ಯಾಂಕ್ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹11,125 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ನಿವ್ವಳ ಲಾಭ ₹9,096 ಕೋಟಿ ಇತ್ತು. ಇದಕ್ಕೆ ಹೋಲಿಸಿದರೆ ಈ ಬಾರಿಲಾಭವು ಶೇ 22.30ರಷ್ಟು ಹೆಚ್ಚಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಬ್ಯಾಂಕ್‌ನ ಒಟ್ಟು ವರಮಾನವು ₹38,754 ಕೋಟಿಯಿಂದ ₹46,182 ಕೋಟಿಗೆ ಏರಿಕೆ ಆಗಿದೆ. ನಿವ್ವಳ ಬಡ್ಡಿ ವರಮಾನ ಶೇ 18.9ರಷ್ಟು ಏರಿಕೆ ಕಂಡು ₹21,021 ಕೋಟಿಗೆ ತಲುಪಿದೆ.

ವೆಚ್ಚವು ₹22,947 ಕೋಟಿಯಿಂದ ₹28,790 ಕೋಟಿಗೆ ಏರಿಕೆ ಆಗಿದೆ. ರಿಟೇಲ್, ವಾಣಿಜ್ಯ ವಿಭಾಗವನ್ನು ಒಳಗೊಂಡು ಒಟ್ಟಾರೆ ಮುಂಗಡ ನೀಡಿಕೆಯು ಶೇ 23.4ರಷ್ಟು ಬೆಳವಣಿಗೆ ಕಂಡಿದೆ. ಠೇವಣಿ ಸಂಗ್ರಹದಲ್ಲಿ ಶೇ 19ರಷ್ಟು ಬೆಳವಣಿಗೆ ಸಾಧ್ಯವಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ವಸೂಲಾಗದ ಸಾಲದ (ಎನ್‌ಪಿಎ) ಸರಾಸರಿ ಪ್ರಮಾಣವು ಶೇ 1.35 ರಿಂದ ಶೇ 1.23ಕ್ಕೆ ಇಳಿಕೆ ಕಂಡಿದೆ. ಭವಿಷ್ಯದಲ್ಲಿ ಎದುರಾಗಬಹುದಾದ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಸಾಲದ ಮೊತ್ತದ ಪ್ರಮಾಣವು ಶೇ 31.87 ರಿಂದ ಶೇ 32.40ಕ್ಕೆ ಅಲ್ಪ ಏರಿಕೆ ಕಂಡಿದೆ ಎಂದು ಹೇಳಿದೆ.

ಎಚ್‌ಡಿಎಫ್‌ಸಿ ವಿಲೀನ: ಷೇರುದಾರರ ಸಭೆಗೆ ಎನ್‌ಸಿಎಲ್‌ಟಿ ಒಪ್ಪಿಗೆ

ನವದೆಹಲಿ (ಪಿಟಿಐ): ಎಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಎಚ್‌ಡಿಎಫ್‌ಸಿ ಲಿಮಿಟೆಡ್ ವಿಲೀನ ಮಾಡುವ ಸಂಬಂಧ ಷೇರುದಾರರ ಸಭೆ ಕರೆಯಲು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ (ಎನ್‌ಸಿಎಲ್‌ಟಿ) ಒಪ್ಪಿಗೆ ನೀಡಿದೆ.

ವಿಲೀನ ಯೋಜನೆಗೆ ಒಪ್ಪಿಗೆ ಪಡೆಯಲು ನವೆಂಬರ್ 25ರಂದು ಷೇರುದಾರರ ಸಭೆ ನಡೆಸುವಂತೆ ನ್ಯಾಯಮಂಡಳಿಯು ಎಚ್‌ಡಿಎಫ್‌ಸಿ ಬ್ಯಾಂಕ್‌ಗೆ ಆದೇಶ ನೀಡಿದೆ. ಸಭೆ ನಡೆದ ಏಳು ದಿನಗಳ ಒಳಗಾಗಿ ನ್ಯಾಯಮಂಡಳಿಗೆ ವರದಿ ಸಲ್ಲಿಸುವಂತೆಯೂ ಬ್ಯಾಂಕ್‌ನ ಅಧ್ಯಕ್ಷರಿಗೆ ಸೂಚನೆ ನೀಡಿದೆ.

ಎಚ್‌ಡಿಎಫ್‌ಸಿ ಪ್ರಾಪರ್ಟಿ ವೆಂಚರ್ ಲಿಮಿಟೆಡ್ (ಎಚ್‌ಪಿವಿಎಲ್) ಅನ್ನು ಎಚ್‌ಡಿಎಫ್‌ಸಿ ಬ್ಯಾಂಕ್‌ಗೆ ವರ್ಗಾಯಿಸುವ ಸಂಬಂಧ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಒಪ್ಪಿಗೆ ಪಡೆಯಲಾಗಿದೆ ಎಂದು ಎಚ್‌ಡಿಎಫ್‌ಸಿ ಲಿಮಿಟೆಡ್ ತಿಳಿಸಿದೆ.

ವಿಲೀನ ಒಪ್ಪಂದಕ್ಕೆ ಆರ್‌ಬಿಐ, ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಪಿಎಫ್‌ಆರ್‌ಡಿಎ) ಮತ್ತು ಭಾರತೀಯ ಸ್ಪರ್ಧಾ ಆಯೋಗದ (ಸಿಸಿಐ) ಒಪ್ಪಿಗೆಯನ್ನು ಪಡೆಯಲಾಗಿದೆ. ವಿಲೀನದ ಬಳಿಕ ಒಟ್ಟು ಸಂಪತ್ತು ಮೌಲ್ಯವು ₹17.87 ಲಕ್ಷ ಕೋಟಿಗೆ ತಲುಪಲಿದೆ.

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹150
ಆರ್‌ಎಸ್‌ಎಸ್-5	₹140
ಗುಡ್ ಲಾಟ್	₹136

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹355-620
ದ್ವಿತಳಿ (ಬಿ.ವಿ)	₹300-792

ಮುಂಬೈ ಧಾರಣೆ

ಶೇಂಗಾ 15-10-2022

ಜಾವಾ 70/80(ಹೊಸ)	11350-11400
ಜಾವಾ 80/90(ಹೊಸ)	10750-10800
ದಪ್ಪ ಮಧ್ಯಪ್ರದೇಶ(ಹೊಸ)	10300-10400
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1670 (1670)
ಒಂದು ವಾರದ ಡೆಲಿವರಿ	1665 (1665)
ಸೋಯಾ ಕಚ್ಚಾ	1190 (1200)
ಪಾಮ್ ವಾರದ ಡೆಲಿವರಿ	928 (938)
ಸೂರ್ಯಕಾಂತಿ ಎಣ್ಣೆ ಕಚ್ಚಾ	1400 (1400)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 49,950 (50,150)
ಬೆಳ್ಳಿ ಕೆ.ಜಿ 54,800 (56,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕಚ್ಚಾ ತೈಲ: ಆಕಸ್ಮಿಕ ಲಾಭ ತೆರಿಗೆ ಹೆಚ್ಚಳ

ನವದೆಹಲಿ (ಪಿಟಿಐ): ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆಯನ್ನು ಕೇಂದ್ರ ಸರ್ಕಾರ ಹೆಚ್ಚಳ ಮಾಡಿದೆ. ಡೀಸೆಲ್ ಮತ್ತು ವಿಮಾನ ಇಂಧನದ (ಎಟಿಎಫ್) ರಫ್ತು ಮೇಲಿನ ತೆರಿಗೆಯನ್ನು ಸಹ ಹೆಚ್ಚಿಸಲಾಗಿದೆ.

ಸರ್ಕಾರದ ಅಧಿಸೂಚನೆಯ ಪ್ರಕಾರ, ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆಯನ್ನು ಭಾನುವಾರದಿಂದ ಜಾರಿಗೆ ಬರುವಂತೆ ಪ್ರತಿ ಟನ್‌ಗೆ ₹11 ಸಾವಿರಕ್ಕೆ ಹೆಚ್ಚಿಸಲಾಗಿದೆ. ಈ ಮೊದಲು ₹ 8 ಸಾವಿರ ಇತ್ತು.



ಡೀಸೆಲ್ ರಫ್ತು ಮೇಲಿನ ತೆರಿಗೆಯನ್ನು ಪ್ರತಿ ಲೀಟರಿಗೆ ₹ 5 ರಿಂದ ₹12ಕ್ಕೆ ಹಾಗೂ ವಿಮಾನ ಇಂಧನದ (ಎಟಿಎಫ್) ರಫ್ತು ಮೇಲಿನ ತೆರಿಗೆಯನ್ನು ಲೀಟರಿಗೆ ₹3.50ಕ್ಕೆ ಹೆಚ್ಚಿಸಲಾಗಿದೆ. ಈ ಮೊದಲು ಎಟಿಎಫ್ ರಫ್ತು ಮೇಲಿನ ತೆರಿಗೆ ಕೈಬಿಡಲಾಗಿತ್ತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಏರಿಕೆ ಆಗಿರುವುದರಿಂದ ತೆರಿಗೆ ದರದಲ್ಲಿ ಪರಿಷ್ಕರಣೆ ಮಾಡಲಾಗಿದೆ ಎಂದು ತಿಳಿಸಲಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹಳತು	48000-56000
ಚಿತ್ರದುರ್ಗ	
ಆಪಿ	49819-50229
ಬೆಟ್ಟೆ	37649-38099
ಕೆಂಪುಗೋಟು	29510-29969
ರಾಶಿ	49339-49779
ಕಾರ್ಕಳ	
ಹೊಸತು	20000-35000
ಹಳೆತು	40000-48500
ಪುತ್ತೂರು	
ಕೋಕ	11000-26000
ಹೊಸತು	35500-48500
ಸಿದ್ದಾಪುರ	
ಬಿಳಿಗೋಟು	26899-33699
ಚಾಲಿ	37409-41699
ಕೋಕ	24699-33899
ಕೆಂಪುಗೋಟು	30469-30469
ರಾಶಿ	48699-49899
ತಟ್ಟೆಬೆಟ್ಟೆ	40089-49809
ಶಿರಸಿ	
ಬೆಟ್ಟೆ	39699-46399
ಬಿಳಿಗೋಟು	14599-35686
ಚಾಲಿ	33499-43200
ಕೆಂಪುಗೋಟು	14199-34131
ರಾಶಿ	46119-49308

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ ಮುದ್ರೆಮನೆ	ಹಾಸನ ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15750	15700	16100	202.15 ಸೆಂಟ್ಸ್
ಎಸಿ	9100	8400	8850	
ಆರ್‌ಪಿ	9800	9800	9850	ಲಂಡನ್
ಆರ್‌ಸಿ	4800	4500	4750	2099 ಡಾಲರ್ಸ್

ಅಮೂಲ್ ಹಾಲಿನ ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ಅಮೂಲ್ ಬ್ರ್ಯಾಂಡ್ ಅಡಿಯಲ್ಲಿ ಗೋಲ್ಡ್ ಮತ್ತು ಬಫೆಲೊ ಹೆಸರಿನಲ್ಲಿ ಮಾರಾಟ ಮಾಡುವ ಹಾಲಿನ ದರವನ್ನು ಲೀಟರಿಗೆ ತಲಾ ₹ 2ರಷ್ಟು ಹೆಚ್ಚಿಸಲಾಗಿದೆ.

ಈ ದರ ಏರಿಕೆಯು ಗುಜರಾತ್ ಬಿಟ್ಟು ಉಳಿದೆಲ್ಲಾ ಮಾರುಕಟ್ಟೆಗಳಿಗೆ ಅನ್ವಯಿಸಲಿದೆ ಎಂದು ಗುಜರಾತ್ ಸಹಕಾರ ಹಾಲು ಮಾರಾಟ ಮಹಾಮಂಡಳ (ಜಿಸಿಎಂಎಂಎಫ್) ತಿಳಿಸಿದೆ.

ಮದರ್ ಡೇರಿ ಕಂಪನಿಯು ಭಾನುವಾರದಿಂದ ದೆಹಲಿ–ಎನ್‌ಸಿಆರ್ ಮತ್ತು ಉತ್ತರ ಭಾರತದ ಕೆಲವು ಮಾರುಕಟ್ಟೆಗಳಲ್ಲಿ ಕೆನೆಭರಿತ ಹಾಲು ಮತ್ತು ಹಸುವಿನ ಹಾಲಿನ ಬೆಲೆಯನ್ನು ₹2 ರಷ್ಟು ಹೆಚ್ಚಿಸಿದೆ.



ಏಷ್ಯಾ ಕಪ್‌ನೊಂದಿಗೆ ಭಾರತ ಮಹಿಳಾ ಕ್ರಿಕೆಟ್ ತಂಡದ ಸಂಭ್ರಮ–ಎಎಫ್‌ಪಿ ಚಿತ್ರ

ರೇಣುಕಾ ಸಿಂಗ್, ಸ್ಮೃತಿ ಮಂದಾನ ಮಿಂಚು: ಶ್ರೀಲಂಕಾ ಎದುರು ಭಾರತಕ್ಕೆ ಸುಲಭ ಜಯ

ಕೌರ್ ಪಡೆಗೆ ಏಷ್ಯಾ ಕಿರೀಟ

ಸಿಲೆಟ್, ಬಾಂಗ್ಲಾದೇಶ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡವು ಏಳನೇ ಸಲ ಏಷ್ಯಾ ಕಪ್ ಜಯಿಸಿತು.

ಸಿಲೆಟ್ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಫೈನಲ್ ಪಂದ್ಯದಲ್ಲಿ ಮಧ್ಯಮವೇಗಿ ರೇಣುಕಾ ಸಿಂಗ್ (5ಕ್ಕೆ3) ಅವರ ಅಮೋಘ ಬೌಲಿಂಗ್‌ನಿಂದಾಗಿ ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ, 8 ವಿಕೆಟ್‌ಗಳಿಂದ ಶ್ರೀಲಂಕಾ ವಿರುದ್ಧ ಜಯಭೇರಿ ಬಾರಿಸಿತು.

2004ರಿಂದ ಇಲ್ಲಿಯವರೆಗೆ ಈ ಟೂರ್ನಿಯನ್ನು ಎಂಟು ಸಲ ಆಯೋಜಿಸಲಾಗಿದೆ. ಅದರಲ್ಲಿ ನಾಲ್ಕು ಬಾರಿ ಏಕದಿನ ಹಾಗೂ ಇನ್ನುಳಿದದ್ದು ಟಿ20 ಮಾದರಿಯ ಟೂರ್ನಿಗಳಾಗಿವೆ. ಏಕದಿನದಲ್ಲಿ ಎಲ್ಲ ವರ್ಷವೂ ಪ್ರಶಸ್ತಿ ಭಾರತದ ಪಾಲಾಗಿದೆ. ಟಿ20 ಮಾದರಿಯಲ್ಲಿ ಹೋದ ಸಲ ಭಾರತ ರನ್ನರ್ಸ್ ಅಪ್ ಹಾಗೂ ಬಾಂಗ್ಲಾದೇಶ ಪ್ರಶಸ್ತಿ ವಿಜೇತ ತಂಡವಾಗಿತ್ತು.

ಈ ಟೂರ್ನಿಯ ಸೆಮಿಫೈನಲ್‌ನಲ್ಲಿ ಪಾಕಿಸ್ತಾನ ವಿರುದ್ಧ ರೋಚಕ ಜಯ ಸಾಧಿಸಿದ್ದ ಶ್ರೀಲಂಕಾದ ವನಿತೆಯರು ಚೆಂದದ ನೃತ್ಯ ಮಾಡಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಬಹಳಷ್ಟು ಮೆಚ್ಚುಗೆಗೆ ಪಾತ್ರವಾಗಿತ್ತು.

ಆದರೆ ಅಂತಹದೇ ಸಂಭ್ರಮವನ್ನು ಫೈನಲ್ ನಂತರವೂ ಆಚರಿಸುವ ಲಂಕಾ ತಂಡದ ಆಸೆ ಈಡೇರಲಿಲ್ಲ.

ಮುಖ್ಯಾಂಶಗಳು

- ಏಳನೇ ಸಲ ಪ್ರಶಸ್ತಿ ಗೆದ್ದ ಭಾರತ ತಂಡ
- ರೇಣುಕಾ ಸಿಂಗ್‌ಗೆ 3 ವಿಕೆಟ್
- ಕನ್ನಡತಿ ರಾಜೇಶ್ವರಿಗೆ ಎರಡು ವಿಕೆಟ್

ಏಷ್ಯಾಕಪ್ ವಿಜೇತರು (ಮಹಿಳೆಯರು)

ವರ್ಷ	ಮಾದರಿ	ವಿಜೇತ	ರನ್ನರ್ಸ್ ಅಪ್
2004	ಏಕದಿನ	ಭಾರತ	ಶ್ರೀಲಂಕಾ
2005	ಏಕದಿನ	ಭಾರತ	ಶ್ರೀಲಂಕಾ
2006	ಏಕದಿನ	ಭಾರತ	ಶ್ರೀಲಂಕಾ
2008	ಏಕದಿನ	ಭಾರತ	ಶ್ರೀಲಂಕಾ
2012	ಟಿ20	ಭಾರತ	ಪಾಕಿಸ್ತಾನ
2016	ಟಿ20	ಭಾರತ	ಪಾಕಿಸ್ತಾನ
2018	ಟಿ20	ಬಾಂಗ್ಲಾ	ಭಾರತ
2022	ಟಿ20	ಭಾರತ	ಶ್ರೀಲಂಕಾ

ಟಾಸ್ ಗೆದ್ದ ಲಂಕಾ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ರೇಣುಕಾ ಸಿಂಗ್ ಹಾಗೂ ಉಳಿದ ಬೌಲರ್‌ಗಳ ಶಿಸ್ತುಬದ್ಧ ದಾಳಿಯ ಮುಂದೆ ಚಾಮರಿ ಅಟಪಟ್ಟು ಬಳಗವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 65 ರನ್ ಗಳಿಸಿತು. ಅದಕ್ಕುತ್ತರವಾಗಿ ಭಾರತ ತಂಡವು 8.3 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 71 ರನ್ ಗಳಿಸಿತು. ಆರಂಭಿಕ ಬ್ಯಾಟರ್ ಸ್ಮೃತಿ ಮಂದಾನ (ಔಟಾಗದೆ 51; 25ಎ, 4X6, 6X3) ಅರ್ಧಶತಕ ಗಳಿಸಿದರು.

'ಫೈನಲ್ ಜಯದ ಶ್ರೇಯವು ಬೌಲರ್‌ಗಳು ಹಾಗೂ ಫೀಲ್ಡರ್‌ಗಳಿಗೆ ಸಲ್ಲಬೇಕು. ಶ್ರೀಲಂಕಾ ತಂಡವನ್ನು ಅಲ್ಪಮೊತ್ತಕ್ಕೆ ಕಟ್ಟಿಹಾಕಿದ್ದರಿಂದ ಬ್ಯಾಟರ್‌ಗಳಿಗೆ ಗುರಿ ಸಾಧನೆ ಸುಲಭವಾಯಿತು. ಈ ಟ್ರೋಫಿ ಜಯದಿಂದಾಗಿ ತಂಡದ ಆತ್ಮಬಲ ವೃದ್ಧಿಸಿದೆ' ಎಂದು ಹರ್ಮನ್‌ಪ್ರೀತ್ ಕೌರ್ ಪಂದ್ಯದ ನಂತರ ಮಾಧ್ಯಮದವರಿಗೆ ಹೇಳಿದರು.

ಟೂರ್ನಿಯಲ್ಲಿ ಹೆಚ್ಚು ರನ್ ಗಳಿಸಿದವರು

ಬ್ಯಾಟರ್	ಪಂದ್ಯ	ರನ್	ದೇಶ
ಜೆಮಿಮಾ ರಾಡ್ರಿಗಸ್	8	217	ಭಾರತ
ಹರ್ಷಿತಾ ಮಾದವಿ	8	202	ಶ್ರೀಲಂಕಾ
ಶಫಾಲಿ ವರ್ಮಾ	6	166	ಭಾರತ
ಸಿದ್ರಾ ಅಮೀನ್	7	158	ಪಾಕಿಸ್ತಾನ

ಹೆಚ್ಚು ವಿಕೆಟ್ ಗಳಿಸಿದವರು

ಬೌಲರ್	ಪಂದ್ಯ	ವಿಕೆಟ್	ದೇಶ
ದೀಪ್ತಿ ಶರ್ಮಾ	8	13	ಭಾರತ
ಇನೊಕಾ ರಣವೀರಾ	8	13	ಶ್ರೀಲಂಕಾ
ಒಮೈಮಾ ಸೊಹೈಲ್	7	10	ಪಾಕಿಸ್ತಾನ
ರುಮಾನಾ ಅಹಮದ್	5	10	ಬಾಂಗ್ಲಾದೇಶ

ಸ್ಕೋರ್ ಕಾರ್ಡ್

ಶ್ರೀಲಂಕಾ 9ಕ್ಕೆ 65 (20 ಓವರ್)
ಚಾಮರಿ ರನೌಟ್ (ರೇಣುಕಾ/ರಿಚಾ) 6 (12ಎ, 4X1), ಅನುಷ್ಕಾ ರನೌಟ್ (ಪೂಜಾ/ರಿಚಾ) 2 (4ಎ), ಹರ್ಷಿತಾ ಸಿ ರಿಚಾ ಬಿ ರೇಣುಕಾ 1 (5ಎ), ನೀಲಾಕ್ಷಿ ಬಿ ರಾಜೇಶ್ವರಿ 6 (8 ಎ, 4X1), ಹಸಿಣಿ ಸಿ ಸ್ಮೃತಿ ಬಿ ರೇಣುಕಾ 0 (1ಎ), ಕವೀಶಾ ಬಿ ರೇಣುಕಾ 1 (6ಎ), ಒಶಾದಿ ಬಿ ರಾಜೇಶ್ವರಿ 13 (20ಎ, 4X1), ಮಾಲ್ಶಾ ಸಿ ಮತ್ತು ಬಿ ಸ್ನೇಹಾ 0 (5ಎ), ಸುಗಂಧಿಕಾ ಬಿ ಸ್ನೇಹಾ 6 (24ಎ), ಇನೊಕಾ ಔಟಾಗದೆ 18 (22ಎ, 4X2), ಅಚಿನಿ ಔಟಾಗದೆ 6 (13ಎ)
ಇತರೆ (ವೈಡ್ 6) 6
ವಿಕೆಟ್ ಪತನ: 1-8 (ಚಾಮರಿ ಅಟಪಟ್ಟು, 2.4), 2-9 (ಹರ್ಷಿತಾ ಸಮರವಿಕ್ರಮ, 3.3), 3-9 (ಅನುಷ್ಕಾ ಸಂಜೀವನಿ, 3.4), 4-9 (ಹಸಿಣಿ ಪೆರೇರಾ, 3.5), 5-16 (ಕವೀಶಾ ದಿಲಹರಿ, 5.2), 6-18 (ನೀಲಾಕ್ಷಿ ಡಿಸಿಲ್ವಾ, 6.6), 7-25 (ಮಾಲ್ಶಾ ಶೆಹಾನಿ, 8.3), 8-32 (ಒಶಾದಿ ರಣಸಿಂಗೆ, 11.5), 9-43 (ಸುಗಂಧಿಕಾ ಕುಮಾರಿ, 15.6)
ಬೌಲಿಂಗ್: ರಿದೀಪ್ತಿ ಶರ್ಮಾ 4–0–7–0, ರೇಣುಕಾ ಸಿಂಗ್ 3–1–5–3, ರಾಜೇಶ್ವರಿ ಗಾಯಕವಾಡ 4–0–16–2, ಸ್ನೇಹಾ ರಾಣಾ 4–0–13–2, ದಯಾಳನ್ ಹೇಮಲತಾ 3–0–8–0, ಶಫಾಲಿ ವರ್ಮಾ 2–0–16–0

ಭಾರತ 2ಕ್ಕೆ 71 (8.3 ಓವರ್)
ಶಫಾಲಿ ಸಿ ಅನುಷ್ಕಾ ಬಿ ಇನೊಕಾ 5 (8ಎ), ಸ್ಮೃತಿ ಔಟಾಗದೆ 51 (25ಎ, 4X6, 6X3), ಜೆಮಿಮಾ ಬಿ ಕವೀಶಾ 2 (4ಎ), ಹರ್ಮನ್‌ಪ್ರೀತ್ ಕೌರ್ ಔಟಾಗದೆ 11 (14ಎ, 4X1)
ಇತರೆ (ವೈಡ್ 2) 2
ವಿಕೆಟ್ ಪತನ: 1-32 (ಶಫಾಲಿ, 3.4), 2-35 (ಜೆಮಿಮಾ, 4.3)
ಬೌಲಿಂಗ್: ಒಶಾದಿ ರಣಸಿಂಗೆ 2.3–0–30–0, ಸುಗಂಧಿಕಾ ಕುಮಾರಿ 1–0–7–0, ಇನೊಕಾ ರಣವೀರ 3–0–17–1, ಕವೀಶಾ ದಿಲಹರಿ 2–0–17–1

ಫಲಿತಾಂಶ: ಭಾರತ ತಂಡಕ್ಕೆ ಎಂಟು ವಿಕೆಟ್‌ಗಳ ಜಯ
ಪಂದ್ಯಶ್ರೇಷ್ಠ: ರೇಣುಕಾ ಸಿಂಗ್
ಸರಣಿ ಶ್ರೇಷ್ಠ: ದೀಪ್ತಿ ಶರ್ಮಾ

ಪ್ರೊ ಕಬಡ್ಡಿ; ಮಿಂಚಿದ ರಾಹುಲ್, ನವೀನಕುಮಾರ್

ಜೈಪುರ, ಡೆಲ್ಲಿ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಹುಲ್ ಚೌಧರಿ ಹಾಗೂ ಅರ್ಜುನ್ ದೇಶ್ವಾಲ್ ಅವರ ಅಮೋಘ ಆಟದ ಬಲದಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವು ಪ್ರೊ ಕಬಡ್ಡಿ ಟೂರ್ನಿಯ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಪ್ಯಾಂಥರ್ಸ್ ತಂಡವು 25–18ರಿಂದ ಗುಜರಾತ್ ಜೈಂಟ್ಸ್ ವಿರುದ್ಧ ಜಯಿಸಿತು. ಆರಂಭದಿಂದಲೂ ಜೈಪುರ ತಂಡದ ಆಟಗಾರರು ಮೇಲುಗೈ ಸಾಧಿಸಿದರು. ಪ್ರಥಮಾರ್ಧಕ್ಕೆ ಜೈಪುರ ತಂಡವು 12–9ರಿಂದ ಮುನ್ನಡೆ ಗಳಿಸಿತು. ನಂತರದ ಅವಧಿಯಲ್ಲಿಯೂ (13–9) ಮುನ್ನಡೆ ಉಳಿಸಿಕೊಂಡಿತು.

ಪಿಂಕ್ ಪ್ಯಾಂಥರ್ಸ್ ತಂಡದ ರೇಡರ್ ರಾಹುಲ್ ಐದು ಅಂಕ ಗಳಿಸಿದರು. ಅಂಕುಶ್ ಮೂರು ಹಾಗೂ ಅರ್ಜುನ್ ದೇಶ್ವಾಲ್ ನಾಲ್ಕು ಅಂಕಗಳನ್ನು ಗಳಿಸಿ ತಂಡಕ್ಕೆ ಬಲ ತುಂಬಿದರು.

ಚೆನ್ನಾಗಿ ಆಡುತ್ತಿದ್ದ ಅಂಕುಶ್ ಒರಟು ಆಟವಾಡಿ ಹಸಿರು ಕಾರ್ಡ್ ದರ್ಶನ ಮಾಡಿದರು. ಗುಜರಾತ್ ತಂಡದ ಆಲ್‌ರೌಂಡರ್ ಶಂಕರ್ ಅವರಿಗೂ ರೆಫರಿ ಹಸಿರು ಕಾರ್ಡ್ ತೋರಿಸಿದರು. ತಂಡದ ಬದಲೀ ಆಟಗಾರ ಪ್ರತೀಕ್ ದಯಾ ಆರು ಅಂಕ ಗಳಿಸಿದರು.

ದಬಂಗ್ ಜಯಭೇರಿ: ಒಂದು ಡಜನ್ ಅಂಕ ಗಳಿಸಿದ ನಾಯಕ ನವೀನಕುಮಾರ್ ಮತ್ತು ಮಂಜೀತ್ ಅವರ ಮಿಂಚಿನ ದಾಳಿಯ ಆಟದ ಮೂಲಕ ದಬಂಗ್ ಡೆಲ್ಲಿ ತಂಡವು 46–26ರಿಂದ ತೆಲುಗು ಟೈಟನ್ಸ್ ವಿರುದ್ಧ ಜಯಿಸಿತು. ರವಿಕುಮಾರ್ ರಕ್ಷಣೆಯಲ್ಲಿ ನಾಲ್ಕು ಅಂಕಗಳ ಕಾಣಿಕೆ ನೀಡಿದರು.

ಟೈಟನ್ಸ್ ತಂಡದ ಸಿದ್ಧಾರ್ಥ್ ದೇಸಾಯಿ (6) ಹಾಗೂ ವಿನಯ್ (10) ಅಮೋಘ ದಾಳಿ ನಡೆಸಿದರು. ಆದರೂ ಗೆಲುವು ಸಾಧ್ಯವಾಗಲಿಲ್ಲ.

ದಿನದ ಮೂರನೇ ಪಂದ್ಯದಲ್ಲಿ ಬೆಂಗಾಲ್ ವಾರಿಯರ್ಸ್ 54–26ರಿಂದ ಪಾಟ್ನಾ ಪೈರೇಟ್ಸ್ ಎದುರು ಗೆದ್ದಿತು.

ಇಂದಿನ ಪಂದ್ಯಗಳು
ಪುಣೇರಿ ಪಲ್ಟನ್–ಯು ಮುಂಬಾ
(ರಾತ್ರಿ 7.30)
ಯು.ಪಿ ಯೋಧಾ–ಬೆಂಗಳೂರು ಬುಲ್ಸ್
(ರಾತ್ರಿ 8.30)
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್


ಜೈಪುರ ಪಿಂಕ್ ಪ್ಯಾಂಥರ್ಸ್ ಹಾಗೂ ಗುಜರಾತ್ ಟೈಟನ್ಸ್ ಹಣಾಹಣಿ

ಪಾಯಿಂಟ್ಸ್ ಪಟ್ಟಿ (ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಡೆಲ್ಲಿ	4	4	0	0	20
ಜೈಪುರ	4	3	1	0	16
ಬೆಂಗಾಲ್	4	3	1	0	15
ಹರಿಯಾಣ	3	2	1	0	10
ಮುಂಬಾ	3	2	1	0	10
ಬೆಂಗಳೂರು	3	2	1	0	10

ಅಥ್ಲೆಟಿಕ್ಸ್: ಸವಿತಾ, ಅರ್ಜುನ್‌ಗೆ ಬೆಳ್ಳಿ

ನವದೆಹಲಿ (ಪಿಟಿಐ): ಭಾರತದ ಸವಿತಾ ಟೊಪ್ಪೊ ಮತ್ತು ಅರ್ಜುನ್,ಕುವೈತ್ ಸಿಟಿಯಲ್ಲಿ ನಡೆಯುತ್ತಿರುವ ಏಷ್ಯನ್ ಯೂತ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಕ್ರಮವಾಗಿ 100 ಮೀ,ಹರ್ಡಲ್ಸ್ ಮತ್ತು ಜಾವೆಲಿನ್ ಥ್ರೊ ಸ್ಪರ್ಧೆಗಳಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದಾರೆ.

ಬ್ಯಾಸ್ಕೆಟ್‌ಬಾಲ್ ಕೋಚ್ ಸಂಜಯ್ ನಿಧನ



ಬೆಂಗಳೂರು: ಕರ್ನಾಟಕ ಸಬ್ ಜೂನಿಯರ್ ತಂಡಕ್ಕೆ ತರಬೇತಿ ನೀಡಿದ್ದ ಡಿವೈಇಎಸ್ ಬ್ಯಾಸ್ಕೆಟ್ ಬಾಲ್ ಕೋಚ್ ಸಂಜಯ್ ಆಕಾಶಿ (46) ನಿಧನರಾದರು.ಗದುಗಿನ ಸಂಜಯ್ ಅವರಿಗೆ ಹೃದಯಾಘಾತವಾಗಿತ್ತು. ಅವರಿಗೆ ಪತ್ನಿ ಮತ್ತು ಮೂವರು ಪುತ್ರಿಯರಿದ್ದಾರೆ.

ಬಂಗಾಳ ಕ್ರಿಕೆಟ್ ಸಂಸ್ಥೆಗೆ ಮತ್ತೆ ಸೌರವ್ ಗಂಗೂಲಿ ಅಧ್ಯಕ್ಷ!

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ನಿರ್ಗಮಿತ ಅಧ್ಯಕ್ಷ ಸೌರವ್ ಗಂಗೂಲಿ ಅವರು ಮತ್ತೆ ಬಂಗಾಳ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲಿದ್ದಾರೆ.

ಅವರು 2015 ರಿಂದ 2019ರವರೆಗೆ ಬಂಗಾಳ ಸಂಸ್ಥೆ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಅದಾದ ನಂತರ ಬಿಸಿಸಿಐ ಅಧ್ಯಕ್ಷರಾಗಿದ್ದರು. ಇದೇ 18ರಂದು ನಡೆಯಲಿರುವ ಮಂಡಳಿಯ ಸರ್ವಸದಸ್ಯರ ಸಭೆಯಲ್ಲಿ ತಮ್ಮ ಅಧಿಕಾರವನ್ನು ರೋಜರ್ ಬಿನ್ನಿ ಅವರಿಗೆ ಹಸ್ತಾಂತರಿಸಲಿದ್ದಾರೆ.

'ಬಂಗಾಳ ಸಂಸ್ಥೆಯ ಚುನಾವಣೆಯಲ್ಲಿ ನಾನು ಸ್ಪರ್ಧಿಸಲಿದ್ದೇನೆ. ಅ.22ರಂದು ನಾಮಪತ್ರ ಸಲ್ಲಿಸಲಿದ್ದೇನೆ. ಈ ಮೊದಲು ನಾನು ಬಂಗಾಳಕ್ಕೆ ಐದು ವರ್ಷ ಪದಾಧಿಕಾರಿಯಾಗಿದ್ದೆ. ಲೋಧಾ ನಿಯಮದ ಪ್ರಕಾರ ಇನ್ನೂ ನಾಲ್ಕು ವರ್ಷಗಳವರೆಗೆ ಅಧಿಕಾರ ಪಡೆಯಲು ಅವಕಾಶವಿದೆ' ಎಂದು ಗಂಗೂಲಿ ಹೇಳಿದ್ದಾರೆ.


ಸೌರವ್ ಗಂಗೂಲಿ

ಪ್ರಸ್ತುತ ಅಧ್ಯಕ್ಷರಾಗಿರುವ ಅವಿಷೇಕ್ ದಾಲ್ಮಿಯಾ ಅವರ ಸ್ಥಾನಕ್ಕೆ ಗಂಗೂಲಿ ಅವರ ಅಣ್ಣ ಸ್ನೇಹಾಶಿಶ್ ಸ್ಪರ್ಧಿಸುವುದಾಗಿ ಇಲ್ಲಿಯವರೆಗೂ ಹೇಳಲಾಗಿತ್ತು. ಇದೀಗ ಸೌರವ್ ಅಧ್ಯಕ್ಷರಾಗಲು ಚಿತ್ತ ಹರಿಸಿರುವುದರಿಂದ ಲೆಕ್ಕಾಚಾರಗಳು ಬದಲಾಗಲಿವೆ.

'ಇದೇ 20ರಂದು ಸಭೆ ಸೇರಲಿದ್ದೇವೆ. ಆಗ ಎಲ್ಲ ಸ್ಥಾನಗಳನ್ನು ನಿರ್ಧರಿಸುತ್ತೇವೆ' ಎಂದೂ ಗಂಗೂಲಿ ಹೇಳಿದ್ದಾರೆ.

ಶಮಿ ಶೀಘ್ರ ಗುಣಮುಖ: ರೋಹಿತ್

ಆಸ್ಟ್ರೇಲಿಯಾದಲ್ಲಿ ಇಂದಿನಿಂದ ಟಿ20 ವಿಶ್ವಕಪ್ ಕ್ರಿಕೆಟ್ ಅರ್ಹತಾ ಪಂದ್ಯಗಳು

ಮೆಲ್ಬರ್ನ್ (ಪಿಟಿಐ): ವೇಗಿ ಮೊಹಮ್ಮದ್ ಶಮಿ ಆರೋಗ್ಯವು ವೇಗವಾಗಿ ಚೇತರಿಕೆ ಆಗುತ್ತಿರುವುದರಿಂದ ಹೊಸ ಭರವಸೆ ಮೂಡಿದೆ ಎಂದು ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಹೇಳಿದ್ದಾರೆ.

ಟಿ20 ವಿಶ್ವಕಪ್ ಟೂರ್ನಿಯ ಅರ್ಹತಾ ಸುತ್ತಿನ ಪಂದ್ಯಗಳು ಭಾನುವಾರದಿಂದ ಆರಂಭವಾಗಲಿವೆ. ಅದಕ್ಕೂ ಮುನ್ನ ಶನಿವಾರ ನಡೆದ ಎಲ್ಲ ತಂಡಗಳ ನಾಯಕರ ಸಂವಾದದಲ್ಲಿ ರೋಹಿತ್ ಮಾತನಾಡಿದರು.

'ಎರಡು–ಮೂರು ವಾರಗಳ ಹಿಂದೆ ಶಮಿ ಅವರಿಗೆ ಕೋವಿಡ್ ಆಗಿತ್ತು. ಅದರ ನಂತರ ಅವರು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ)ಯಲ್ಲಿ ಆರೈಕೆ ಪಡೆದುಕೊಂಡರು. ಕಳೆದ ಹತ್ತು ದಿನಗಳಿಂದ ಅವರು ಬ್ರಿಸ್ಬೇನ್‌ನಲ್ಲಿ ಕಠಿಣ ಅಭ್ಯಾಸ ನಡೆಸಿದ್ದಾರೆ. ನಾಳೆ (ಭಾನುವಾರ) ಅವರು ನಮ್ಮೊಂದಿಗೆ ಅಭ್ಯಾಸಕ್ಕೆ ಹಾಜರಾಗಲಿದ್ದಾರೆ' ಎಂದು ಹೇಳಿದರು.

'ಅವರ ಉಸ್ತುವಾರಿ ನೋಡಿಕೊಳ್ಳುತ್ತಿರುವ ವೈದ್ಯರು, ಅಧಿಕಾರಿಗಳಿಂದ ಆಶಾದಾಯಕ ಸಂಗತಿಗಳು ಕೇಳಿಬರುತ್ತಿವೆ. ತಮ್ಮ ಸಂಪೂರ್ಣ ಸಾಮರ್ಥ್ಯದೊಂದಿಗೆ ಅವರು ಪ್ರತಿದಿನ ಮೂರ್ನಾಲ್ಕು ಅವಧಿಗಳಲ್ಲಿ ಬೌಲಿಂಗ್ ಅಭ್ಯಾಸ ಮಾಡುತ್ತಿದ್ದಾರೆ. ಕಳೆದ 12 ತಿಂಗಳುಗಳಿಂದ ತಂಡದ ಆಟಗಾರರ ಗಾಯಗಳ ನಿರ್ವಹಣೆಗೆ ಹಲವು ಬಗೆಯ ಕ್ರಮಗಳನ್ನು ಕೈಗೊಳ್ಳಲಾಗಿದೆ' ಎಂದು ವಿವರಿಸಿದರು.

'ಜಸ್‌ಪ್ರಿತ್ ಬೂಮ್ರಾ ಅವರ ಬೆನ್ನಿನ ಗಾಯದ ಕುರಿತು ತಜ್ಞರೊಂದಿಗೆ ಚರ್ಚಿಸಿದ್ದೇವೆ. ಅವರು ಗುಣಮುಖರಾಗಲು ಸಮಯ ಬೇಕಿದೆ. ವಿಶ್ವಕಪ್ ಟೂರ್ನಿ ಮುಖ್ಯ ನಿಜ. 27 ವರ್ಷದ ಬೂಮ್ರಾ ಅವರ ವೃತ್ತಿಜೀವನವೂ ಮುಖ್ಯ. ಭವಿಷ್ಯದಲ್ಲಿಯೂ ಅವರು ಆಡಬೇಕು' ಎಂದರು.

'ಟೂರ್ನಿಯಲ್ಲಿ ನಾವು ಮೊದಲ ಪಂದ್ಯ (ಅ.23ರಂದು ಪಾಕಿಸ್ತಾನ ವಿರುದ್ಧ) ಆಡುವ ಮುನ್ನ ಪೂರ್ಣಪ್ರಮಾಣದಲ್ಲಿ ಸಿದ್ಧರಾಗುತ್ತೇವೆ. ಕೊನೆಕ್ಷಣದಲ್ಲಿ ಯಾವುದೇ ನಿರ್ಧಾರ ತೆಗೆದುಕೊಳ್ಳುವುದಿಲ್ಲ' ಎಂದು ರೋಹಿತ್ ಸ್ಪಷ್ಟಪಡಿಸಿದರು.

ಈ ಸಂದರ್ಭದಲ್ಲಿ ಹಾಜರಿದ್ದ ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ, 'ಭಾರತದ ಆಟಗಾರರು ನಾವು ಪರಸ್ಪರ ಭೇಟಿಯಾದಾಗ ಕ್ರಿಕೆಟ್ ವಿಷಯ ಮಾತೇ ಆಡುವುದಿಲ್ಲ. ರೋಹಿತ್ ಭಾಯ್ ಅವರು ನನಗಿಂತ ಹಿರಿಯರು. ಅವರ ಆಟವನ್ನು ನೋಡಿ ಹಲವು ವಿಷಯಗಳನ್ನು ಕಲಿಯುತ್ತಿದ್ದೇನೆ' ಎಂದರು.

ಈ ವೇಳೆ ಆತಿಥೇಯ ಆಸ್ಟ್ರೇಲಿಯಾ ತಂಡದ ನಾಯಕ ಆ್ಯರನ್ ಫಿಂಚ್, ನ್ಯೂಜಿಲೆಂಡ್ ನಾಯಕ ಕೇನ್ ವಿಲಿಯಮ್ಸನ್ ಮತ್ತಿತರರು ಹಾಜರಿದ್ದರು.



ಮೆಲ್ಬರ್ನ್‌ನಲ್ಲಿ ಶನಿವಾರ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ತಂಡಗಳ ನಾಯಕರ ಸಂವಾದದಲ್ಲಿ ಆಸ್ಟ್ರೇಲಿಯಾ ತಂಡದ ನಾಯಕ ಆ್ಯರನ್ ಫಿಂಚ್ ಸೆಲ್ಫಿ ಕ್ಲಿಕ್ಕಿಸಿಕೊಂಡರು. ಭಾರತ ತಂಡದ ನಾಯಕ ರೋಹಿತ್ ಶರ್ಮಾ ಇದ್ದಾರೆ –ಪಿಟಿಐ ಚಿತ್ರ

ಶ್ರೀಲಂಕಾಗೆ ಜಯದ ವಿಶ್ವಾಸ

ಭಾನುವಾರ ನಡೆಯಲಿರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಅರ್ಹತಾ ಸುತ್ತಿನ ಎ ಗುಂಪಿನ ಮೊದಲ ಪಂದ್ಯದಲ್ಲಿ ಶ್ರೀಲಂಕಾ ಹಾಗೂ ನಮಿಬಿಯಾ ತಂಡಗಳು ಮುಖಾಮುಖಿಯಾಗಲಿವೆ.

ಲಂಕಾ ತಂಡದಲ್ಲಿ ಅನುಭವಿ ಆಟಗಾರರು ಇರುವುದರಿಂದ ಹೊಸ ತಂಡವಾದ ನಮಿಬಿಯಾ ವಿರುದ್ಧ ಸುಲಭ ಜಯ ಸಾಧಿಸುವ ನಿರೀಕ್ಷೆಯಲ್ಲಿದೆ.

ಇದೇ ಗುಂಪಿನ ಇನ್ನೊಂದು ಪಂದ್ಯದಲ್ಲಿ ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ನೆದರ್ಲೆಂಡ್ಸ್ ಹಣಾಹಣಿ ನಡೆಸಲಿವೆ.

ಸಮಯ: ಮೊದಲ ಪಂದ್ಯ ಬೆಳಿಗ್ಗೆ 9.30ಕ್ಕೆ, ಎರಡನೇಯದ್ದು ಮಧ್ಯಾಹ್ನ 1.30. (ಭಾರತೀಯ ಕಾಲಮಾನ)
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅಭಿಪ್ರಾಯ

'ಅಣ್ವಸ್ತ್ರವುಳ್ಳ ಪಾಕ್ ಅಪಾಯಕಾರಿ'

ವಾಷಿಂಗ್ಟನ್ (ಪಿಟಿಐ): 'ಅನ್ಯದೇಶಗಳ ಜೊತೆ ಹೊಂದಾಣಿಕೆಗೆ ಒತ್ತು ನೀಡದ, ಅಣ್ವಸ್ತ್ರದ ಬಲವನ್ನು ಹೊಂದಿರುವ ಪಾಕಿಸ್ತಾನವು ವಿಶ್ವದ ಅತ್ಯಂತ ಅಪಾಯಕಾರಿ ರಾಷ್ಟ್ರಗಳಲ್ಲಿ ಒಂದಾಗಿದೆ' ಎಂದು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ.

ಡೆಮಾಕ್ರಟಿಕ್ ಪಕ್ಷದ ಪ್ರಚಾರ ಸಮಿತಿಯನ್ನು ಉದ್ದೇಶಿಸಿ ಗುರುವಾರ ಮಾತನಾಡುತ್ತಾ ಈ ಅಭಿಪ್ರಾಯ ವ್ಯಕ್ತಪಡಿಸಿದರು. ಜಾಗತಿಕವಾಗಿ ಬದಲಾಗುತ್ತಿರುವ ಭೌಗೋಳಿಕ ರಾಜಕೀಯ ಸ್ಥಿತಿ ಹಿನ್ನೆಲೆಯಲ್ಲಿ ಈ ಮಾತು ಗಮನಸೆಳೆದಿದೆ.

'ಜಗತ್ತು ವೇಗವಾಗಿ ಬದಲಾಗುತ್ತಿದೆ ಮತ್ತು ವಿವಿಧ ದೇಶಗಳು ತಮ್ಮ ಮೈತ್ರಿಗಳನ್ನು ಪುನರ್ ವಿಮರ್ಶಿಸುತ್ತಿವೆ' ಎಂದು ಅವರು ಹೇಳಿದರು.

ಸುರಕ್ಷತೆ ಮಾನದಂಡ ಪಾಲನೆ–ಪಾಕ್

ಕರಾಚಿ (ರಾಯಿಟರ್ಸ್): ಪಾಕಿಸ್ತಾನದಲ್ಲಿ ಅಣ್ವಸ್ತ್ರ ಸುರಕ್ಷತೆ ಕುರಿತು ಅಮೆರಿಕ ಅಧ್ಯಕ್ಷ ಜೋಬೈಡನ್ ಹೇಳಿಕೆ ಹಿಂದೆಯೇ ಪಾಕಿಸ್ತಾನದ ವಿದೇಶಾಂಗ ಸಚಿವರು, ಅಮೆರಿಕದ ರಾಯಭಾರಿಯನ್ನು ಕರೆಸಿ ಚರ್ಚಿಸಿದ್ದಾರೆ.

ಬೈಡನ್ ಹೇಳಿಕೆಗೆ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೋ–ಜರ್ದಾರಿ ಆಶ್ಚರ್ಯ ವ್ಯಕ್ತಪಡಿಸಿದ್ದು, 'ಅಣ್ವಸ್ತ್ರಗಳ ಸುರಕ್ಷತೆಯಲ್ಲಿ ಅಂತರರಾಷ್ಟ್ರೀಯ ಮಾನದಂಡಗಳನ್ನು ಅನುಸರಿಸುತ್ತಿದೆ ಎಂದು ತಿಳಿಸಿದರು.

'ಪಾಕ್‌ನ ಅಣ್ವಸ್ತ್ರ ಶಸ್ತ್ರಾಸ್ತ್ರಗಳ ಸುರಕ್ಷತೆ ಮತ್ತು ಭದ್ರತೆ ಕುರಿತು ಹಲವು ದೇಶಗಳು ಕಳವಳಗೊಂಡಿವೆ. ಪಾಕ್‌ನ ಅಣ್ವಸ್ತ್ರಗಳು ಭಯೋತ್ಪಾದಕರು ಅಥವಾ ಜಿಹಾದಿ ಸಂಘಟನೆಗಳ ಕೈಗೆ ಸಿಗಬಹುದು ಎಂದು ಪಶ್ಚಿಮದ ದೇಶಗಳು ಆತಂಕ ವ್ಯಕ್ತಪಡಿಸಿವೆ.

'ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ವಿಜಯದಿಂದ ಸ್ಫೂರ್ತಿ ಪಡೆದಿರುವ ಜಿಹಾದಿಗಳು ಪಾಕ್‌ನಲ್ಲೂ ಅಂತಹ ಯತ್ನಕ್ಕೆ ಕೈಹಾಕಬಹುದು' ಎಂದು ಬ್ರೂಕಿಂಗ್ಸ್‌ನಲ್ಲಿನ ವಿದೇಶಾಂಗ ನೀತಿ ನಿರೂಪಣೆಯ ಅಧಿಕಾರಿ ಮಾರ್ವಿನ್ ಕಲ್ಬ್ ಕಳೆದ ವರ್ಷ ಎಚ್ಚರಿಸಿದ್ದರು.

ಚೆಸ್: ಶರಣ್, ಇಶಾ ಮುನ್ನಡೆ

ಪ್ರಜಾವಾಣಿ ವಾರ್ತೆ

ಕುಂದಾಪುರ (ಉಡುಪಿ ಜಿಲ್ಲೆ): ಫಿಡೆ ಮಾಸ್ಟರ್, ಮಂಗಳೂರಿನ ಶರಣ್ ರಾವ್ ಮತ್ತು ಮಹಿಳಾ ಅಂತರರಾಷ್ಟ್ರೀಯ ಮಾಸ್ಟರ್, ಬೆಳ್ತಂಗಡಿಯ ಇಶಾ ಶರ್ಮಾ ಅವರು ಟೊರ್ಪೆಡೊಸ್ ಸ್ಪೋರ್ಟ್ಸ್ ಕ್ಲಬ್ ಆಯೋಜಿಸಿರುವ ರಶ್ಮಿ ಶೆಟ್ಟಿ ಸ್ಮಾರಕ ಫಿಡೆ ರೇಟೆಡ್ ರ್‍ಯಾಪಿಡ್ ಚೆಸ್ ಟೂರ್ನಿಯ ಮೊದಲ ದಿನ ಮುನ್ನಡೆ ಗಳಿಸಿದ್ದಾರೆ.

ಕುಂದಾಪುರದ ಶ್ರೀ ನಾರಾಯಣ ಗುರು ಸಭಾಂಗಣದಲ್ಲಿ ಶನಿವಾರ ಆರಂಭಗೊಂಡ ಟೂರ್ನಿಯ ಐದು ಸುತ್ತುಗಳ ಅಂತ್ಯಕ್ಕೆ ಶರಣ್ ಮತ್ತು ಇಶಾ ತಲಾ 5 ಪಾಯಿಂಟ್ ಕಲೆ ಹಾಕಿದ್ದಾರೆ. ಇಂಟರ್‌ನ್ಯಾಷನಲ್ ಮಾಸ್ಟರ್‌ಗಳಾದ ರೈಲ್ವೇಸ್‌ನ ರತ್ನಾಕರನ್ ಕೆ, ತೆಲಂಗಾಣದ ಚಕ್ರವರ್ತಿ ರೆಡ್ಡಿ, ಛತ್ತೀಸ್‌ಗಢದ ಶ್ರೀನಾಥ್ ರಾವ್ ಕೂಡ ಐದು ಪಾಯಿಂಟ್‌ಗಳೊಂದಿಗೆ ಮುನ್ನಡೆಯಲ್ಲಿದ್ದಾರೆ. ಕರ್ನಾಟಕದ ಅಂಕುಶ್ ಯು.ಡಿ, ಮಹಾರಾಷ್ಟ್ರದ ನಗರೆ ಅಖಿಲೇಶ್ ಮತ್ತು ತಮಿಳುನಾಡಿನ ಮಣಿಕಂಠನ್ ಅವರೂ ತಲಾ ಐದು ಪಾಯಿಂಟ್ ಗಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕ್ರಿಕೆಟ್: ಕರ್ನಾಟಕ ಕಾಶ್ಮೀರ ಪಂದ್ಯ ಇಂದು

ಚಂಡೀಗಡ: ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಭಾನುವಾರ ಜಮ್ಮು–ಕಾಶ್ಮೀರ ತಂಡದ ವಿರುದ್ಧ ಸೆಣಸಲಿದೆ.

ಸಿ ಗುಂಪಿನಲ್ಲಿ ಕರ್ನಾಟಕ ತಂಡವು ಇಲ್ಲಿಯವರೆಗೆ ಮೂರು ಪಂದ್ಯಗಳನ್ನು ಆಡಿದೆ. ಅದರಲ್ಲಿ ಎರಡರಲ್ಲಿ ಗೆದ್ದು, ಒಂದರಲ್ಲಿ ಸೋತಿದೆ. ಮಯಂಕ್, ಮನೀಷ್ ಪಾಂಡೆ ಹಾಗೂ ದೇವದತ್ತ ಪಡಿಕ್ಕಲ್ ಉತ್ತಮ ಲಯದಲ್ಲಿರುವುದರಿಂದ ಬ್ಯಾಟಿಂಗ್ ವಿಭಾಗ ಬಲಿಷ್ಠವಾಗಿದೆ. ಬೌಲಿಂಗ್‌ನಲ್ಲಿ ವೈಶಾಖ ವಿಜಯಕುಮಾರ್ ಉತ್ತಮವಾಗಿ ಆಡುತ್ತಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 1.30

ಮುಂಬೈಗೆ ಜಯ

ಮುಂಬೈ (ಪಿಟಿಐ): ಮುಂಬೈ ಸಿಟಿ ಎಫ್‌ಸಿ ತಂಡವು ಈ ಬಾರಿಯ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯಲ್ಲಿ ಮೊದಲ ಜಯ ಸಂಪಾದಿಸಿತು.

ಶನಿವಾರ ಇಲ್ಲಿ ನಡೆದ ಪಂದ್ಯದಲ್ಲಿ ಮುಂಬೈ 2–0ಯಿಂದ ಒಡಿಶಾ ಎಫ್‌ಸಿ ವಿರುದ್ಧ ಗೆದ್ದಿತು.

ರಾಷ್ಟ್ರೀಯ ಓಪನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್: ಭಾವನಾ ಜಾಟ್‌ಗೆ ನಿರಾಸೆ

ರೋಜಿ ದಾಖಲೆ; ವಂದನಾಗೆ ಬೆಳ್ಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ವಂದನಾ ಅವರು ರಾಷ್ಟ್ರೀಯ ಓಪನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಮೊದಲ ದಿನ ಬೆಳ್ಳಿ ಪದಕಕ್ಕೆ ಮುತ್ತಿಟ್ಟರು.

ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ಆರಂಭವಾದ ಚಾಂಪಿಯನ್‌ಷಿಪ್‌ನ ಮಹಿಳೆಯರ 20 ಕಿಲೊ ಮೀಟರ್ ನಡಿಗೆ ಸ್ಪರ್ಧೆಯಲ್ಲಿ ವಂದನಾ ಅವರಿಗೆ ಪದಕ ಒಲಿಯಿತು. ಅವರು 1 ತಾಸು 37 ನಿಮಿಷ 19 ಸೆಕೆಂಡುಗಳಲ್ಲಿ ಗುರಿ ತಲುಪಿದರು.

ಈ ವಿಭಾಗದಲ್ಲಿ ರೈಲ್ವೇಸ್‌ನ ರವೀನಾ (1 ತಾಸು 34 ನಿ. 55 ಸೆ.) ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರೆ, ಉತ್ತರ ಪ್ರದೇಶದ ಮುನಿತಾ ಪ್ರಜಾಪತಿ (1 ತಾಸು 37 ನಿ. 49 ಸೆ.) ಕಂಚಿನ ಪದಕಕ್ಕೆ ಕೊರಳೊಡ್ಡಿದರು. ಈ ಸ್ಪರ್ಧೆಯಲ್ಲಿ ನೆಚ್ಚಿನ ಅಥ್ಲೀಟ್ ಎನಿಸಿದ್ದ, ಟೋಕಿಯೊ ಒಲಿಂಪಿಯನ್ ಭಾವನಾ ಜಾಟ್ ನಾಲ್ಕನೇ ಸ್ಥಾನಕ್ಕೆ ಕುಸಿದರು. ಅವರು ರೈಲ್ವೇಸ್ ತಂಡವನ್ನು ಪ್ರತಿನಿಧಿಸಿದ್ದರು.

ದಾಖಲೆ ಬರೆದ ರೋಜಿ: ಮಹಿಳೆಯರ ಪೋಲ್‌ವಾಲ್ಟ್ ಸ್ಪರ್ಧೆಯಲ್ಲಿ ತಮಿಳುನಾಡಿನ ರೋಜಿ ಮೀನಾ ಪಾಲ್‌ರಾಜ್ ತಮ್ಮದೇ ದಾಖಲೆ ಉತ್ತಮಪಡಿಸಿಕೊಂಡರು. ಇತ್ತೀಚೆಗೆ ಗುಜರಾತ್‌ನಲ್ಲಿ ನಡೆದ ರಾಷ್ಟ್ರೀಯ ಕ್ರೀಡಾಕೂಟದಲ್ಲಿ (4.20 ಮೀ.) ದಾಖಲೆ ಬರೆದಿದ್ದ ಅವರು ಇಲ್ಲಿ 4.21 ಎತ್ತರದ ಸಾಧನೆ ಮೂಲಕ ಚಿನ್ನದ ಪದಕ ತಮ್ಮದಾಗಿಸಿಕೊಂಡರು. ಅಗ್ರಸ್ಥಾನ ಪಡೆಯುವುದರೊಂದಿಗೆ ರೋಜಿ ಅವರು 2014ರಲ್ಲಿ ನವದೆಹಲಿಯಲ್ಲಿ ವಿ.ಎಸ್. ಸುರೇಖಾ (4.15 ಮೀ.) ನಿರ್ಮಿಸಿದ್ದ ಕೂಟ ದಾಖಲೆಯನ್ನೂ ಮೀರಿದರು.


ರೋಜಿ ಮೀನಾ ಪಾಲ್‌ರಾಜ್– ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

ಮುಖ್ಯಾಂಶಗಳು

- ಮಹಿಳೆಯರ ನಡಿಗೆ ಸ್ಪರ್ಧೆಯಲ್ಲಿ ರವೀನಾಗೆ ಚಿನ್ನ
- ಡಿಸ್ಕಸ್ ಥ್ರೊನಲ್ಲಿ ಪರಮ್‌ಜೋತ್ ಕೌರ್ ಮಿಂಚು
- ಸೂರಜ್ ಪನ್ವಾರ್‌ಗೆ ಪುರುಷರ ನಡಿಗೆ ಚಿನ್ನ

ಫಲಿತಾಂಶಗಳು: ಮಹಿಳೆಯರು: 20 ಕಿ. ಮೀ. ನಡಿಗೆ: ರವೀನಾ (ರೈಲ್ವೇಸ್, ಕಾಲ: 1 ತಾಸು 34 ನಿ. 55 ಸೆ.)–1, ವಂದನಾ (ಕರ್ನಾಟಕ)–2, ಮುನಿತಾ ಪ್ರಜಾಪತಿ (ಉತ್ತರ ಪ್ರದೇಶ)–3. ಪೋಲ್‌ವಾಲ್ಟ್: ರೋಜಿ ಮೀನಾ ಪಾಲ್‌ರಾಜ್ (ತಮಿಳುನಾಡು, ಎತ್ತರ: 4.21 ಮೀಟರ್)–1, ಪವಿತ್ರಾ ವೆಂಕಟೇಶ್ (ರೈಲ್ವೇಸ್)–2, ಬೆರನಿಕಾ ಇಳಂಗೋವನ್ (ರೈಲ್ವೇಸ್)–3. ಡಿಸ್ಕಸ್ ಥ್ರೊ: ಪರಮ್‌ಜೋತ್ ಕೌರ್–1, ದೂರ: 50.81 ಮೀ. ನಿಧಿ ರಾಣಿ–2 (ಇಬ್ಬರೂ ರೈಲ್ವೇಸ್), ನೀತಿಕಾ ವರ್ಮಾ (ಉತ್ತರ ಪ್ರದೇಶ)–3

ಪುರುಷರು: 20 ಕಿ. ಮೀ. ನಡಿಗೆ: ಸೂರಜ್ ಪನ್ವಾರ್ (ಉತ್ತರಾಖಂಡ, ಕಾಲ: 1 ತಾ. 25 ನಿ. 23 ಸೆ.)–1, ಅಕ್ಷದೀಪ್ ಸಿಂಗ್ (ಪಂಜಾಬ್)–2, ಪರಮ್‌ಜೀತ್ ಸಿಂಗ್ ಬಿಷ್ಟ್ (ಸರ್ವಿಸಸ್)–3.

ಸುಧಾ, ಮಯೂರ ಓದಿರಿ

ಫೈನಲ್‌ಗೆ ಕರ್ನಾಟಕ

ಬೆಂಗಳೂರು: ವಂದಿತಾ ಕೆ. ರಾವ್ (17ಕ್ಕೆ 3) ಮತ್ತು ಸವಿ ಸಿ.ಎಸ್ (11ಕ್ಕೆ 3) ಅವರ ಬೌಲಿಂಗ್ ಬಲ ದಿಂದ ಕರ್ನಾಟಕ ತಂಡವು 19 ವರ್ಷ ದೊಳಗಿನ ಮಹಿಳಾ ಬಿಸಿಸಿಐ ಟಿ20 ಟ್ರೋಫಿ ಟೂರ್ನಿಯ ಫೈನಲ್ ಪ್ರವೇಶಿಸಿತು.

ಅಹಮದಾಬಾದ್‌ನ ಮೊಟೆರಾ ಕ್ರೀಡಾಂಗಣದಲ್ಲಿ ಶನಿವಾರ ನಡೆದ ನಾಲ್ಕರ ಘಟ್ಟದ ಪಂದ್ಯದಲ್ಲಿ ಕರ್ನಾಟಕ ಆರು ವಿಕೆಟ್‌ಗಳಿಂದ ಆಂಧ್ರ ತಂಡವನ್ನು ಸೋಲಿಸಿತು.

ನ.12ರಿಂದ ವಾಲಿಬಾಲ್, ಟೇಕ್ವಾಂಡೊ ಸ್ಪರ್ಧೆ

ಬೆಂಗಳೂರು: ಇಲ್ಲಿಯ ಮಲ್ಲಸಂದ್ರದ ವಿಜಯಶ್ರೀ ಪಬ್ಲಿಕ್ ಸ್ಕೂಲ್ ಮತ್ತು ರುಹಾನಿ ಟೇಕ್ವಾಂಡೊ ಕೇಂದ್ರವು ರಾಷ್ಟ್ರೀಯ ಓಪನ್ ಅಂತರ್ ಶಾಲಾ ವಾಲಿಬಾಲ್ ಮತ್ತು ಟೇಕ್ವಾಂಡೊ ಚಾಂಪಿಯನ್‌ಷಿಪ್‌ಅನ್ನು ನವೆಂಬರ್ 12ರಿಂದ ಆಯೋಜಿಸಲಿವೆ. 14 ವರ್ಷದೊಳಗಿನವರು ಮತ್ತು 18 ವರ್ಷದೊಳಗಿನವರ ವಿಭಾಗಗಲ್ಲಿ ಸ್ಪರ್ಧೆಗಳು ನಡೆಯಲಿವೆ. ಹೆಚ್ಚಿನ ಮಾಹಿತಿಗಾಗಿ ಅಲೋಕ್ (ಮೊಬೈಲ್ ಸಂಖ್ಯೆ 8277597118) ಮತ್ತು ಪರೀಕ್ಷಿತ್ (9986124865) ಅವರನ್ನು ಸಂಪರ್ಕಿಸಬಹುದು.

ಪ್ರಜಾವಾಣಿ ಭಾನುವಾರದ ಪುರವಣಿ
ಭಾನುವಾರ, 16 ಅಕ್ಟೋಬರ್ 2022





ಹಿಮದಡಿ ಹೂತ ಕನಸು... 3 ನಾಟ್ಯಶ್ರೀ ಕಲಾ ಸಂಘ @ 25



ಸ್ವರಗಳ ಬೆನ್ನತ್ತಿದ ಬೆರಳು

ವಯಸ್ಸಿನ ಹಂಗಿಲ್ಲದ ಮನಸು

ಸುಮಂಗಲಾ

ಅದು 1953ನೇ ಇಸ್ವಿ. ಬೆಂಗಳೂರಿನ ಟೌನ್‌ಹಾಲ್. ಆಗಿನ್ನೂ ಹಿಂದೂಸ್ತಾನಿಯ ಅಭಿರುಚಿ ಬೆಳೆಯುತ್ತಿದ್ದ ಕಾಲ. ಆದರೂ ಅಂದಿನ ಸಿತಾರ್-ಸರೋದ್ ಜುಗಲಬಂದಿ ಕಛೇರಿಗೆ ಟೌನ್‌ಹಾಲಿನಲ್ಲಿ ಕಿಕ್ಕಿರಿದು ಸೇರಿದ ರಸಿಕರು. 30ರ ಆಸುಪಾಸಿನಲ್ಲಿದ್ದ ಪಂ. ರವಿಶಂಕರ್ - ಉಸ್ತಾದ್ ಅಲಿ ಅಕ್ಬರ್ ಖಾನ್ ವೇದಿಕೆಯೇರುತ್ತಿದ್ದಂತೆ ಕರತಾಡನ. ಸರೋದ್ ಬಗ್ಗೆ ಅಷ್ಟೇನೂ ಕುತೂಹಲವಿಲ್ಲದಿದ್ದರೂ ಸಿತಾರ್ ತುಂಬ ಇಷ್ಟಪಡುವ 20ರ ಹರೆಯದ ಯುವಗಾಯಕನೊಬ್ಬ ಅಂದಿನ ಕಛೇರಿಗೆ ಬಂದಿದ್ದ. ಆದರೆ ಕಛೇರಿ ಮುಗಿಯುವಷ್ಟರಲ್ಲಿ ಆ ಯುವಕನ ಮೈಮನಸ್ಸನ್ನು ಸರೋದ್ ನಾದದ ಗುಂಗು ಸಂಪೂರ್ಣವಾಗಿ ಆವರಿಸಿತ್ತು.

ಆ ದಿನ ಅಲ್ಲಿ ನೆರೆದಿದ್ದ ಇನ್ನೂ ನೂರಾರು ರಸಿಕರು ಅದೇ ಸಿತಾರ್-ಸರೋದ್ ನಾದವನ್ನು ಆಲಿಸಿದ್ದರು, ಖುಷಿಪಟ್ಟಿದ್ದರು. ಆದರೆ ಅವರ್‍ಯಾರನ್ನೂ ಕಾಡದ, ಆವರಿಸದ ಮಾಯೆಯೊಂದು ಈ ಯುವಕನನ್ನು ಆವರಿಸಿತಲ್ಲ... ಬದುಕಿನಲ್ಲಿ ಇನ್ನು ಕಲಿತರೆ ಸರೋದ್ ಮಾತ್ರ, ಹೇಗಾದರೂ ಮಾಡಿ ಈ ಉಸ್ತಾದರ ಬಳಿ ಹೋಗಲೇಬೇಕೆಂಬ ತಹತಹ ಹುಟ್ಟಿ ಹೆಮ್ಮರವಾಯಿತಲ್ಲ! ಉಸ್ತಾದ್ ಅಲಿ ಅಕ್ಬರ್ ಖಾನ್ ಹೀಗೆ ಎಷ್ಟೆಲ್ಲ ಕಡೆ ಒಬ್ಬರೇ ಕಛೇರಿ ನೀಡಿದ್ದರು, ರವಿಶಂಕರ್ ಜೊತೆಗೂಡಿ ಜುಗಲಬಂದಿ ಕಛೇರಿ ನೀಡಿದ್ದರು... ಆದರೆ ಅವರ ಒಂದೇ ಒಂದು ಕಛೇರಿಯನ್ನು ಕೇಳಿ, 'ಇರುವುದೆಲ್ಲ ಬಿಟ್ಟು', ಸರೋದ್ ಕಲಿಯಲೇಬೇಕು ಎಂದು ಬೆನ್ನುಹತ್ತಿ ಬಂದಿದ್ದು ಈ ಯುವಕ ಮಾತ್ರ. ಹಾಗೆ ಸರೋದ್ ಮಾಯೆಯ ಬೆಂಬತ್ತಿ, ಗುರುವನ್ನು ಹುಡುಕಿಕೊಂಡು ಮುಂಬೈಗೆ ಕಾಲಿಟ್ಟ ಆ ಯುವಗಾಯಕನೇ ಪಂಡಿತ್ ರಾಜೀವ ತಾರಾನಾಥ.

ಹಾಗೆ ನೋಡಿದರೆ ಅವರ ಸಂಗೀತ ಪಯಣ ಆರಂಭವಾಗಿದ್ದು ಬೆರಳುಗಳ ಮೂಲಕವೇ. ಮೂರು–ನಾಲ್ಕು ವರ್ಷದ ಬಾಲಕನಾಗಿದ್ದಾಗ, ಎಡಗೈ, ಬಲಗೈ ವ್ಯತ್ಯಾಸ ತಿಳಿಯುವ ಮೊದಲೇ, ಎಳೆಯ ಪುಟ್ಟ ಬೆರಳುಗಳು ತಬಲಾದ ಮೇಲಾಡುತ್ತಿದ್ದವು. ಆಯುರ್ವೇದ ಪಂಡಿತರೂ ಆಗಿದ್ದ ತಂದೆ ತಾರಾನಾಥರು ತುಂಬ ಚಿಕ್ಕ ವಯಸ್ಸಿನಲ್ಲಿಯೇ ಇವರಿಗೆ ತಬಲಾ ಕಲಿಸಿದ್ದರು. ಅದು ಮುಂದೆ ಆಯುರ್ವೇದದಲ್ಲಿ ನಾಡಿ ನೋಡುವುದಕ್ಕೂ ಸಹಾಯವಾಗುತ್ತದೆ ಎಂದು. ರಾಜೀವರು ಹುಟ್ಟಿ ಬೆಳೆದಿದ್ದು ಮಂತ್ರಾಲಯದ ಸಮೀಪದ ತುಂಗಭದ್ರ ಎಂಬ ಊರಿನಲ್ಲಿ. ಹತ್ತೊಂಬತ್ತನೇ ಶತಮಾನದ ಆರಂಭದ ಆ ಕಾಲಘಟ್ಟದಲ್ಲಿ ಕ್ರಾಂತಿಕಾರಿಯೆಂದು ಹೆಸರಾಗಿದ್ದ, ಸಾಹಿತ್ಯ, ಸಂಗೀತ ಹಾಗೂ ಆಯುರ್ವೇದದಲ್ಲಿ ಪರಿಣತಿ ಹೊಂದಿದ್ದ ಪಂಡಿತ ತಾರಾನಾಥ ಮತ್ತು ಪ್ರಗತಿಪರ ನಿಲುವಿನ, ಮಹಿಳೆಯರ ಹಕ್ಕುಗಳ ಕುರಿತು ಅಧಿಕಾರಯುತವಾಗಿ ಮಾತನಾಡುತ್ತಿದ್ದ ಸುಮತೀಬಾಯಿಯವರ ಹಿರಿಯ ಮಗನಾಗಿ ಹುಟ್ಟಿದ ರಾಜೀವರಿಗೆ ಬಾಲ್ಯದಲ್ಲಿಯೇ ದೊಡ್ಡತನದ, ಔತ್ತಮ್ಯದ ಮಾದರಿಗಳು ಕಣ್ಣ ಮುಂದಿದ್ದವು.

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತವನ್ನು ಕ್ರಮಬದ್ಧವಾಗಿ ಕಲಿಯತೊಡಗಿದ ರಾಜೀವರು ಮೊದಲ ಕಾರ್ಯಕ್ರಮ ನೀಡಿದಾಗ ಕೇವಲ ಒಂಬತ್ತು ವರ್ಷ. ಆಕಾಶವಾಣಿಯಲ್ಲಿ ಸಂಗೀತ ಕಾರ್ಯಕ್ರಮ ನೀಡಿದಾಗ ಅವರಿಗೆ ಹತ್ತೊಂಬತ್ತು ವರ್ಷ. ಅಂತರ ಕಾಲೇಜು ಸ್ಪರ್ಧೆಗಳಲ್ಲಿ ಎಲ್ಲ ಗಾಯನ ಸ್ಪರ್ಧೆಗಳಲ್ಲಿ ಮೊದಲ ಬಹುಮಾನ ಕಟ್ಟಿಟ್ಟ ಬುತ್ತಿ. ತಲತ್ ಮಹಮೂದರ ಗಝಲ್‌ಅನ್ನು ತುಂಬ ಇಷ್ಟಪಡುತ್ತಿದ್ದ ರಾಜೀವರ ಕಣ್ಣಿನಲ್ಲಿ ಹಿನ್ನೆಲೆ ಗಾಯಕರಾಗುವ ಕನಸು ಆಗೀಗ ತೂಗುತ್ತಿತ್ತು. ಆದರೆ ಉಸ್ತಾದ್ ಅಲಿ ಅಕ್ಬರ್ ಖಾನರ ಸರೋದ್ ವಾದನ ಮೈಮನವನ್ನು ತುಂಬಿದ ನಂತರ ಕೊರಳಿಗಿಂತ ಬೆರಳಿನ ಕರೆಯೇ ತೀವ್ರವಾಗಿತ್ತು.


ತಬಲಾವಾದನದಲ್ಲಿ ನಿರತ ಬಾಲಕ ರಾಜೀವ ತಾರಾನಾಥ

ಸರೋದ್, ಮಾತ್ರವಲ್ಲ ಹೆಚ್ಚುಕಡಿಮೆ ಎಲ್ಲ ತಂತಿವಾದ್ಯಗಳನ್ನು ಚಿಕ್ಕ ವಯಸ್ಸಿನಲ್ಲಿ, ಎಳೆ ಬೆರಳುಗಳನ್ನು ಬೇಕಿದ್ದಂತೆ ಬಾಗಿ, ಬಳುಕಿಸಿ, ಪಳಗಿಸುವ ಕಾಲದಲ್ಲಿ ಕಲಿಯಬೇಕು ಎನ್ನುತ್ತಾರೆ ಅವರು. ಆದರೆ ರಾಜೀವರು ಗುರುಗಳ ಸಂಪರ್ಕ ಸಾಧಿಸಿ, ಅವರ ಬಳಿ ಹೋದಾಗ ಅವರಿಗೆ 23 ವರ್ಷ. ನಂತರ ಬೆರಳುಗಳನ್ನು ಪಳಗಿಸುವುದು ಅಷ್ಟು ಸುಲಭವಲ್ಲ. ಅಷ್ಟು ವರ್ಷ ಕೊರಳಿನಲ್ಲಿ ನೆಲೆಗೊಂಡಿದ್ದ ರಾಗಗಳನ್ನು ಬೆರಳಿಗೆ ದಾಟಿಸುವ ಆ ಸವಾಲು ಕಠಿಣವಿತ್ತು. ಆ ವೇಳೆಗೆ ತಂದೆ, ತಾಯಿ ಇಬ್ಬರನ್ನೂ ಕಳೆದುಕೊಂಡು, ಏಕಾಂಗಿಯಾಗಿ ಆ ದುರ್ಗಮ ದಾರಿಯ ಪಯಣ, ತಂದೆಸಮಾನ ಗುರುಗಳಾದ ಖಾನ್ ಸಾಹೇಬರ ಕಲಿಕೆಯ ವಿಧಾನ, ಗುರುವಿನ ಪ್ರೀತಿ, ರಿಯಾಜ್ ಹೇಗಿರಬೇಕು, ಅನುದಿನದ ಹುಡುಕಾಟ, ಗಾಯನದಲ್ಲಿ ಕೊರಳಿನ ಮೂಲಕ ಮೂಡಿಸೋ ಎಲ್ಲ ರಾಗಛಾಯೆಗಳನ್ನು ಸರೋದಿನಲ್ಲಿಯೂ ಹ್ಯಾಗೆ ಪಡಿಮೂಡಿಸಬೇಕು, ಹೀಗೆ ನಾಲ್ಕಾರು ಪ್ರಶ್ನೆಗಳನ್ನು ಇಟ್ಟುಕೊಂಡು ಪಂಡಿತ್ ರಾಜೀವರನ್ನು ಮಾತನಾಡಿಸಿದಾಗ ಹೊರಚಿಮ್ಮಿದ ಮನೋಲಹರಿ ಇಲ್ಲಿದೆ:

****

'ಗಾಯನದಲ್ಲಿ ಔತ್ತಮ್ಯವನ್ನು ಸಾಧಿಸಿರತೀವಿ, ಕೊರಳಿನ ಸಾಧ್ಯತೆಗಳನ್ನು ಕಂಡುಕೊಂಡಿರತೀವಿ. ಆ ನಂತರ ದೇಹವನ್ನು ಇನ್ನೊಂದಕ್ಕೆ ಸಜ್ಜುಗೊಳಿಸುವುದು ಅಷ್ಟು ಸುಲಭ ಅಲ್ಲ. ಮತ್ತೆ ಇಲ್ಲಿ ಯಾವುದೇ ಶಾರ್ಟ್ ಕಟ್ ಇಲ್ಲ. ದೇಹ, ಬೆರಳು, ಉಗುರು ಎಲ್ಲವನ್ನೂ ಇನ್ನೊಂದು ದುಡಿಮೆಗೆ ಹಚ್ಚಬೇಕು. ಈಗ ತುಸು ಮಟ್ಟಿಗೆ ಪಾಂಡಿತ್ಯವನ್ನು ಗಳಿಸ್ತಾ ಇದ್ದೀನಿ.

ಸಂಗೀತ ಒಂದೇ, ಅದರ ಅವತಾರಗಳು ಬೇರೆ. ಬಹಳ ಸಮೃದ್ಧವಾಗಿ, ಸಂಪೂರ್ಣವಾಗಿ, ಸಂಗೀತದ ಸಿದ್ಧಾಂತಗಳು ಗಾಯನದಲ್ಲಿ ಬರುತ್ತವೆ. ನನ್ನ ಪ್ರಕಾರ ಗಾಯನ ಸಂಗೀತವೇ ಕೇಂದ್ರ. ಅಲ್ಲಿಂದ ಬೇರೆಬೇರೆ ವಾದ್ಯಗಳು... ಅದೇ ಸಂಗೀತವನ್ನು ನುಡಿಸಲು ನೋಡುವುದು. ಒಂದು ವಾದ್ಯದ ಒಕ್ಕಣೆ, ಅದರ ಆಕಾರ, ಇದರ ಮೂಲಕ ಗಾಯನದಲ್ಲಿ ಮಾಡಲಾಗದ ಎಷ್ಟೋ ಸಂಗತಿಯನ್ನು ಮಾಡಬಹುದು, ಹಾಗೆಯೇ ಕೆಲವನ್ನು ಮಾಡೋದಕ್ಕೂ ಆಗುವುದಿಲ್ಲ. ಅಂದರೆ ಪ್ರತೀ ವಾದ್ಯಕ್ಕೂ ಅದರದೇ ಆದ ಸಾಧ್ಯತೆಗಳೂ ಇವೆ, ಮಿತಿಗಳೂ ಇವೆ.

ನಮ್ಮ ಗುರುಗಳು ಮೊದಲು ಹಾಡಿ ತೋರಿಸುತ್ತಿದ್ದರು. ಆಮೇಲೆ ಸರೋದಿನಲ್ಲಿ ನುಡಿಸೋರು. ಖಾನ್‌ಸಾಹೇಬರಿಗೆ ಕಲಿಸುವುದರಲ್ಲಿ ಅಷ್ಟು ಹುರುಪು ಇರುತ್ತಿರಲಿಲ್ಲ. ಸರೋದನ್ನು ಚೆನ್ನಾಗಿ ನುಡಿಸುವುದರಲ್ಲಿ, ಅದರ ಸಾಧ್ಯತೆಗಳನ್ನು ಶೋಧಿಸುವುದರಲ್ಲಿ ಹೆಚ್ಚು ಆಸಕ್ತಿ ಇತ್ತು. ಅನ್ನಪೂರ್ಣ ದೀದಿ, ರವಿಶಂಕರ್ ಇವರಿಬ್ಬರ ಕಲಿಸುವಿಕೆ ಖಾನ್ ಸಾಹೇಬರ ಕಲಿಸುವ ವಿಧಾನಕ್ಕಿಂತ ತುಸು ಭಿನ್ನ. ಅಂದರೆ ಇವರಿಬ್ಬರಿಗೂ ಅವರು ಹೇಳಿದ್ದನ್ನು ಚಾಚೂ ತಪ್ಪದೆ ಮಾಡಿ ತೋರಿಸಬೇಕು. ಮೇಷ್ಟ್ರ ಥರಾ ಇಬ್ಬರೂ.

ಸಂಗೀತದಲ್ಲಿ ಕಲಿಕೆಗಿಂತ ಮೈಗೂಡಿಸಿಕೊಳ್ಳೋದು ಭಾಳ ಇರತದೆ. ಬಾಯಿ ಮಾತಿನಲ್ಲಿ ಎಷ್ಟೂ ಅಂತ ಹೇಳಬಹುದು? ಶಬ್ದಗಳಲ್ಲಿ ಸಂಗೀತವನ್ನು ಹೇಳೋದಕ್ಕೆ ಆಗೋದಿಲ್ಲ. ಗುರುಗಳ ಗಾಯನ ಅಥವಾ ವಾದನ, ಬೇರೆ ದೊಡ್ಡವರ ಸಂಗೀತವನ್ನು ಕೇಳಿಕೇಳಿ ಮೈಗೂಡಿಸಿಕೊಳ್ಳಬೇಕು. ಆ ಸಂಗೀತದೊಳಗೇ ಇದ್ದರೆ, ನೀವು ಮೈಮನಸ್ಸೆಲ್ಲವನ್ನೂ ತೆರೆದುಕೊಂಡಿದ್ದರೆ ಬೇಗ ಬರುತ್ತದೆ. ಇಲ್ಲದಿದ್ದರೆ ಗೋಡೆ ಹಾಯ್ದುಕೊಂಡು ಸಂಗೀತ ನಿಮ್ಮ ತಲುಪೋದು ಕಷ್ಟವಾಗುತ್ತದೆ.

ಗುರುಗಳು ನಮ್ಮ ಮುಂದೆ ದೊಡ್ಡ ಖಜಾನೆಯನ್ನೇ ತೆರೆದು ಇಟ್ಟಿರಬಹುದು. ಆದರೆ ನನ್ನ ಬುಟ್ಟಿ ಆಗ ಸಣ್ಣದಿತ್ತು. ಅದೇ ಬುಟ್ಟಿ ದೊಡ್ಡದಾಗಿದೆ. ಆಗ ಸಮುದ್ರದೆದುರು ನಿಂತಿದ್ದರೂ ನನ್ನ ಬೊಗಸೆ ಚಿಕ್ಕದಿತ್ತು. ಈಗ ಬೊಗಸೆ ದೊಡ್ಡದಾಗಿದೆ. ಕವನವೊಂದನ್ನು ಮತ್ತೆ ಮತ್ತೆ ಓದಿದಾಗ ಬೇರೆ ಅರ್ಥಗಳನ್ನು ಹೊಳೆಯಿಸುತ್ತ ಹೋಗುತ್ತದೆಯಲ್ಲ, ಹಾಗೆ ಈಗ ರಾಗಗಳ ಬೇರೆ ಬೇರೆ ಅರ್ಥ, ಸಾಧ್ಯತೆಗಳ ಹುಡುಕಾಟ ಮಾಡೋದಕ್ಕೆ ಆಗುತ್ತಿದೆ. ಪ್ರತಿದಿನ ಉಜ್ಜಬೇಕು, ತಿಕ್ಕಬೇಕು. ಸುಮ್ಮನೇ ತಿಕ್ಕೋದಲ್ಲ. ಮೈಮನಸು ಪೂರಾ ರಿಯಾಜಿನಲ್ಲೇ ಇರಬೇಕು. ಈಗ ತುಸು ಮಟ್ಟಿಗೆ ಪಾಂಡಿತ್ಯವನ್ನು ಗಳಿಸ್ತಾ ಇದ್ದೀನಿ.

ಸಾಹಿತ್ಯದಲ್ಲಿ ಯಾವುದೇ ಮಾನದಂಡ ಇಲ್ಲ. ಆದರೆ ಸಂಗೀತದಲ್ಲಿ ಹಾಗಲ್ಲ. ಇಲ್ಲಿ ಪ್ರಮಾಣವಿದೆ.

ಖಾನ್‌ಸಾಹೇಬರಿಗೆ ಒಮ್ಮೆ ಯಾರೋ ಕೇಳಿದರು, ನೀವು ಏನು ಮಾಡ್ತಾ ಇದ್ದೀರಿ ಅಂತ. ಅದಕ್ಕೆ ಅವರು ಹೇಳಿದರು, ನಾನು ಏನೂ ಮಾಡ್ತಿಲ್ಲ, 'ನಿ'ದಿಂದ 'ಸ' ಗೆ ಹೋಗೋ ಪ್ರಯತ್ನ ಮಾಡ್ತಾ ಇದ್ದೀನಿ. ತೃಪ್ತಿಯಾಗುವ ಹಾಗೆ, ಪೂರ್ತಿಯಾಗಿ ಹಾಗೆ 3-4 ಸಲ ಹೋಗಿರಬಹುದು ಅಷ್ಟೆ ಅಂತ. ಅದು ನಿಜ. ಹಾಗೆ 'ನಿ'ದಿಂದ 'ಸ'ಗೆ ಪೂರ್ತಿಯಾಗಿ ಹೋದಾಗ ಮೈಯೆಲ್ಲ ತುಂಬಿದಂತೆ ಇರುತ್ತಿತ್ತು. ಕೆಲವೊಮ್ಮೆ ನುಡಿಸ್ತಾನೆ ಉಮ್ಮಳಿಸಿ ಬರುತ್ತೆ. ಯಾವುದೋ ನೆನಪಿಗೆ ಇರಬಹುದು ಅಥವಾ ಅದೇ ನುಡಿಸಾಣಿಕೆಯೇ ಉಮ್ಮಳಿಸಿ ಬರುತ್ತದೇನೋ.

3ನೇ ಪುಟಕ್ಕೆ...

ಕಾವ್ಯದ ಹೊನಲುಗಳ ಸಂಗಮ

'ಬಿಸಿಲ ನಾಡು' ಬಳ್ಳಾರಿಯಲ್ಲಿ ಇದೇ 21ರಿಂದ 24ರವರೆಗೆ ಅಂತರರಾಷ್ಟ್ರೀಯ ಕವಿ ಸಮ್ಮೇಳನ ನಡೆಯಲಿದೆ. ಕಾವ್ಯದ 'ಸಂಗಂ' ಹೊನಲು ಬೆಂದ ಮನಗಳಿಗೆ ತಂಪೆರೆಯಲಿದೆ

ದಸ್ತಗೀರಸಾಬ್ ದಿನ್ನಿ

ಸಾಹಿತ್ಯ ಹಾಗೂ ಕಲಾಲೋಕಕ್ಕೆ ಬಡಿದಿದ್ದ ಕೊರೊನಾ 'ಗರ' ಈಗ ಸಂಪೂರ್ಣವಾಗಿ ಬಿಟ್ಟಂತೆ ತೋರುತ್ತದೆ. ಎಲ್ಲೆಡೆಯೂ ಸಾಹಿತ್ಯ ಮತ್ತು ಕಲಾಲೋಕದ ಚಟುವಟಿಕೆಗಳು ಇದೀಗ ಇದ್ದಕ್ಕಿದ್ದಂತೆ ಪುಟಿದೆದ್ದಿವೆ. ನವೋತ್ಸಾಹವನ್ನೂ ತುಂಬುತ್ತಿವೆ. ಇಂತಹ ಸಂಭ್ರಮದ ಚಿಲುಮೆಯಲ್ಲಿ ಪುಟಿದೆದ್ದಿರುವ ನಮ್ಮ ಬಳ್ಳಾರಿ, ರಾಜ್ಯವು ಈ ಹಿಂದೆ ಕಂಡಿರದಂತಹ ಬಹುದೊಡ್ಡ ಅಂತರರಾಷ್ಟ್ರೀಯ ಕವಿ ಸಮ್ಮೇಳನವನ್ನು ಆಯೋಜಿಸುತ್ತಿದೆ. ಜಗತ್ತಿನ ಹಲವು ದೇಶಗಳ ಕಾವ್ಯದ ಹೊನಲುಗಳು ಜಗದ್ವಿಖ್ಯಾತ ಹಂಪಿಗೆ ಹತ್ತಿರದ ಈ ಪರಿಸರದಲ್ಲಿ ಸಂಗಮಿಸುತ್ತಿವೆ. ಆದ್ದರಿಂದಲೇ ಈ ಸಮ್ಮೇಳನವನ್ನು 'ಸಂಗಂ' ಎಂದೇ ಹೆಸರಿಸಲಾಗಿದೆ.

ಸಮ್ಮೇಳನದ ಮುಖ್ಯ ಸಂಯೋಜಕರಾದ ಪ್ರೊ.ಎಚ್.ಎಸ್. ಶಿವಪ್ರಕಾಶ್ ಅವರಿಗೀಗ ಬಿಡುವಿಲ್ಲದ ಕೆಲಸ. ತೆರಪಿಲ್ಲದಂತೆ ಬರುತ್ತಿರುವ ಫೋನ್ ಕರೆಗಳ ನಡುವೆಯೇ ಬಿಡುವು ಮಾಡಿಕೊಂಡು ಸಮ್ಮೇಳನದ ವೈಶಿಷ್ಟ್ಯದ ಕುರಿತು ಅವರದ್ದು ಚುಟುಕಾದ ಪ್ರತಿಕ್ರಿಯೆ. 'ಕರ್ನಾಟಕದಲ್ಲಿ ಇದುವರೆಗೆ ಇಷ್ಟು ದೊಡ್ಡಮಟ್ಟದ ಅಂತರರಾಷ್ಟ್ರೀಯ ಕವಿ ಸಮ್ಮೇಳನ ನಡೆದಿರಲಿಲ್ಲ. ಕೊರೊನಾ ಕಾಲಘಟ್ಟದಲ್ಲಿ ಲಾಕ್‌ಡೌನ್‌ನಿಂದ ಸಂಪರ್ಕ ಕಡಿದು ಹೋದಾಗ ವಿಶ್ವದ ಕವಿಗಳು ಕೂಡ ಬರೀ ವರ್ಚ್ಯುವಲ್ ಆಗಿದ್ದರು. ಈಗ ಬಿಡುಗಡೆ ಸಿಕ್ಕಿರುವುದರಿಂದ ನಾವು ವಿಶ್ವ ಕಾವ್ಯವನ್ನು ಸಂಭ್ರಮಿಸುವ ಒಂದು ಪ್ರಯತ್ನವನ್ನು ಮಾಡುತ್ತಿದ್ದೇವೆ' ಎನ್ನುತ್ತಾರೆ.

'ಸಮ್ಮೇಳನ ನಡೆಯುವ ಸ್ಥಳ ಬಳ್ಳಾರಿ. ಇದು ಹಂಪಿಯ ಅಂಚಿನಲ್ಲಿದೆ. ಹಂಪಿ ಎನ್ನುವುದು ಕರ್ನಾಟಕದ ಸಾಂಸ್ಕೃತಿಕ ವಿಕಸನದ ಎರಡನೆಯ ದೊಡ್ಡ ಹಂತದ ದ್ಯೋತಕ. ಇದು ಕನ್ನಡ ಸಂಸ್ಕೃತಿಯನ್ನು ಒಂದಾಗಿ ಸೇರಿಸಿದ ನಾಗರಿಕತೆಯಾಗಿತ್ತು. ಇಂತಹ ಪರಿಸರದಲ್ಲಿ 'ಸಂಗಂ' ನಡೆಯುತ್ತಿರುವುದು ಅರ್ಥಪೂರ್ಣವಾಗಿದೆ' ಎಂದು ಅವರು ಹೇಳುತ್ತಾರೆ.


'ಸಂಗಂ ಎನ್ನುವುದು ದ್ರಾವಿಡ ಕಾವ್ಯ ಪರಂಪರೆಯ ಮೊತ್ತಮೊದಲ ಸಾಂಸ್ಕೃತಿಕ ಸ್ವರೂಪ. ತಮಿಳಿನ ಸಂಗಂ ಕಾವ್ಯ ದ್ರಾವಿಡ ಕಾವ್ಯದ ಪ್ರತಿಫಲ. ಅದರ ಸ್ಮರಣಾರ್ಥವಾಗಿ ಸಂಗಂ ಅನ್ನು ಆಚರಿಸುತ್ತಿದ್ದೇವೆ. ಕನ್ನಡದ ಮಣ್ಣಿನ ಮೇಲೆ ವಿಶ್ವದ ಅನೇಕ ಭಾಷೆಯ ಕಾವ್ಯ, ಕವಿಗಳನ್ನು ಮೇಳೈಸಿ ಅದರಿಂದ ಅಪೂರ್ವವಾದುದನ್ನು ಮೂಡಿಸುವುದು ಇದರ ಉದ್ದೇಶ' ಎಂದು ವಿವರಿಸುತ್ತಾರೆ. 'ಈಗ ನಾವು ಶುರು ಮಾಡಿದ್ದೇವೆ. ಮುಂದೆ ಇದನ್ನು ದೊಡ್ಡ ಪ್ರಮಾಣದಲ್ಲಿ ಮುಂದುವರಿಸಬಹುದು. ಎಲ್ಲಾ ಕವಿಗಳು ಸಾವಿರಾರು ಮೈಲುಗಳಿಂದ, ಲಕ್ಷಾಂತರ ರೂಪಾಯಿ ದುಡ್ಡು ಹಾಕಿಕೊಂಡು ಬರುತ್ತಿದ್ದಾರೆ. ಆರ್ಥಿಕ ಹೊರೆ ಎನಿಸಿದರೂ ಕೂಡ ಕಾವ್ಯಪ್ರೇಮ ಹಾಗೂ ಮಾನವೀಯ ತುಡಿತದಿಂದ ದೇಶ ವಿದೇಶದ ಕವಿಗಳು ಪಾಲ್ಗೊಳ್ಳುತ್ತಿದ್ದಾರೆ' ಎಂದೂ ಶಿವಪ್ರಕಾಶ್ ಹೇಳುತ್ತಾರೆ.


ಎಚ್.ಎಸ್. ಶಿವಪ್ರಕಾಶ್


ಆರಿಫ್ ರಾಜಾ


ಮರ್ಯಮ್ ಅಲಾ ಅಮ್ಜದಿ


ಮನೋಜ್ ಬೊಗಟಿ


ಯೊಹಾನ ಕಾರ್ವಾಲ್


ಗೊರೆಟಿ ವೆಂಕಣ್ಣ

ಮೂರ್ತ, ಅಮೂರ್ತ, ಸುಡುವ ವರ್ತಮಾನ, ಅಂತರಂಗದ ತೊಳಲಾಟ, ನಗ್ನ ಸತ್ಯ, ಇಂಗದ ದಾಹ, ಜೀವ ಕಾರುಣ್ಯದಂತಹ ಸಂವೇದನೆಗಳಿಗೆ ಅಕ್ಷರ ರೂಪದ ಅಭಿವ್ಯಕ್ತಿ ನೀಡಿ ಸಹೃದಯರ ಮನ ಮನಕ್ಕೆ ದಾಟಿಸುವ ವಿಶ್ವದ ಕವಿಗಳ ಆಲೋಚನಾ ಕ್ರಮ, ಸಾಂಸ್ಕೃತಿಕ ಪ್ರೀತಿ, ಕೈಂಕರ್ಯ ನಿಜಕ್ಕೂ ದೊಡ್ಡದು. ಈ ಲೋಕವನ್ನು ಬದಲಿಸುವ, ಕತ್ತಲೆ ದಾರಿಗೆ ದೊಂದಿಯಾಗುವ ಕಾವ್ಯ ಅನುಭಾವದ ಹುಡುಕಾಟಕ್ಕೆ ಜತೆಯಾಗುತ್ತದೆ. ಬುದ್ಧನ ನಗೆಯನ್ನು, ನೆಲದ ಮರೆಯ ನಿಧಾನವನ್ನು, ಜಗದ ಬಾಗಿಲುಗಳನ್ನು ತೆರೆದು ತೋರಿಸುವ ಕಾವ್ಯ ತಾಯಿ ಪ್ರೀತಿಯನ್ನು ಮೊಗೆ ಮೊಗೆದು ಹಂಚುವಂತಹದ್ದು.

ಸಮ್ಮೇಳನದಲ್ಲಿ ಪಾಲ್ಗೊಳ್ಳಲಿರುವ ಪರ್ಷಿಯನ್ ಕವಯಿತ್ರಿ ಮರ್ಯಮ್ ಅಲಾ ಅಮ್ಜದಿ ಅವರ ಮಾತು ಕೇಳಿ.

2ನೇ ಪುಟಕ್ಕೆ...

ನಾದ ನೇಯ್ಗೆಯ ಮಾಯಾಜಾಲ

ಪ್ರತಿಭಾ ನಂದಕುಮಾರ್

'ಹಲವು ವಿಭಿನ್ನ ಧ್ವನಿಗಳನ್ನು ಹೆಣೆಯುವುದೇ 'ವೀವಿಂಗ್ ವಾಯ್ಸಸ್'ನ ಮೂಲ ಪರಿಕಲ್ಪನೆ. ಈ ಕಲಾವಿದರೆಲ್ಲರೂ ತಮ್ಮ ಧ್ವನಿಯೊಂದಿಗೆ ನಾದದ ಪ್ರಯಾಣ ಮಾಡುತ್ತಾ ಬಂದಿದ್ದಾರೆ. ಧ್ವನಿಗಳನ್ನು ಹೆಣೆಯುವ ಪ್ರಕ್ರಿಯೆ ಈ ಷೋನಲ್ಲಿ ಹಲವು ಮಟ್ಟಗಳಲ್ಲಿ ನಡೆಯುತ್ತದೆ. ಇಲ್ಲಿ ವಯಲಿನ್ ಕೂಡಾ ಒಂದು ಧ್ವನಿಯೇ. ತಬಲಾ, ಕೊಳಲುಗಳೂ ಧ್ವನಿಗಳೇ. ಹೆಣಿಗೆ ಎಂದರೆ ಎಲ್ಲರೂ ತಮ್ಮ ವೈಯಕ್ತಿಕ ಧ್ವನಿಗಳನ್ನು ಉಳಿಸಿಕೊಳ್ಳುತ್ತಲೇ ಇತರ ಧ್ವನಿಗಳೊಂದಿಗೆ ಸೇರಿ ಒಂದು ಕಲೆಕ್ಟಿವ್ ಧ್ವನಿಯಾಗಿ ಹೊಮ್ಮುತ್ತಾರೆ. ಹಾಗಂತ ಹೇಳಿದರೆ ನಿಮಗೆ ಏನಾದರೂ ಅರ್ಥವಾಗುತ್ತಿದೆಯೇ?' ಎಂದು ವಿವರಿಸಲು ಯತ್ನಿಸಿದರು ಕಲಾವಿದ ರಾಯ್ ಸ್ಟೆನ್ ಏಬೆಲ್.

ರಾಯ್ ಸ್ಟೆನ್ ಅವರ ಹೆಚ್ಚಿನ ಪ್ರಯೋಗಗಳು ಹೀಗೆಯೇ - ಪದಗಳಲ್ಲಿ ವರ್ಣಿಸುವುದು ಕಷ್ಟಸಾಧ್ಯ. ಆದರೆ, ಅನುಭವದಲ್ಲಿ ಮಾಂತ್ರಿಕ ಜಾಲ. 'ವೀವಿಂಗ್ ವಾಯ್ಸಸ್' ಅವರ ಹೊಸ ಪ್ರಯೋಗದಲ್ಲಿ ಸಂಗೀತ, ನಾಟಕ, ದೃಶ್ಯ ಸಂಭ್ರಮ ಎಲ್ಲವೂ ಮೇಳೈಸಿ ಅಭೂತಪೂರ್ವ ಅನುಭವ ನೀಡುತ್ತದೆ.

ನ್ಯಾಶನಲ್ ಸ್ಕೂಲ್ ಆಫ್ ಡ್ರಾಮಾದಲ್ಲಿ ತರಬೇತಿ ಪಡೆದು, ನಾಟಕ ಕ್ಷೇತ್ರದಲ್ಲಿ ಧ್ರುವತಾರೆ ಎಂದೇ ಜನಪ್ರಿಯರಾದ ರಾಯ್ ಸ್ಟೆನ್ ಏಬೆಲ್ ಮತ್ತು ಬೆಂಗಳೂರಿನ ಸಂಬಂಧ ನಿಕಟವಾದುದು. ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ ಅವರ 'ಫ್ಲವರ್ಸ್', 'ಒಥೆಲೋ ಇನ್ ಬ್ಲ್ಯಾಕ್ ಅಂಡ್ ವೈಟ್', 'ಎ ಹಂಡ್ರೆಡ್ ಸ್ನೇಕ್ ಚಾರ್ಮರ್ಸ್' ಮತ್ತು 'ಮಾಂಗಣಿಯಾರ್ ಸೆಡಕ್ಷನ್' ನಾಟಕಗಳು ಜೊತೆಗೆ 'ಕಿಚನ್' 'ಮಾಂಗಣಿಯಾರ್ ಕ್ಲಾಸ್ ರೂಮ್' ಮುಂತಾದ ಪ್ರಯೋಗಗಳು ಬೆಂಗಳೂರಿನ ರಸಿಕರ ಮನಸೆಳೆದದ್ದು ಹಳೆಯ ಮಾತು. ಈಗ ರಾಯ್ ಮತ್ತೆ ಒಂದು ಹೊಸಾ ಪ್ರಯೋಗದೊಂದಿಗೆ ಬರುತ್ತಿದ್ದಾರೆ. 'ವೀವಿಂಗ್ ವಾಯ್ಸಸ್' - ಧ್ವನಿಗಳನ್ನು ಹೆಣೆಯುವುದು ಒಂದು ವಿಶಿಷ್ಟ ಪರಿಕಲ್ಪನೆ. ದೇಶದ ಅತ್ಯುನ್ನತ ಕಲಾವಿದರನ್ನು ಜೊತೆಗೂಡಿಸಿಕೊಂಡು ಧ್ವನಿಯ ಯಾನದಲ್ಲಿ ಒಂದು ಮಾಂತ್ರಿಕ ಅನುಭವ ನೀಡಲು ಸಿದ್ಧರಾಗಿದ್ದಾರೆ.

ಭೂಮಿಜಾ ಸಂಸ್ಥೆ ಏರ್ಪಡಿಸಿರುವ ಈ ವಿಶೇಷ ಕಾರ್ಯಾಕ್ರಮದಲ್ಲಿ ರಾಯ್ ಸ್ಟೆನ್ ಜೊತೆ, ವಿಭಿನ್ನ ಸಂಗೀತ ಶೈಲಿಗಳಲ್ಲಿ ವಿಶ್ವವಿಖ್ಯಾತ ಕಲಾವಿದರಾದ ಬಾಂಬೆ ಜಯಶ್ರೀ, ಉದಯ್ ಭವಲ್ಕರ್, ಎಂ.ಡಿ. ಪಲ್ಲವಿ, ದಿಯು ಖಾನ್ ಮಾಂಗಣಿಯಾರ್, ರಸಿಕಾ ಶೇಖರ್, ಅಪೂರ್ವ ಕೃಷ್ಣ, ಸುಮೇಶ್ ನಾರಾಯಣನ್ ಮತ್ತು ಎಂ.ಟಿ. ಆದಿತ್ಯ ಶ್ರೀನಿವಾಸನ್ ಇದ್ದಾರೆ. ಧ್ವನಿ ವಿನ್ಯಾಸ ಆಸ್ಕರ್ ಪ್ರಶಸ್ತಿ ಪುರಸ್ಕೃತ ರಸೂಲ್ ಪೂಕುಟ್ಟಿ ಅವರದು. ಪೂಕುಟ್ಟಿ ಅವರ ಪ್ರಕಾರ 'ಧ್ವನಿಯನ್ನು ಹೆಚ್ಚಿನ ವೇಳೆ ಶಬ್ದ, ಗಲಾಟೆ ಎಂದು ತಪ್ಪಾಗಿ ವ್ಯಾಖ್ಯಾನಿಸಲಾಗುತ್ತದೆ. ಆದರೆ, ಈ ಪ್ರಯೋಗದಲ್ಲಿ ಈ ಸಾಮೂಹಿಕ ಧ್ವನಿಗಳ ನಡುವೆಯೇ ಹುದುಗಿಕೊಂಡಿರುವ ನನ್ನ ಭಾವನಾತ್ಮಕ ಅಭಿವ್ಯಕ್ತಿಯನ್ನು ಆಲಿಸುವ 'ಆಯ್ಕೆಯ ಆಲಿಕೆ'ಯನ್ನು (ಸೆಲೆಕ್ಟಿವ್ ಲಿಸನಿಂಗ್) ನಾನು ಆರಿಸಿಕೊಂಡಿದ್ದೇನೆ'.

ಹಾಡುಗಾರಿಕೆ ಮಾತ್ರವಲ್ಲದೇ ದೃಶ್ಯ ವಾದ್ಯ ವೈಭವವೂ ಇದರಲ್ಲಿ ಸೇರಿಕೊಂಡಿದೆ. ವಿನ್ಯಾಸ ಅಮರದೀಪ್ ಬೆಹಲ್, ವಸ್ತ್ರಾಲಂಕಾರ ಸಾರಾ ಇಪೆನ್. ನಿರ್ದೇಶಕ ಕೆ.ಎಂ. ಚೈತನ್ಯ ಹಿನ್ನೆಲೆಯ ದೃಶ್ಯಗಳನ್ನು ಸಂಯೋಜಿಸಿದ್ದಾರೆ. 2ನೇ ಪುಟಕ್ಕೆ...


ನಾದ ನೇಯ್ಗೆಯ ಮಾಯಾಜಾಲ ಕಲಾವಿದರು


ಬದುಕಿನ ರಹಸ್ಯ ಶೋಧಿಸುವ ಕಥೆಗಳು

ಎಚ್. ದಂಡಪ್ಪ

ಕೃಷ್ಣಮೂರ್ತಿ ಹನೂರು ಅವರು ಕಳೆದ 40 ವರ್ಷಗಳಲ್ಲಿ ಬರೆದ 25 ಕಥೆಗಳು 'ದೇವ ಮೂಲೆಯ ಮಳೆ' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟವಾಗಿವೆ. ಸಣ್ಣ ಕಥೆಯು 'ಅಲ್ಪಜೀವಿಗಳ ಮಹಾಕಾವ್ಯ' ಎಂಬ ಮಾತಿದೆ. ಮನುಷ್ಯನ ಬದುಕಿನ ಪರಿಸರದ ಯಾವುದೋ ಒಂದು ಘಟನೆಯನ್ನೋ ತುಣುಕನ್ನೋ ಕೇಂದ್ರವಾಗಿಸಿಕೊಂಡು, ಅದಕ್ಕೊಂದು ಆಕಾರ ಕೊಡುವುದರ ಮೂಲಕ ಬದುಕಿನ ರಹಸ್ಯವನ್ನು ಶೋಧಿಸುವಂತಹ ಕೆಲಸವನ್ನು ಕಥೆಗಳು ಮಾಡುತ್ತವೆ. ಹನೂರರ ಕಥೆಗಳನ್ನು ಓದಿದಾಗ ಇದು ಸಾಧ್ಯವಾಗಿರುವುದನ್ನು ಗಮನಿಸಬಹುದು.

ಈ ಸಂಕಲನದ ಎಲ್ಲಾ ಕಥೆಗಳ ವಸ್ತು ಬಡತನವೇ ಆಗಿದೆ. ಗ್ರಾಮೀಣ ಪರಿಸರದ ಆವರಣವುಳ್ಳ ಕಥೆಗಳು ಇವು. ಉದಾಹರಣೆಗೆ 'ಗಂಟು' ಎಂಬ ಕಥೆಯನ್ನು ನೋಡಬಹುದು. ಒಂಬತ್ತು ದಿನ ನಡೆಯುವ ಜಾತ್ರೆ. ಇಲ್ಲಿ ಬರುವ ಕಾಟಜ್ಜ, ಸೂರಮ್ಮ ಬಡವರು. ಕಾಟಜ್ಜನು ಬಸವಣ್ಣನೆಂಬ ಎತ್ತಿನೊಂದಿಗೆ ಬಂದಿದ್ದರೆ, ಸೂರಮ್ಮ ಬಳೆ ಮಾರಾಟಕ್ಕೆ ಬಂದಿದ್ದಾಳೆ. ಕಾಟಜ್ಜನು ಮೊಮ್ಮಗ ಸಿದ್ದೋಜಿಯೊಂದಿಗೆ ರಾತ್ರಿ ಆಶ್ರಯ ಪಡೆಯುವುದು ಸೂರಮ್ಮನ ಶೆಡ್ಡಿನ ಮುಂಭಾಗದಲ್ಲಿ. ಸೂರಮ್ಮ ತನ್ನ ಮಗಳು ಶಿವಿಯೊಂದಿಗೆ ಶೆಡ್ಡಿನ ಒಳಗಡೆ ಇರುತ್ತಾಳೆ. ಕೊನೆಯ ದಿನಗಳಲ್ಲಿ ಕಾಟಜ್ಜನ ಹಣದ ಗಂಟು ಕಳವಾಗುತ್ತದೆ. ಜೊತೆಗೆ ಅವನಿಗೆ ಜ್ವರ ಬರುತ್ತದೆ. ಜಾತ್ರೆ ಮುಗಿದರೂ ಸೂರಮ್ಮ ಅಲ್ಲಿಯೇ ಉಳಿದು ಕಾಟಜ್ಜನ ಆರೈಕೆ ಮಾಡುತ್ತಾಳೆ. ಕಳೆದ ಹಣ ಸಿಗುತ್ತದೆ. ಅದರಲ್ಲಿ ಸ್ವಲ್ಪ ಹಣವನ್ನು ಅವನು ಸೂರಮ್ಮನಿಗೆ ಕೊಡುತ್ತಾನೆ. ಆದರೆ ಅವಳು ಅದನ್ನು ನೀರಿಗೆ ಎಸೆಯುತ್ತಾಳೆ. ಉಪಾಧ್ಯಾಯರೊಬ್ಬರ ಸಲಹೆಯ ಮೇರೆಗೆ ಸಿದ್ದೋಜಿ ಮತ್ತು ಶಿವಿ ಶಾಲೆಗೆ ಸೇರಿಕೊಳ್ಳುತ್ತಾರೆ.

ಇದರಲ್ಲಿ ಮಾನವೀಯ ಸಂಬಂಧಗಳ ಸ್ವರೂಪ, ಹಣವೇ ಮುಖ್ಯವಲ್ಲ ಎಂಬ ನಿಲುವು, ಶಿಕ್ಷಣದ ಮಹತ್ವ, ಆ ಮೂಲಕ ಜ್ಞಾನ, ಪ್ರಗತಿ, ಅಭಿವೃದ್ಧಿ ಎಂಬೆಲ್ಲಾ ಹತ್ತು ಹಲವು ವಿಚಾರಗಳು ಓದುಗನಲ್ಲಿ ಮೂಡುತ್ತವೆ. ಕಥೆಯಲ್ಲಿ ಹಲವಾರು ವಿಚಾರಗಳನ್ನು ಒಳಗೊಳ್ಳುವುದು ಅದರ ಆಕೃತಿಯಿಂದ ಮಾತ್ರ ಸಾಧ್ಯ. ಆಕೃತಿಯಲ್ಲಿಯೇ ಎಲ್ಲಾ ವಿಚಾರಗಳು ಸಂಯೋಜನೆಗೊಳ್ಳಲು ಸಾಧ್ಯ.



ಪು: 348 ₹320

ದೇವ ಮೂಲೆಯ ಮಳೆ
ಲೇ: ಕೃಷ್ಣಮೂರ್ತಿ ಹನೂರು
ಪ್ರ: ಪಲ್ಲವ ಪ್ರಕಾಶನ, ಬಳ್ಳಾರಿ
ಸಂ: 8880087235

ಇಲ್ಲಿನ ಕಥೆಗಳೆಲ್ಲವೂ ವಾಸ್ತವಿಕವಾದದ ಹಿನ್ನೆಲೆಯಲ್ಲಿ ರಚನೆಯಾಗಿರುವಂತಹವು. ಲೇಖಕ ಈ ಕಥೆಗಳಲ್ಲಿ ತಾನೊಂದು ಕಣ್ಣಾಗಿ ಬದುಕನ್ನು ವೈಜ್ಞಾನಿಕವಾಗಿ ನೋಡುವ ಕ್ರಮವಿದೆ. ಜೊತೆಗೆ ನೈತಿಕತೆಯೂ ಇರುತ್ತದೆ. ಇಂತಹ ಕಥೆಗಳಲ್ಲಿ ಸಾಮಾನ್ಯವಾಗಿ ಸಾಮಾನ್ಯ ಜನರ ಬದುಕಿಗೆ ಹೆಚ್ಚಿನ ಒತ್ತು ಇರುತ್ತದೆ. ಜೊತೆಗೆ ಮರೆಯಲ್ಲಿ ಇರುವ ಬದುಕಿನ ಸೂಕ್ಷ್ಮಗಳು ಅನಾವರಣಗೊಳ್ಳಲು ಸಾಧ್ಯವಾಗುತ್ತದೆ. ಇಂತಹ ಕಥೆಗಳಲ್ಲಿ ರಸಾನಂದವನ್ನಾಗಲಿ, ಆರ್ದ್ರಗೊಳಿಸುವಿಕೆಯಾಗಲಿ ಇರುವುದಿಲ್ಲ. ಅವು, ಬದುಕಿನ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಮಗ್ಗುಲುಗಳ ಸತ್ಯವಾದ ದರ್ಶನವನ್ನು ಮಾಡಿಸುತ್ತವೆ. ಆದ್ದರಿಂದಲೇ ಹನೂರರು 'ಇಲ್ಲಿಯ ಕಥನಗಳ ಮೂಲ ಸುಳಿವುಗಳೆಲ್ಲಾ ನಾನು ನನ್ನ ದೀರ್ಘಕಾಲದ ಜನಪದ ಜಗತ್ತಿನ ಸುತ್ತಾಟದಲ್ಲಿ ಕಂಡವು, ಕೇಳಿದವು, ಎದುರಾದವು!' ಎಂದು ಹೇಳುತ್ತಾರೆ. ಹೀಗಾಗಿ ಅನುಭವವನ್ನು ಆದಷ್ಟು ವಸ್ತುನಿಷ್ಠವಾಗಿ ನಿರೂಪಿಸಲು ಸಾಧ್ಯವಾಗಿದೆ.

ವಾಸ್ತವತಾವಾದದ ಹಿನ್ನೆಲೆಯಲ್ಲಿ ಬರೆದ ಕಥೆಗಳಲ್ಲಿ, ಕಾದಂಬರಿಗಳಲ್ಲಿ ಕಲಾತ್ಮಕತೆಯ ಕೊರತೆಯಿರುತ್ತದೆ ಎಂದು ಕೆಲವರು ಹೇಳುವುದುಂಟು. ಆದರೆ ಕನ್ನಡದ ಮಹತ್ವದ ಕಥೆ, ಕಾದಂಬರಿಗಳು ಸೃಷ್ಟಿಯಾಗಿರುವುದು ವಾಸ್ತವತಾವಾದದಲ್ಲಿ ಎಂಬುದನ್ನು ಗಮನಿಸಬೇಕು. ಹನೂರರ ಕಥೆಗಳಲ್ಲಿ ನೈತಿಕತೆ, ಬದುಕಿನ ಬಗೆಗಿನ ನಿಷ್ಠೆ, ಒಂದು ತತ್ವ, ಒಂದು ಕೇಂದ್ರಪ್ರಜ್ಞೆ ಇದ್ದು ಅದು ಒಂದು ಆವರಣದೊಂದಿಗೆ ಸಾವಯವಗೊಂಡು ಕಲಾಕೃತಿಯಾಗಿರುವುದನ್ನು ಗಮನಿಸಬಹುದು. ಬದುಕಿನ ವಿವರಗಳು ಕೇಂದ್ರಪ್ರಜ್ಞೆಯೊಂದಿಗೆ ಐಕ್ಯಗೊಂಡು ಸಾಂಸ್ಕೃತಿಕ ಪರಿಸರವನ್ನು ಕಟ್ಟಿಕೊಟ್ಟಿರುವುದನ್ನು ಕಾಣಬಹುದು.

ಆಧುನಿಕತೆಯ ತತ್ವಗಳಲ್ಲಿ ಅಭಿವೃದ್ಧಿಯೂ ಒಂದು. ಆಧುನಿಕತೆ ಎಂದಾಕ್ಷಣ ಅದರ ಜೊತೆಯಲ್ಲಿ ಪ್ರಗತಿ ಕಾಣಿಸಿಕೊಳ್ಳುತ್ತದೆ. ಈ ಅಭಿವೃದ್ಧಿ ಮತ್ತು ಪ್ರಗತಿ ಎಂದಾಕ್ಷಣ ಕಾಡುಗಳ ನಾಶ, ಪ್ರಕೃತಿಯಲ್ಲಿರುವ ಕಲ್ಲು ಮಣ್ಣು, ಗುಡ್ಡಗಳ ನಾಶ, ಇದರ ಜೊತೆಗೆ ಮಾನವ ಸಮುದಾಯಗಳ ಒಕ್ಕಲೆಬ್ಬಿಸುವಿಕೆ, ಅವರ ಅತಂತ್ರ ಸ್ಥಿತಿಯನ್ನು ಕಾಣಬಹುದು.

ವಿಮರ್ಶೆ

ಇಂತಹ ಬದುಕಿನ ಸ್ವರೂಪವು 'ಮುಂಜಾನೆಯೇ ಸಿಕ್ಕಿದ ಸಿರಿ', 'ಕೈ ತಪ್ಪಿದ ಕುರಿ', 'ಮಾದೇವಿ ಊರು ಬಿಟ್ಟಳು', 'ಬಿದ್ದ ಶಿಕಾರಿ' ಮುಂತಾದ ಕಥೆಗಳಲ್ಲಿದೆ. ಈ ಕಥೆಗಳಲ್ಲಿನ ಮೂಲ ನಿವಾಸಿಗಳ ಅತಂತ್ರ ಬದುಕಿನ ಸ್ಥಿತಿಗತಿಗಳು ಸಾರ್ವತ್ರಿಕ ಸಾಂಕೇತಿಕತೆಯನ್ನು ಪಡೆದುಕೊಂಡಿವೆ. ಕಾಡಿನ ಜನರು ತಮ್ಮ ಮುಗ್ದತೆಯಿಂದ ಆನೆಗಳ ಜಾಗವನ್ನು ದಂತಚೋರರಿಗೆ ತೋರಿಸಿ ತಮ್ಮ ನೆಲೆಗಳನ್ನು ಕಳೆದುಕೊಳ್ಳುವುದರ ವಿವರಗಳು ಕಲಾತ್ಮಕವಾಗಿ ಅಭಿವ್ಯಕ್ತಿ ಪಡೆದಿರುವುದನ್ನು ಕಥೆಯನ್ನು ಓದಿಯೇ ತಿಳಿಯಬೇಕು.

ಹನೂರರು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ತಿರುಗಾಡಿ ಅಲ್ಲಿನ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಪರಿಸ್ಥಿತಿಗಳನ್ನು ಕಂಡವರು. ಸಾಮಾಜಿಕ ಏಣಿಶ್ರೇಣಿಗಳಿಂದ ಉಂಟಾಗಿರುವ ಅಸಮಾನತೆ, ಆರ್ಥಿಕ ಸ್ಥಿತಿಗತಿ ಎಲ್ಲವನ್ನೂ ಕಣ್ಣಾರೆ ಕಂಡಿದ್ದಾರೆ. ಶಿಕ್ಷಣವು ಗ್ರಾಮೀಣ ಮತ್ತು ಆದಿವಾಸಿ ಜನರಿಗೆ ಅತ್ಯಗತ್ಯವೆಂಬುದು ಮನವರಿಕೆಯಾಗಿ ಅವರನ್ನು ತೀವ್ರವಾಗಿ ಕಾಡಿದೆ. ಹೀಗಾಗಿ ಅವರ ಕಥೆಗಳಲ್ಲಿ ಶಿಕ್ಷಣದ ಅಗತ್ಯದ ಬಗ್ಗೆ ಒತ್ತು ಇದೆ.

ಇಲ್ಲಿನ ಬಹಳಷ್ಟು ಕಥೆಗಳಲ್ಲಿ ಅಭಿವೃದ್ಧಿಯ ಸೂತ್ರಗಳು ಇವೆ. 'ದಿನಾಚರಣೆ', 'ಸುವರ್ಣ ಇತಿಹಾಸ', 'ಕಣ್ಣುತೆರೆಸುವುದೆಂದರೆ', 'ಗಂಟು' ಮುಂತಾದ ಕಥೆಗಳು ಶಿಕ್ಷಣದ ಮಹತ್ವ, ಅದರಿಂದುಂಟಾಗುವ ಪ್ರಗತಿ, ಬಡತನ ಮತ್ತು ಅಜ್ಞಾನದಿಂದ ಬದುಕುತ್ತಿರುವವರು ಆಧುನಿಕ ಜಗತ್ತಿಗೆ ಪ್ರವೇಶಿಸಬಹುದಾದ ಸಾಧ್ಯತೆಗಳನ್ನು ಶೋಧಿಸುತ್ತವೆ.

ಜನಪದ ಕಥನಗಳು ಅದರಲ್ಲೂ ಕನ್ನಡ ಮತ್ತು ಭಾರತೀಯ ಇತರ ಭಾಷೆಗಳ ಜನಪದ ಕಥನಗಳ ಉದ್ದೇಶ ಮತ್ತು ಸ್ವರೂಪಗಳ ನಿಕಟ ಪರಿಚಯ ಹನೂರರಿಗೆ ಇರುವುದರಿಂದ, ಇಲ್ಲಿನ ಕಥೆಗಳಲ್ಲಿ ನಿರೂಪಣೆಯ ಕ್ರಮ, ಆಶಯ, ಆಕೃತಿಗಳ ಸಂಬಂಧ ಮುಂತಾದವುಗಳ ಮೇಲೆ ಅದು ಪ್ರಭಾವವನ್ನು ಬೀರಿದೆ.

ಬದುಕಿನ ದರ್ಶನ, ಮನುಷ್ಯನ ಸಮಸ್ಯೆಗಳಿಗೆ ಸಮುದಾಯದ ಪ್ರಯತ್ನದ ಮೂಲಕ ಪರಿಹಾರ ಕಂಡುಕೊಳ್ಳುವುದು, ಬದುಕಿನಲ್ಲಿ ಬರುವ ಸುಖ ದುಃಖಗಳಲ್ಲಿ, ಆಸೆ ನಿರಾಸೆಗಳಲ್ಲಿ ನೈತಿಕತೆಯನ್ನು ಬಿಡದೆ ಮಾನವೀಯ ಸಂಬಂಧಗಳ ಮೂಲಕ ಅವುಗಳನ್ನು ಮುಂದಿನ ಜನಾಂಗಕ್ಕೆ ತಲುಪಿಸುವುದು ಇಲ್ಲಿನ ಕಥೆಗಳ ಬಹುಮುಖ್ಯ ಕಾರ್ಯವಾಗಿದೆ. ನೈತಿಕ ಮೌಲ್ಯ, ಉತ್ತಮವಾದ ಸಮಾನತೆ, ಸಹಬಾಳ್ವೆ, ಸಹೋದರತ್ವವಿರುವ ಸಾಮಾಜಿಕ ವ್ಯವಸ್ಥೆ, ಧಾರ್ಮಿಕ ನಂಬಿಕೆಗಳಿಗೆ ಈ ಕಥೆಗಳು ಒತ್ತಾಸೆ ನೀಡುತ್ತವೆ.

ಬಹುಗುಣರ ಜೀವನಪಯಣ 'ಅಪ್ಪಿಕೋ'

'ಅಪ್ಪಿಕೋ/ಚಿಪ್ಕೋ' ಎಂದಾಕ್ಷಣ ನೆನಪಾಗುವ ವ್ಯಕ್ತಿ ಸುಂದರಲಾಲ್ ಬಹುಗುಣ. ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನಸೆಳೆದ ಈ ಆಂದೋಲನದ ಹಿಂದಿನ ರೂವಾರಿಯ ಹೆಜ್ಜೆಗಳ ಪಡಿಯಚ್ಚೇ ಈ ಕೃತಿ. ಅಮೆರಿಕದ ತತ್ವಶಾಸ್ತ್ರದ ಅಧ್ಯಾಪಕ ಜಾರ್ಜ್ ಜೇಮ್ಸ್ ಅವರು ಬಹುಗುಣರೊಂದಿಗೆ ಒಡನಾಡಿದ ಪ್ರತಿಹೆಜ್ಜೆಯ, ಸಂದರ್ಶಿಸಿದ ದಾಖಲೆ ಇದು.


ಮೇಲುಕೋಟೆಯ ಜನಪದ ಸೇವಾ ಟ್ರಸ್ಟ್‌ನ ಸುರೇಂದ್ರ ಕೌಲಗಿ ಅವರು ಈ ಕೃತಿಯನ್ನು ಕನ್ನಡಕ್ಕೆ ಅನುವಾದ ಮಾಡಲಾರಂಭಿಸಿದವರು. ಅನಾರೋಗ್ಯದ ಕಾರಣ ಸುರೇಂದ್ರ ಅವರ ಅಕಾಲಿಕ ನಿಧನದಿಂದಾಗಿ, ಅನುವಾದ ಕಾರ್ಯವನ್ನು ಸುರೇಂದ್ರ ಅವರ ಮೊಮ್ಮಗನ ಪತ್ನಿ ಅರ್ಚನಾ ಖ್ಯಾಡಿ ಪೂರ್ಣಗೊಳಿಸಿದರು. ಇದು ಅರ್ಚನಾ ಅವರ ಚೊಚ್ಚಲ ಕೃತಿ.

ಕೃತಿಯ ಮೂಲ ಲೇಖಕ ಜಾರ್ಜ್ ಅವರು ಉಲ್ಲೇಖಿಸಿರುವಂತೆ 'ಈ ಪುಸ್ತಕವು ನಿಖರವಾಗಿ ಒಂದು ಆತ್ಮಚರಿತ್ರೆಯಿಲ್ಲ. ಅವರ ಜೀವನದ ಅನೇಕ ವಿವರಗಳನ್ನು ಇಲ್ಲಿ ಪ್ರಸ್ತಾಪಿಸಿಲ್ಲ. ಇದು ಬಹುಗುಣರ ಹೋರಾಟ, ಜೀವನ ತತ್ವ, ಅವರ ಜೀವನದ ಮೇಲಾದ ಪ್ರಭಾವಗಳು ಮತ್ತು ಅವುಗಳು ಇವರ ಪರಿಸರ ತತ್ವವನ್ನು ರೂಪಿಸಿದುದರ ಕುರಿತ ಅಧ್ಯಯನವಾಗಿದೆ'.

ಶಿಮ್ಲಾದಲ್ಲಿರುವ ಭಾರತೀಯ ಉನ್ನತ ವ್ಯಾಸಂಗಗಳ ಸಂಸ್ಥೆಯ ಗ್ರಂಥಾಲಯದಲ್ಲಿ ಭಾರತದಲ್ಲಿನ ಪರಿಸರ ಚಳವಳಿಗಳ ಕುರಿತು ಅಧ್ಯಯನ, ಸಂಶೋಧನ ಮಾಡುತ್ತಿದ್ದ ಜಾರ್ಜ್ ಅವರು ತೆಹ್ರಿಯ ಬಳಿ ಗುಡಿಸಲಲ್ಲಿ ವಾಸವಾಗಿದ್ದ ಬಹುಗುಣ ಅವರನ್ನು ಭೇಟಿಯಾದ ಸಂದರ್ಭದಿಂದ ಕೃತಿ ಆರಂಭಗೊಳ್ಳುತ್ತದೆ. ಎರಡನೇ ಅಧ್ಯಾಯದಲ್ಲಿ ಬಹುಗುಣ ಅವರ ಬಾಲ್ಯದ ಜೀವನ, ಹಿಮಾಲಯದ ಕಾಡುಗಳ ಮೇಲೆ ಹುಟ್ಟಿದ ಪ್ರೀತಿಯ ವಿವರವಿದೆ. ಮೀರಾ ಬೆಹನ್ ಅವರ ಭೇಟಿ, ಚಿಪ್ಕೋ ಆಂದೋಲನ, ತೆಹ್ರಿ ಅಣೆಕಟ್ಟು ನಿರ್ಮಾಣದ ವಿರುದ್ಧದ ಹೋರಾಟದ ಸ್ಥೂಲ ನೋಟ ಇಲ್ಲಿದೆ. ಕೊನೆಯ ಅಧ್ಯಾಯದಲ್ಲಿ ವಿವಿಧ ಆಯಾಮಗಳಿಂದ ಬಹುಗುಣ ಅವರನ್ನು ಲೇಖಕರು ಅರ್ಥೈಸಿಕೊಡುವ ಪ್ರಯತ್ನ ಮಾಡಿದ್ದಾರೆ. ಅವರ ಜೀವನ, ಧರ್ಮ ಹಾಗೂ ಪ್ರಕೃತಿ ತತ್ವ, 'ಬಹುಗುಣ, ಗಾಂಧಿ ಮತ್ತು ಪರಿಸರ', 'ಬಹುಗುಣರು ಮತ್ತು ಭಾರತೀಯ ಆಧ್ಯಾತ್ಮಿಕತೆ' ಎಂಬ ವಿಭಾಗಗಳಲ್ಲಿ ಈ ಬರಹಗಳಿವೆ.

ಒಳನೋಟ

ಮೂಲ ಕೃತಿಯು ಬಹುಗುಣ ಅವರು ಬದುಕಿದ್ದಾಗಲೇ ಹೊರಬಂದಿತ್ತು. ಹೀಗಾಗಿ 2013ರಿಂದ 2021ರವರೆಗಿನ(ಬಹುಗುಣ ಅವರು ನಿಧನರಾದ ವರ್ಷ) ಬಹುಗುಣರ ಜೀವನದ ವಿವರಗಳನ್ನೂ ಈ ಕೃತಿಯಲ್ಲಿ ದಾಖಲಿಸಲಾಗಿದೆ. ಇದನ್ನು ಮೂಲ ಲೇಖಕ ಜಾರ್ಜ್ ಅವರೇ ಬರೆದಿರುವುದು ವಿಶೇಷ. ಕೃತಿಯ ಕೊನೆಯಲ್ಲಿ ಹಿನ್ನುಡಿಯಾಗಿ ಇದನ್ನು ನೀಡಲಾಗಿದೆ. 'ಸುಂದರಲಾಲ್ ಬಹುಗುಣರ ನಿಧನ ಹಿಮಾಲಯದ ಪಾಲಿಗೆ, ಭಾರತದ ಪಾಲಿಗೆ ಮತ್ತು ಜಗತ್ತಿನ ಪಾಲಿಗೆ ಬಹುದೊಡ್ಡ ನಷ್ಟ- ಅವರ ಜೀವನ-ಹೋರಾಟದ ಧ್ವನಿಯು ಮುಂದಿನ ತಲೆಮಾರುಗಳಲ್ಲಿ ಅನುರಣಿಸುತ್ತಲೇ ಇರುತ್ತದೆ' ಎನ್ನುವ ಜಾರ್ಜ್ ಅವರ ಮಾತುಗಳು ಇಡೀ ಕೃತಿಯನ್ನು ಕಟ್ಟಿಕೊಟ್ಟಿವೆ. ಅನುವಾದದ ಭಾಷೆ ಸರಳವಾಗಿದೆ. ಬಹುಗುಣರ ಹೆಜ್ಜೆ ಗುರುತುಗಳ ಛಾಯಾಚಿತ್ರಗಳು ಇದ್ದಿದ್ದರೆ ಓದಿಗೆ ಹೆಚ್ಚು ಪೂರಕವಾಗಿರುತ್ತಿತ್ತು.



ಪು: 320 ₹330

ಅಪ್ಪಿಕೋ
ಸುಂದರಲಾಲ್ ಬಹುಗುಣರ ಬದುಕು, ಹೋರಾಟ ಮತ್ತು ಚಿಂತನೆ
ಮೂಲ: ಜಾರ್ಜ್ ಆಲ್ಫ್ರೆಡ್ ಜೇಮ್ಸ್
ಕನ್ನಡಕ್ಕೆ: ಸುರೇಂದ್ರ ಕೌಲಗಿ, ಅರ್ಚನಾ ಖ್ಯಾಡಿ
ಪ್ರ: ಅಹರ್ನಿಶಿ ಪ್ರಕಾಶನ, ಶಿವಮೊಗ್ಗ
ಸಂ: 9449174662

ಹೊನಲುಗಳ ಸಂಗಮ

1ನೇ ಪುಟದಿಂದ...

'ಯಾವುದೂ ನಿಜವಾಗಿ ಕೊನೆಗೊಳ್ಳುವುದಿಲ್ಲ. ಒಂದು ಕವಿತೆ ಕೂಡ ಪೂರ್ಣ ವಿರಾಮಗಳಿಗಿಂತ ಹೆಚ್ಚು ಅಲ್ಪವಿರಾಮಗಳನ್ನು ಹೊಂದಿದೆ. ಏಕೆಂದರೆ, ಅದು ಎಂದಿಗೂ ಕೊನೆಗೊಳ್ಳುವುದಿಲ್ಲ. ಮತ್ತು ಪ್ರತೀ ಪುಟದ ಬುಡದಲ್ಲಿ, ಭರವಸೆ ಇದೆ. ಪದಗಳು ಹರಿಯುತ್ತಲೇ ಇರುತ್ತವೆ ಮತ್ತು ಅವು ಎಲ್ಲಾ ದಿಕ್ಕುಗಳನ್ನೂ ದಾಟಿ ಮುಂದೆ ಹರಿಯುತ್ತವೆ' ಎನ್ನುತ್ತಾರೆ.

'ಬಳ್ಳಾರಿ 'ಸಂಗಂ' ಕವಿಗೋಷ್ಠಿಯ ಭಾಗವಾಗಲು ನಾನು ಹೆಮ್ಮೆಪಡುತ್ತೇನೆ ಮತ್ತು ಕನ್ನಡ ಭಾಷೆಯಲ್ಲಿ ವಿಶ್ವ ಕವಿಗಳ ಸಂಗಮಕ್ಕಾಗಿ ಈ ಉದಾರ ಜಾಗವನ್ನು ಸೃಷ್ಟಿಸಿದ ಸಂಘಟಕರಿಗೆ ಅತ್ಯಂತ ಕೃತಜ್ಞಳಾಗಿದ್ದೇನೆ. ವಿಭಿನ್ನ ಭಾಷೆ ಮತ್ತು ಸಂಸ್ಕೃತಿಗಳ ಕ್ರಿಯಾತ್ಮಕ ಧ್ವನಿಗಳ ಮೂಲಕ ಸಹಾನುಭೂತಿ, ಜ್ಞಾನೋದಯ ಮತ್ತು ವಿಮೋಚನೆಯ ನಕ್ಷೆ ತಯಾರಿಕೆಗೆ ಅತ್ಯಪೂರ್ವ ಕೊಡುಗೆ ನೀಡುವ ಅರ್ಥಪೂರ್ಣ ಸ್ಥಳವಾಗಿದೆ ಇದು. ಸಂಸ್ಕೃತ ಭಾಷೆಯಲ್ಲಿ 'ಸಂಗಮ್' ಪದದ ಅರ್ಥ ನದಿಗಳ ಸೇರುವ ತಾಣ. ಈ ಸಂಗಂ ಸಮ್ಮೇಳನದಲ್ಲೂ ನಾನು ವಿಶ್ವದ ವಿವಿಧ ಭಾಷೆಯ ಕಾವ್ಯದ ನುಡಿ-ನದಿಗಳ ಭವ್ಯವಾದ ಸಂಗಮವನ್ನು ನಿರೀಕ್ಷಿಸುತ್ತೇನೆ' ಎಂದು ಭಾವುಕರಾಗಿ ಹೇಳುತ್ತಾರೆ.

ಕೊಲಂಬಿಯಾದ ಸ್ಪ್ಯಾನಿಷ್ ಕವಯಿತ್ರಿ ಯೊಹಾನ ಕಾರ್ವಾಲ್, 'ಪ್ರಪಂಚದ ಕವಿಗಳು ಒಂದುಗೂಡುವುದು ಮತ್ತು ಕಾವ್ಯದ ಮೂಲಕವೇ ರಾಜಕೀಯ ಗಡಿರೇಖೆಗಳನ್ನು ಮೀರಲು ಯತ್ನಿಸುವುದು ಬಹಳ ಮುಖ್ಯ. ಭಾರತದಲ್ಲಿ ಜರುಗಲಿರುವ ಈ ವಿಶ್ವಕವಿ ಸಮ್ಮೇಳನದ ಭಾಗವಾಗಿರುವುದು ನನಗೆ ಗೌರವ ಹಾಗೂ ಹೆಮ್ಮೆ. ಈಗಾಗಲೇ ನನ್ನ 'ದೇವಿ ಸಂಪುಟ'ದ ಕವಿತೆಗಳು ಪುರಾತನ ದ್ರಾವಿಡ ಭಾಷೆಯಾದ ಕನ್ನಡದಲ್ಲಿ ಅನುವಾದಗೊಂಡು ಪ್ರಕಟವಾಗಿರುವುದು ನನಗೆ ಮರೆಯಲಾಗದ ಅನುಭವ' ಎಂದು ಖುಷಿಪಡುತ್ತಾರೆ.

ಕಾವ್ಯ ವಿಶ್ವದ ಗಾಯಗಳಿಗೆ ಮುಲಾಮು ಆಗಿ, ನದಿಯಾಗಿ, ಕೈಮರವಾಗಿ, ಆಯಾ ಕಾಲದ ಬಿಕ್ಕಟ್ಟುಗಳಿಗೆ ದನಿಯಾಗಿ, ಆತ್ಮಸಂಗಾತವಾಗಿ, ಹಸಿರನ್ನು ಉಕ್ಕಿಸುತ್ತ, ವಿವೇಕವನ್ನು ವಿಸ್ತರಿಸುತ್ತ ಹಲವು ಹತ್ತು ಪಾತ್ರಗಳನ್ನು ನಿರ್ವಹಿಸುತ್ತಿದೆ. ಕಾವ್ಯ ಎಲ್ಲರಿಗೂ ಬೇಕು. ಎಲ್ಲ ಕಾಲಕ್ಕೂ ಬೇಕು. ನಮ್ಮ ಒಳಗಣ್ಣು ತೆರೆಸುವ, ಪಿಸು ಮಾತುಗಳನ್ನು ಉಸುರುವ, ಒಲವ ಮಧುಬಟ್ಟಲದ ನಶೆಯನ್ನು ಸವರುವ, ರೋಮಾಂಚನವನ್ನು ಉಂಟು ಮಾಡುವ, ಜಗದ ಕೇಡನ್ನು ಕಳೆಯುವ, ಬಂಡಾಯದ ಕೆಂಡದುಂಡೆಯನ್ನು ಕಾರುವ, ಪ್ರತಿಮೆ, ರೂಪಕಗಳ ಸೊಗಸಾದ ಕಾವ್ಯಕ್ಕೆ ಮತ್ತೆ ಮತ್ತೆ ಕಿವಿಯಾಗಬೇಕಿದೆ.

ಈ ಸಮ್ಮೇಳನವಾದರೂ ಅದೇ ಆಶಯದಿಂದ ರೂಪುಗೊಂಡಿದೆ. 'ಸಾಹಿತ್ಯವಾಗಲಿ ಸಂಸ್ಕೃತಿಯಾಗಲಿ ಅಥವಾ ಅಧಿಕಾರವೇ ಆಗಲಿ ವಿಕೇಂದ್ರೀಕರಣಗೊಂಡಾಗಲೇ ಹೊಸ ದನಿ, ಬನಿ ಮೂಡಿ ಬರಲು ಸಾಧ್ಯ. ಕರ್ನಾಟಕದ ಬಹುಪಾಲು ಜಿಲ್ಲೆಗಳಿಂದ ಪಾಲ್ಗೊಳ್ಳುತ್ತಿರುವ ಯುವ ಪ್ರತಿಭೆಗಳೇ ಇದಕ್ಕೆ ಸಾಕ್ಷಿ' ಎನ್ನುತ್ತಾರೆ ಸಮ್ಮೇಳನದ ಸಂಚಾಲಕ ಆರಿಫ್ ರಾಜಾ.

ಅನ್ಯ ಭಾಷೆಗಳ, ಅನ್ಯ ಪ್ರದೇಶಗಳ ಕವಿಗಳನ್ನು ಈ ಸಮ್ಮೇಳನ ಪುಳಕಗೊಳಿಸಿದೆ. 'ನಾನು ಒಮ್ಮೆಯೂ ಕೂಡ ದಕ್ಷಿಣ ಭಾರತಕ್ಕೆ ಬಂದಿಲ್ಲ. ನಮಗೆ ಭಾಷೆಯೆಂದರೆ ಹಿಂದಿ ಅಥವಾ ಇಂಗ್ಲೀಷ್ ಎಂಬಂತಾಗಿದೆ. ನೇಪಾಳಿ ನುಡಿಯಲ್ಲಿ ಕಾವ್ಯ ಬರೆಯುತ್ತಿರುವ ಡಾರ್ಜಿಲಿಂಗ್ ನಿವಾಸಿಯಾದ ನನಗೆ, ಸಾವಿರಾರು ವರುಷಗಳ ಇತಿಹಾಸವಿರುವ ದ್ರಾವಿಡ ಭಾಷೆ ಹಾಗೂ ಸಂಸ್ಕೃತಿಯನ್ನು ಹತ್ತಿರದಿಂದ ನೋಡಬೇಕೆಂಬ ಕುತೂಹಲವಿದೆ. ಕನ್ನಡವೆಂಬ ಭಾಷೆ, ಕಾವ್ಯದಲ್ಲಿ ನುಡಿಗೊಡುವ ಬಗೆಯನ್ನು ಆಲಿಸಬೇಕಿದೆ' ಎನ್ನುತ್ತಾರೆ ನೇಪಾಳಿ ಕವಿ ಮನೋಜ್ ಬೊಗಟಿ.

ಈ ಕವಿ ಸಮ್ಮೇಳನದಲ್ಲಿ ಇಸ್ರೇಲ್, ಇರಾನ್, ಅಲ್ಜೀರಿಯಾ, ಚಿಲಿ, ವೆನೆಜುವೆಲಾ, ಫರೋ ಐಲ್ಯಾಂಡ್, ಕೊಲಂಬಿಯಾ, ಅಮೆರಿಕ, ಪೆರು, ಕೊಸ್ಟರಿಕಾ, ಇಟಲಿ, ಬಾಂಗ್ಲಾದೇಶ, ಲಿಥುವೇನಿಯಾ ಮುಂತಾದ ದೇಶಗಳಿಂದ, ದೇಶದ ವಿವಿಧ ರಾಜ್ಯಗಳಿಂದ, ಕರ್ನಾಟಕದ ವಿವಿಧ ಜಿಲ್ಲೆಗಳಿಂದ, ಬಳ್ಳಾರಿ ಜಿಲ್ಲೆಯ ವಿವಿಧ ಭಾಗಗಳಿಂದ ಬರಲಿರುವ ಕವಿಗಳು ಕಾವ್ಯವಾಚನ ಮಾಡಲಿದ್ದಾರೆ. ವಾಚಿಸಿದ ಕವಿತೆಗಳ ಕುರಿತಂತೆ ಚರ್ಚೆಗಳು ನಡೆಯಲಿವೆ.

'ಇಡೀ ಪ್ರಪಂಚದಾದ್ಯಂತ ಜಾತಿ ವೈಷಮ್ಯ, ಸ್ವಾರ್ಥ ಪಾರಮ್ಯವನ್ನು ಮೆರೆದಿರುವ ಪ್ರಸ್ತುತ ಸನ್ನಿವೇಶದಲ್ಲಿ ಕಾವ್ಯ ಮಾತ್ರ ಅಸ್ವಸ್ಥ ಸಮಾಜವನ್ನು ಸ್ವಸ್ಥಗೊಳಿಸುವ ಜೀವ ಸೆಲೆಯಾಗಬಹುದು. ಪ್ರಾಚೀನ ಕಾಲದಿಂದಲೂ ಸಾಹಿತ್ಯ ಮತ್ತು ಸಾಂಸ್ಕೃತಿಕ ಹಿರಿಮೆಯನ್ನು ಮೆರೆದ ಬಳ್ಳಾರಿಯಂಥ ನಗರದಲ್ಲಿ ವಿಶ್ವದ ಶ್ರೇಷ್ಠ ಕವಿಗಳು ಒಂದೆಡೆ ಸೇರುತ್ತಿರುವುದು ಸಂಭ್ರಮದ ಸಂಗತಿಯಾಗಿದೆ' ಎನ್ನುತ್ತಾರೆ ತೆಲುಗು ಕವಿ ಗೊರಟಿ ವೆಂಕಣ್ಣ.

ಹೊಸ ತಲೆಮಾರಿನ ಕವಿಗಳನ್ನು ಹೆಚ್ಚು ಒಳಗು ಮಾಡಿಕೊಂಡಿರುವ, ಕನ್ನಡ ಕಾವ್ಯ ಕ್ಷೇತ್ರದಲ್ಲೇ ಹೊಸ ಮೈಲುಗಲ್ಲು ಅಗಲಿರುವ 'ಸಂಗಂ ವಿಶ್ವ ಕವಿ ಸಮ್ಮೇಳನ'ವನ್ನು ಬಳ್ಳಾರಿಯ ಅರಿವು ಸಂಸ್ಥೆಯು ಆಯೋಜಿಸಿದೆ. ಸಂಗಂನ ಆಳದ ಆಶಯವೆಂದರೆ ಎಲ್ಲ ದೇಶಗಳ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕೂಡಿಸುವ ಜತೆಗೆ, ಜಗತ್ತಿನ ಕಾವ್ಯ ಪರಂಪರೆಗೆ ಕನ್ನಡ ನೆಲದ ಮೂಲಕ ತೆರೆದುಕೊಳ್ಳುವುದೇ ಆಗಿದೆ. ಈ ಎಲ್ಲ ಹಂಬಲಗಳಿಗೆ ಬಳ್ಳಾರಿಯ ವಿಶ್ವ ಕವಿ ಸಮ್ಮೇಳನ ನಾಂದಿಯಾಗಿ ಹೊಸ ಭಾಷ್ಯ ಬರೆಯಲಿದೆ.

ನೇಯ್ಗೆಯ ಮಾಯಾಜಾಲ

1ನೇ ಪುಟದಿಂದ...

ಧ್ವನಿಯನ್ನು ಹೆಣೆಯುವುದು ಅಂದರೇನು? ಅದು ಪರಸ್ಪರ ಹೇಗೆ ಅನುಸಂಧಾನಗೊಳ್ಳುತ್ತದೆ? ಇದು ಎಂದಿನಂತೆ ಜುಗಲ್ ಬಂದಿಯಾಗಿಬಿಡುತ್ತದೆಯೇ? ಅಥವಾ ಕಲಾವಿದರು ತಮ್ಮ ತಮ್ಮ ಸಂಗೀತವನ್ನು ಹರಿಯಬಿಡುತ್ತಾ ಅವುಗಳು ಸಮಾನಾಂತರದಲ್ಲೇ ಸಾಗುವಂತೆ ಮಾಡುತ್ತಾರೆಯೇ? ಕೊನೆಗೆ ಅದರ ನಿರೀಕ್ಷಿತ ಫಲಿತಾಂಶ ಏನು ಇತ್ಯಾದಿ ಪ್ರಶ್ನೆಗಳನ್ನು ರಾಯ್ ಸ್ಟೆನ್ ಅವರ ಮುಂದಿಟ್ಟೆ. ಉತ್ಕೃಷ್ಟ ಕಲಾವಿದನಿಗೆ ತನ್ನ ಕಲೆಯನ್ನು ವಿವರಿಸಬೇಕಾದ ಅನಿವಾರ್ಯತೆ ಒದಗಿದಾಗ ಉಂಟಾಗುವ ಮುಜುಗರದಂತಾಗಿ ಜೋರಾಗಿ ನಕ್ಕು ಅವರು ಅರ್ಥ ಮಾಡಿಸಲು ಯತ್ನಿಸಿದರು.

'ಈ ಧ್ವನಿ ವಿನ್ಯಾಸ ದ್ರುಪದ್ ಹಾಡುಗಾರಿಕೆಯ ರಚನೆಯ ಬಂಧವನ್ನು ಅನುಸರಿಸಿದೆ. ಅಥವಾ ಪಾಶ್ಚಾತ್ಯ ಆರ್ಕೆಸ್ಟ್ರಾದ ರಚನೆ ಅನ್ನಿ. ಇಡೀ ಬ್ರಹ್ಮಾಂಡವೇ ನಿಶ್ಚಿತ ರಚನೆಯ ಲಯವನ್ನು ಹೊಂದಿದೆ. ಈ ಪ್ರಖ್ಯಾತ ಕಲಾವಿದರು ಈ ಬಂಧದೊಳಗೆ ತೊಡಗಿಸಿಕೊಂಡೇ ತಮ್ಮ ಸಂಗೀತ ಯಾನವನ್ನು ಅನಾವರಣಗೊಳಿಸುತ್ತಾರೆ. ಇವೆಲ್ಲವೂ ಪ್ರಧಾನವಾಗಿ ಬೇಹಾಗ್, ಮೇಘ್ ಮತ್ತು ಖಾಮಾಚ್ ರಾಗಗಳಲ್ಲಿ ಅಭಿವ್ಯಕ್ತಿಗೊಳ್ಳುತ್ತಾ, ಹೆಣೆಯುತ್ತಾ ಬೇರೊಂದು ಜಗತ್ತನ್ನು ಸೃಷ್ಟಿಸುತ್ತವೆ. ಅದರ ಫಲಿತಾಂಶ ಪೂರ್ವ ನಿರ್ಧಾರಿತವಲ್ಲ. ಏನು ಘಟಿಸಬೇಕೋ ಅದು ಘಟಿಸುತ್ತದೆ!' ಎನ್ನುತ್ತಾರೆ ರಾಯ್ ಸ್ಟೆನ್.

ಇದೊಂದು ಟಿಪಿಕಲ್ ರಾಯ್ ಸ್ಟೆನ್ ಹೇಳಿಕೆ. ಅಭಿನೇತರು, ಸಂಗೀತಗಾರರು, ಸರ್ಕಸ್ಸಿನ ಆಕ್ರೋಬ್ಯಾಟ್‌ಗಳು, ಜಗ್ಲರ್‌ಗಳು, ಐಂದ್ರಜಾಲದವರು, ಗೊಂಬೆಯಾಟದವರು ಹೀಗೆ ಹಲವು ಹತ್ತು ವಿಶಿಷ್ಟ ರೀತಿಯ ಜನರ ಜೊತೆ ಕೆಲಸ ಮಾಡುವ ರಾಯ್ ಸದಾ ಹೊಸತರ ಹುಡುಕಾಟದಲ್ಲಿರುತ್ತಾರೆ. ಈ ಬಾರಿ ಧ್ವನಿಗಳನ್ನು ಹೆಣೆಯುವ ಮಾಂತ್ರಿಕತೆಗೆ ಕೈ ಹಾಕಿದ್ದಾರೆ. ಪ್ರತಿಯೊಬ್ಬ ಕಲಾವಿದರ ಹಿಂದೆ ಎಲ್‌ಇಡಿ ಸ್ಕ್ರೀನ್ ಇದ್ದು ಅದರಲ್ಲಿ ಆಯಾ ಕಲಾವಿದರ ವೈಯಕ್ತಿಕ ಸಂಗೀತ ಯಾನದ ಪರಿಚಯವಾಗುತ್ತದೆ. ಜೊತೆಗೇ ಮತ್ತೊಂದು ಭಾವನಾತ್ಮಕ ಟ್ರ್ಯಾಕ್ ಕೂಡಾ ಇದ್ದು, ಅವರ ಬದುಕಿನ ಹಲವು ಹಂತಗಳ ಹುಡುಕಾಟ ಹೋರಾಟಗಳನ್ನು ಪರಿಚಯಿಸುತ್ತದೆ.

ರಾಯ್ ಸ್ಟೆನ್‌ಗೆ ಜುಗಲ್ ಬಂದಿಯಲ್ಲಿ ನಂಬಿಕೆ ಇಲ್ಲ. 'ಧ್ವನಿಗಳು ಪರಸ್ಪರ ಅನುರಣನಗೊಳ್ಳುತ್ತವೆ – ರೆಸೊನೆನ್ಸ್ - ಆಗುತ್ತದೆ ಅನ್ನಿ. ವ್ಯೋಮದಲ್ಲಿ ಶಬ್ದಗಳು ಹೀಗೆ ಸದಾ ಅನುರಣನಗೊಳ್ಳುತ್ತಿರುತ್ತವೆ. ಅದು ಸದಾ ನಮ್ಮ ಮನದ ಹಿನ್ನೆಲೆಯಲ್ಲಿ ಕೆಲಸ ಮಾಡುತ್ತಿರುತ್ತದೆ. ನಮ್ಮ ಪ್ರಯೋಗದಲ್ಲಿ ಏನಾಗುತ್ತದೆ, ಹೇಗಾಗುತ್ತದೆ ಅನ್ನುವುದು ನನಗೆ ಖಚಿತವಾಗಿ ಗೊತ್ತಿಲ್ಲ. ಅದನ್ನು ಪ್ರಯತ್ನಪೂರ್ವಕವಾಗಿ ಸಾಧಿಸಲು ನಾವು ಯತ್ನಿಸುವುದಿಲ್ಲ. ಅದರ ಕಡೆಗೆ ಸಾಗಲು ಬಯಸುತ್ತೇವೆ, ನಿಜ. ಹೀಗೆಲ್ಲಾ ಹೇಳಿ ನಾನು ಇದನ್ನು ಬಹಳ ಬೌದ್ಧಿಕಗೊಳಿಸುತ್ತಿದ್ದೇನೆ ಅಂದುಕೊಳ್ಳಬೇಡಿ. ಅದೊಂದು ಉತ್ತರವೂ ಅಲ್ಲ, ಅಥವಾ ಹೇಳಿಕೆಯೂ ಅಲ್ಲ. ಇದು ಪ್ರಧಾನವಾಗಿ ಅನುಭವಕ್ಕೆ ಸಂಬಂಧಪಟ್ಟ ಸಂಗತಿ. ಆ ನಾದದ ಮಾಂತ್ರಿಕತೆಗೆ ಒಡ್ಡಿಕೊಳ್ಳಬೇಕಾದರೆ ವೀವಿಂಗ್ ವಾಯ್ಸಸ್‌ನ ಸಾಕ್ಷಾತ್ ಅನುಭವ ಆಗಬೇಕು ಎನ್ನುವುದು ಅವರ ಅಭಿಪ್ರಾಯ.

'ವೀವಿಂಗ್ ವಾಯ್ಸಸ್' ಇದೇ 21 ಮತ್ತು 22ರಂದು ಬೆಂಗಳೂರಿನ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ಪ್ರದರ್ಶನಗೊಳ್ಳುತ್ತಿದೆ. ದೇಶದಾದ್ಯಂತ ನೇಕಾರರ ಜೊತೆ ತೊಡಗಿಕೊಂಡಿರುವ ತನ್ವೈರ ಸಂಸ್ಥೆಯ ಸಹಯೋಗವಿದೆ.

ಶಬ್ದನಾದ

ಕನ್ನಡದಲ್ಲಿ 'ಶಬ್ದ' ಎನ್ನುವುದೊಂದು ಅನುಭವ. ಬಸವಣ್ಣ 'ಲಿಂಗವಿಲ್ಲದೆ ನುಡಿವವರ ಶಬ್ದ ಸೂತಕ ಕೇಳಲಾಗದು' ಎನ್ನುತ್ತಾನೆ. ಅಲ್ಲಮಪ್ರಭು 'ಶಬ್ದ ಸೂತಕವೆಂಬರು ಶಬ್ದಕ್ಕೆ ಸೂತಕವುಂಟೇ' ಎಂದು ಪ್ರಶ್ನಿಸುತ್ತಾನೆ.

ಇಂಗ್ಲಿಷಿನ 'ವಾಯ್ಸ್' ಎನ್ನುವ ಪದಕ್ಕೆ ಕನ್ನಡದಲ್ಲಿ ಧ್ವನಿ, ಶಬ್ದ, ಸದ್ದು, ಉಚ್ಚಾರ ಇತ್ಯಾದಿ ಸಂವಾದಿ ಪದಗಳನ್ನು ಬಳಸುತ್ತೇವೆ. ಆದರೆ, 'ಧ್ವನಿ' ಎನ್ನುವುದಕ್ಕೆ ಹಲವಾರು ಅರ್ಥಗಳಿವೆ. ಆನಂದವರ್ಧನ 'ಧ್ವನ್ಯಾಲೋಕ'ದಲ್ಲಿ ಧ್ವನಿಯೇ ಕಾವ್ಯದ ಆತ್ಮ ಎಂದು ಹೇಳಿದ್ದಾನೆ. 'ಬಳಕೆಯ ವ್ಯವಹಾರದಲ್ಲಿ ಕಾಣದ, ಶಾಸ್ತ್ರದ ಪಂಕ್ತಿಗಳಲ್ಲಿ ದೊರೆಯದ, ಆದರೆ ಉತ್ತಮ ಕಾವ್ಯದಲ್ಲಿ ತಪ್ಪದೆ ಇದ್ದೇ ತೀರುವ ಅರ್ಥವಾವುದೋ ಅದೇ ಕಾವ್ಯದ ತಿರುಳು' ಎಂದು ವ್ಯಾಖ್ಯಾನಿಸಿ ಅದಕ್ಕೆ 'ಧ್ವನಿ' ಎನ್ನುವ ಅಪೂರ್ವ, ಅನ್ವರ್ಥಕ ಹೆಸರನ್ನೂ ಕೊಟ್ಟ. ಇದು ಕಾವ್ಯದಲ್ಲಿ ಮಾತ್ರವಲ್ಲದೆ ಸಂಗೀತದಲ್ಲೂ ಕಾರ್ಯಾಚರಿಸುತ್ತದೆ.

ಪೂರ್ವದಲ್ಲಿ 'ವಾಕ್' ಎನ್ನುವ ಪರಿಕಲ್ಪನೆ ಬಳಕೆಯಲ್ಲಿತ್ತು. 'ವಾಕ್' ಅಂದರೆ 'ಮಾತು' ಎನ್ನುವ ಅರ್ಥವೂ ಇದೆ. ಋಗ್ವೇದದ ಹತ್ತನೆಯ ಮಂಡಲದಲ್ಲಿನ 125ನೇ ಸೂಕ್ತ 'ವಾಕ್ ಸೂಕ್ತ'ದಲ್ಲಿ, ವಾಕ್ ಜಡಕ್ಕೆ ಚಲನೆಯನ್ನು ಕೊಡುವ ಸೃಷ್ಟಿಯ ಚಲನಶೀಲತೆಯ ಸ್ವರೂಪಿಣಿ, ಅಂತಃಸತ್ವ ಎಂದು ಹೇಳಿದೆ. ಹಾಗೆಯೇ ಪ್ರಣವ-ಓಂಕಾರ–ಮೂಲಾಕ್ಷರ-ಬೀಜಾಕ್ಷರ ಮಂತ್ರವ್ಯೋಮದಲ್ಲಿ ಹುಟ್ಟಿದ್ದು ಎನ್ನುತ್ತಾರೆ. ಇದರಿಂದಲೇ ಮೊದಲು 'ವರ್ಣ'ಗಳು ಹುಟ್ಟಿದ್ದು. ನಂತರ ಮಾತು, ಧ್ವನಿ, ಉಚ್ಚಾರ. ಕೊನೆಗೆ ಸಂಗೀತ ಒಂದು ಪರಾಕಾಷ್ಠೆ ಸ್ಥಿತಿ.


ಮೊದಲ ಓದು

ಪೂಚಂತೇ ಗ್ರೇಟ್ ಯಾಕಂತ ಗೊತ್ತೇ?

'ಜೀವಲೋಕದ ಕಡೆ ಕನ್ನಡಿಗರ ಕಣ್ಣು ತೆರೆಸಿದ ಕತೆಗಾರ' – ಇದು ಕೃತಿಯ ಲೇಖಕ ನಾಗೇಶ ಹೆಗಡೆ ಅವರು ಪೂರ್ಣಚಂದ್ರ ತೇಜಸ್ವಿ ಅವರನ್ನು ಕಂಡ ಬಗೆ. ಒಂದರ್ಥದಲ್ಲಿ 'ಪೂಚಂತೇ' ಅವರು ಗ್ರೇಟ್ ಯಾಕಂತ ಸೂಕ್ಷ್ಮವಾಗಿ, ಸ್ಥೂಲವಾಗಿ ವಿವರಿಸುವ ಕೃತಿ ಇದು.

ತೇಜಸ್ವಿ ಅವರ ಜನ್ಮದಿನದಂದು (ಸೆ.8) ಬೆಂಗಳೂರಿನ ಚಿತ್ರಕಲಾ ಪರಿಷತ್ತಿನ ಆಶ್ರಯದಲ್ಲಿ ನಡೆಯುತ್ತಿದ್ದ ಸಂಸ್ಮರಣೆಯ ಕಾರ್ಯಕ್ರಮಕ್ಕೆಂದು ವರ್ಷವರ್ಷವೂ ನಾಗೇಶ ಹೆಗಡೆ ಅವರು ಕಿರುಹೊತ್ತಿಗೆ ಬರೆಯುತ್ತಿದ್ದರು. ಜೊತೆಯಲ್ಲಿ ತೇಜಸ್ವಿ ಅವರ ಕೃತಿಗಳಲ್ಲಿದ್ದ ಜೀವಲೋಕವನ್ನು ಮತ್ತಷ್ಟು ವಿಸ್ತರಿಸುವ ಕೆಲಸ ಅಲ್ಲಾಗಿತ್ತು. ಈ ಹೊತ್ತಿಗೆಯ ಆರು ಲೇಖನಗಳು ಈ ಕಿರುಹೊತ್ತಿಗೆಯಲ್ಲಿ ಪ್ರಕಟವಾಗಿದ್ದವು. ಜೊತೆಗೆ ತೇಜಸ್ವಿ ಅವರ ಕುರಿತು ಅಥವಾ ಉಲ್ಲೇಖಿಸಿ ನೀಡಿದ ಉಪನ್ಯಾಸಗಳು ಹಾಗೂ ಫೇಸ್‌ಬುಕ್‌ನಲ್ಲಿ ಬರೆದ ಲೇಖನಗಳು, ಪ್ರಜಾವಾಣಿಯಲ್ಲಿ ಪ್ರಕಟವಾದ ಲೇಖನಗಳನ್ನು ಜೊತೆಗೂಡಿಸಿ ಈ ಕೃತಿಯನ್ನು ಹೊರತರಲಾಗಿದೆ.

'ತೇಜಸ್ವಿ ಒಬ್ಬ ಸಾಹಿತಿಯಾಗಿ, ಫೋಟೊಗ್ರಾಫರ್ ಆಗಿ, ಮಲೆನಾಡಿನ ಹಸಿರಿನ ಲೋಕದ ವಕ್ತಾರರಾಗಿ ನಮ್ಮೆಲ್ಲರ ಕನ್ನಡ ಪ್ರಜ್ಞೆಯನ್ನು ಅದೆಷ್ಟು ಶ್ರೀಮಂತಗೊಳಿಸಿದ್ದಾರೆ ಅನ್ನೋದನ್ನು ಕೆಲವು ಉದಾಹರಣೆ ಮೂಲಕ ಹೇಳುವುದಷ್ಟೇ ನನ್ನ ಕೆಲಸ' ಎಂದು ಕೃತಿಯ ಸಾರಾಂಶವನ್ನು ನಾಗೇಶ ಹೆಗಡೆ ಅವರು ಆರಂಭದಲ್ಲೇ ನೀಡಿದ್ದಾರೆ. 'ಕಾಡಲ್ಲಿ ಸಿಕ್ಕ ಬೀಡಾ' ಎಂಬ ಒಂದು ಕುತೂಹಲಕಾರಿ ಘಟನೆಯೊಂದರಿಂದ ತೇಜಸ್ವಿ ಅವರ ವ್ಯಕ್ತಿತ್ವ, ಆಸಕ್ತಿಯನ್ನು ಬಿಚ್ಚಿಡುತ್ತಾ ಸಾಗುವ ಲೇಖಕರು, 'ಸೈಬರ್ ಕಣಿವೆಯಲ್ಲಿ ತೇಜಸ್ವಿ' ಎಂಬ ಎರಡನೇ ಅಧ್ಯಾಯದಲ್ಲಿ ತೇಜಸ್ವಿ ಅವರೊಂದಿಗೆ ಒಡನಾಡಿದ ನೆನಪುಗಳನ್ನು ಮೆಲುಕು ಹಾಕಿದ್ದಾರೆ. ಪುಟ ತಿರುವುತ್ತಾ ಆರ್ಕಿಡ್, ಪಕ್ಷಿ, ಜೇಡಗಳ ಲೋಕದಲ್ಲೊಂದು ಸುತ್ತು ಹೊಡೆದು ಬರಬಹುದು. ಇತ್ತೀಚೆಗೆ ಸಾಮಾಜಿಕ ಮಾಧ್ಯಮಗಳಲ್ಲಿ ಜನರು ಕಣ್ತುಂಬಿಕೊಂಡ ಕುರಿಂಜಿ ಲೋಕದ ವಿಸ್ತೃತ ವಿವರಣೆಯೂ ಇಲ್ಲಿದೆ. ಕೃತಿಯ ಭಾಷೆ ಸರಳ, ಆಕರ್ಷಕ. ಇಲ್ಲಿನ ರೇಖಾಚಿತ್ರದ ಹಿಂದಿನ ಕೈಗಳೂ ನಾಗೇಶ ಹೆಗಡೆ ಅವರದ್ದೇ ಎನ್ನುವುದನ್ನು ಗಮನಿಸಬೇಕು.



ಪು: 140 ₹150

ಪೂಚಂತೇ ಗ್ರೇಟ್ ಯಾಕಂತೆ?
ಲೇ: ನಾಗೇಶ ಹೆಗಡೆ
ಪ್ರ: ಭೂಮಿಬುಕ್ಸ್, ಬೆಂಗಳೂರು
ಸಂ: 9449177628

ಸಮುದಾಯ ಧ್ವನಿಗಳ ಗುಚ್ಛರೂಪ

ಸಮುದಾಯ ಸಂಘಟನೆಯ ಜಾಥಾಗಳ ಸಂದರ್ಭದಲ್ಲಿ, ಜನ ಜಾಗೃತಿ ಕಾರ್ಯಕ್ರಮಗಳಲ್ಲಿ ಪ್ರದರ್ಶಿಸಲೆಂದೇ ಬರೆದ ನಾಟಕಗಳ ಗುಚ್ಛ ಈ ಕೃತಿಯಲ್ಲಿದೆ. ಕೆಲವು ನಾಟಕಗಳು ಚಳವಳಿಯ ಭಾಗವಾಗಿದ್ದವು. ಇನ್ನೂ ಕೆಲವು ಹಲವು ವೇದಿಕೆಗಳಲ್ಲಿ ಪ್ರದರ್ಶನಗೊಂಡಿವೆ. ದೂರದರ್ಶನದಲ್ಲಿ ಪ್ರಸಾರಗೊಂಡಿವೆ.

ರೈತರ ಆತ್ಮಹತ್ಯೆಯ ವಸ್ತುವನ್ನಾಧರಿಸಿದ ಸಾಲದ ಹೆಣ, ಹಿಂದುಳಿದ ವರ್ಗಗಳ ಮಹಿಳೆಯರಿಗೆ ರಾಜಕೀಯ ಅಧಿಕಾರ ಬಂದಾಗ ಸಮಾಜ ಅವರನ್ನು ನೋಡುವ ಪರಿ ವಿವರಿಸುವ 'ಹನುಮಾಯಣ', 'ರಂಪಾಯಣ', 'ಹನುಮನಾಯಕ'... ಇಂಥ ನಾಟಕಗಳು ವಿಮರ್ಶಕರು ಮತ್ತು ಪ್ರೇಕ್ಷಕರ ಮೆಚ್ಚುಗೆಗೂ ಪಾತ್ರವಾಗಿವೆ.

12 ನಾಟಕಗಳು ಈ ಕೃತಿಯಲ್ಲಿವೆ. ಕನಿಷ್ಠ ಸಂಖ್ಯೆಯ ಪಾತ್ರಗಳು, ಸರಳ ಸಂಭಾಷಣೆಗಳು ಒಂದೊಂದು ನಾಟಕವನ್ನು ಸುಲಭವಾಗಿ ಪ್ರಯೋಗಕ್ಕಿಳಿಸುವಂತೆ ಮಾಡುತ್ತವೆ. ದೇಸಿ ಸೊಗಡಿನ ಹಾಡುಗಳು ಇವೆ. ರಂಜನೆ, ಅಲ್ಲಲ್ಲಿ ಆಕ್ರೋಶ, ಸಂದೇಶ ಎಲ್ಲವನ್ನೂ ಮಿಳಿತಗೊಳಿಸಿ ಹೊಸೆದ ನಾಟಕಗಳಿವು. ಬೀದಿ ನಾಟಕ ಆಸಕ್ತರಿಗೆ, ರಂಗಕರ್ಮಿಗಳಿಗೆ, ವಿದ್ಯಾರ್ಥಿಗಳಿಗೆ ಉಪಯೋಗವಾಗಬಲ್ಲ ಕೃತಿ.



ಪು: 280 ₹200

ಸಬರದ ಬೀದಿ ನಾಟಕಗಳು
ಲೇ: ಡಾ.ಬಸವರಾಜ ಸಬರದ
ಪ್ರ: ಚಾರುಮತಿ ಪ್ರಕಾಶನ
ಸಂ: 9886619220

ದೇಹ ಮನಸ್ಸಿನಾಚೆಗಿನ ಆರೋಗ್ಯ ಗುಟ್ಟು

ಆರೋಗ್ಯದ ಚಿಂತನೆಯೆಂದರೆ ಕೇವಲ ದೇಹ ರಚನೆ ಮತ್ತು ಅದರ ಕಾರ್ಯಗಳಷ್ಟೇ ಅಲ್ಲ. ಅದರಾಚೆಗಿನ ವಿಸ್ತಾರವನ್ನೂ ಹೊಂದಿದೆ. ನಮ್ಮ ಮಾನಸಿಕ, ಸಾಮಾಜಿಕ ಸ್ಥಿತಿಗತಿಗಳು, ಬದಲಾದ ಜೀವನ ಶೈಲಿ, ಉದ್ಯೋಗ, ಒತ್ತಡಗಳು ಎಲ್ಲವೂ ಒಟ್ಟಾಗಿ ನಮ್ಮ ಆರೋಗ್ಯದ ಮೇಲೆ ಉಂಟು ಮಾಡುವ ಪರಿಣಾಮಗಳನ್ನು ಆಪ್ತ ಸಮಾಲೋಚನೆಯ ರೀತಿಯಲ್ಲಿ ಹೇಳುತ್ತಾ ಹೋಗಿದೆ ಈ ಕೃತಿ.

ಕೇವಲ ಆರೋಗ್ಯದ ಸಲಹೆಯ ಪುಸ್ತಕ ಇದಲ್ಲ. ನಮ್ಮ ವರ್ತನೆ, ಆಲೋಚನಾ ಕ್ರಮಗಳ ಮೇಲೂ ಬೆಳಕು ಚೆಲ್ಲಿದೆ. ಸಕಾರಾತ್ಮಕ ಆಲೋಚನೆ ಮತ್ತು ಕ್ರಿಯೆಗಳ ಸಲಹೆ ಮಾಡಿದೆ. ಅಷ್ಟೇ ಅಲ್ಲ, ವೈದ್ಯ ವೃತ್ತಿಯ ನೈತಿಕ ಮೌಲ್ಯಗಳನ್ನೂ (ಅಧ್ಯಾಯ 4) ಚರ್ಚಿಸಿದೆ. ಜೀವನ ಮೌಲ್ಯಗಳ ಬಗ್ಗೆಯೂ ಮಾತನಾಡಿದೆ. ಹಾಗಾಗಿ ಪುಸ್ತಕ ವ್ಯಕ್ತಿತ್ವ ವಿಕಸನದ ಅಂಶಗಳನ್ನೂ ಒಳಗೊಂಡಿದೆ. 35 ಅಧ್ಯಾಯಗಳಲ್ಲಿ ಮನುಷ್ಯನ ಬದುಕಿನ ವಿವಿಧ ಮಜಲುಗಳಲ್ಲಿ ಎದುರಾಗುವ ಸನ್ನಿವೇಶಗಳು, ಅವುಗಳನ್ನು ಅವಕಾಶಗಳನ್ನಾಗಿಸುವ ಪರಿ, ಜೀವನೋತ್ಸಾಹ, ಹಾಸ್ಯ ಪ್ರಜ್ಞೆ... ಇತ್ಯಾದಿಗಳ ಕುರಿತು ಮಾತನಾಡಿದೆ. ಹಲವು ಚಿಂತಕರ ಉಲ್ಲೇಖಗಳು, ಉದಾಹರಣೆಗಳು ಲೇಖನಗಳ ತೂಕ ವೃದ್ಧಿಸಿವೆ. ಲೇಖಕರ ಜೀವನಾನುಭವದ ಮೂಸೆಯಲ್ಲಿ ಹೊರಬಂದ ಲೇಖನ ಗುಚ್ಛ ಎನ್ನಬಹುದು.




ಪು: 152 ₹175

ಆರೋಗ್ಯ
ಲೇ: ಡಾ.ಪಿ.ಎಸ್. ಶಂಕರ್
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಸಂ. 9448110034

ಒಡನಾಟಗಳ ವಿಟಮಿನ್ 'ಡಿ'

ಸುದೀರ್ಘ ಬದುಕಿನಲ್ಲಿ ತಮ್ಮ ಒಡನಾಟಕ್ಕೆ ಬಂದ ಹಿರಿಕಿರಿಯ ಮಿತ್ರರ ವ್ಯಕ್ತಿತ್ವಗಳ ದಾಖಲೆ ಈ ಕೃತಿಯಲ್ಲಿದೆ. ಅವಿಭಜಿತ ದಕ್ಷಿಣ ಕನ್ನಡ ಹಾಗೂ ರಾಜ್ಯದ ವಿವಿಧ ಭಾಗಗಳ ಆಯ್ದ ವ್ಯಕ್ತಿಗಳ ವ್ಯಕ್ತಿತ್ವವನ್ನು ಹಾಗೂ ವೈಯಕ್ತಿಕ ಸ್ನೇಹವನ್ನು ದಾಖಲಿಸಿಕೊಟ್ಟಿದ್ದಾರೆ ಲೇಖಕ ಡಾ.ನಾ. ಮೊಗಸಾಲೆ. ಲೇಖಕರೊಂದಿಗಿನ ಒಡನಾಟ ಅನ್ನುವುದಕ್ಕಿಂತಲೂ ಆಯಾ ವ್ಯಕ್ತಿಗಳ ಬಗ್ಗೆ ತಿಳಿದುಕೊಳ್ಳುವ ಕುತೂಹಲ ಇರುವವರು ಓದಬಹುದಾದ ಕೃತಿ. ಈಗ ಇರುವವರು, ಆಗಿ ಹೋದವರು, ಅಪರೂಪದ ವ್ಯಕ್ತಿಗಳು, ಅಷ್ಟಾಗಿ ಪರಿಚಯಗೊಳ್ಳದವರು, ಸತ್ಕಾರ್ಯಗಳ ಹಿಂದಿದ್ದ ಉದ್ಯಮಿ ದಾನಿಗಳು... ಹೀಗೆ ಹಲವು ವ್ಯಕ್ತಿತ್ವಗಳ ಪರಿಚಯ ಇಲ್ಲಿದೆ.

ವಿವಿಧ ಅಭಿನಂದನಾ ಗ್ರಂಥ ಅಥವಾ ಸಂಸ್ಮರಣಾ ಗ್ರಂಥಗಳಿಗೆ ಬರೆದ ಲೇಖನಗಳನ್ನು ಒಟ್ಟಾಗಿಸಿ 'ಹೂ ಬಿಸಿಲಿನ ಕೆಳಗೆ' ಇಟ್ಟಿದ್ದಾರೆ. ಬರಹಗಳಲ್ಲಿ ಮೊಗಸಾಲೆಯವರ ಎಂದಿನ ಲವಲವಿಕೆ, ತಾಜಾತನ ಇದೆ. ಲೇಖಕರ ಹಿರಿ ಕಿರಿಯ ಮಿತ್ರರ ಒಡನಾಟದ ಹೂಬಿಸಿಲಿನಿಂದ ವಿಟಮಿನ್ 'ಡಿ' ಸಿಕ್ಕಿದೆ. ಆ ಬೆಚ್ಚನೆಯ ಸುಖದ ಅನುಭವವನ್ನು ಮತ್ತೆ ಮನಸ್ಸಿನ ಅಂಗಳಕ್ಕೆ ತಂದುಕೊಳ್ಳುವ ಪ್ರಯತ್ನವಿದು ಎಂದು ಅವರೇ ಹೇಳಿಕೊಂಡಿದ್ದಾರೆ. ಒಟ್ಟು 49 ವ್ಯಕ್ತಿಗಳ ವ್ಯಕ್ತಿ ಸಂಸ್ಕೃತಿ ಪರಿಚಯವಿದೆ.



ಪು: 424 ₹450

ಹೂ ಬಿಸಿಲಿನ ಕೆಳಗೆ
ಲೇ: ಡಾ.ನಾ. ಮೊಗಸಾಲೆ
ಪ್ರ: ಸ್ನೇಹಾ ಎಂಟರ್‌ಪ್ರೈಸಸ್, ಬೆಂಗಳೂರು
ಸಂ: 98450 62549



ಹಿಮದಡಿ ಹೂತ ಕನಸು...



ಗೆಳೆಯನೊಂದಿಗೆ ಡಾ.ರಕ್ಷಿತ್ ಕೆ.(ಕೆಂಪು ಧಿರಿಸಿನಲ್ಲಿ). ದ್ರೌಪದಿ ಕಾ ಡಾಂಡಾ ಪರ್ವತದಲ್ಲಿ ಸಂಭವಿಸಿದ ಹಿಮಪಾತದಲ್ಲಿ ಸಿಲುಕಿದ್ದವರ ರಕ್ಷಣಾ ಕಾರ್ಯಾಚರಣೆಯ ನೋಟ

ಉತ್ತರಾಖಂಡದ ಹಿಮಪರ್ವತದಲ್ಲಿ ಆರೋಹಣ ಮಾಡುತ್ತಿದ್ದ ಕನ್ನಡದ ಇಬ್ಬರು ತರುಣರು ಹಿಮಪಾತದಲ್ಲಿ ಸಾವನ್ನಪ್ಪಿದ್ದು ಸಾಹಸಪ್ರಿಯರಲ್ಲಿ ನೋವುಂಟು ಮಾಡಿದೆ

ಶರತ್ ಹೆಗ್ಡೆ

ಅಬ್ಬಾ! ಸುಮಾರು ಆರು ಸಾವಿರ ಮೀಟರ್‌ಗಳವರೆಗೆ ಏರಲು ಹೊರಟವರು... ಇಳಿಯಲಾರದಷ್ಟು ಎತ್ತರಕ್ಕೇ ಹೋಗಿಬಿಟ್ಟರಲ್ಲ... ಬೆಂಗಳೂರಿನ ಪರ್ವತಾರೋಹಿಗಳ ಮನಸ್ಸಿನಲ್ಲಿ ಈ ಮಾತು ವಿಷಾದದ ನಿಟ್ಟುಸಿರಿನೊಂದಿಗೆ ಹೊರಬರುತ್ತದೆ.

ಅಕ್ಟೋಬರ್ 4ರಂದು ಉತ್ತರಾಖಂಡದ ಉತ್ತರಕಾಶಿ-ಗಂಗೋತ್ರಿ ಬೆಟ್ಟದ ಸಾಲಿನ ದ್ರೌಪದಿ ಕಾ ಡಾಂಡಾ-2 ಶಿಖರ ಸಮೀಪ ಹಿಮಪಾತದಲ್ಲಿ ಸಿಲುಕಿ ಮೃತಪಟ್ಟ 17 ಪರ್ವತಾರೋಹಿಗಳ ಪೈಕಿ ಬೆಂಗಳೂರಿನ ಇಬ್ಬರು ಇದ್ದರು. ಇಲ್ಲಿನ ಶ್ರೀನಗರದ ಡಾ.ರಕ್ಷಿತ್ ಕೆ. ಮತ್ತು ವೈಟ್‌ಫೀಲ್ಡ್‌ನ ವಿಕ್ರಂ ಎಂ. ಅವರನ್ನು ಬೆಂಗಳೂರಿನ ಸಾಹಸಯಾತ್ರಿಗಳು, ಸಂಘಟಕರು ನೆನಪಿಸಿಕೊಳ್ಳುತ್ತಲೇ ಇದ್ದಾರೆ.

ಡಾ.ರಕ್ಷಿತ್ ಓದಿದ್ದು ಎಂ.ಬಿ.ಬಿ.ಎಸ್. ಹವ್ಯಾಸವಾಗಿ ಆಯ್ದುಕೊಂಡದ್ದು ಪರ್ವತಾರೋಹಣ. ಅದಕ್ಕಾಗಿಯೇ ಆರ್ಟ್ ಆಫ್ ಟ್ರಾವೆಲಿಂಗ್ ಎಂಬ ಪ್ರವಾಸಿ ಕಂಪನಿಯನ್ನು ಕಟ್ಟಿದರು. ನೂರಾರು ಜನರಿಗೆ ಕಾಶ್ಮೀರ, ಹಿಮಾಲಯದ ತಪ್ಪಲು, ಪಶ್ಚಿಮ ಘಟ್ಟದ ಸರಣಿಯನ್ನು ಪರಿಚಯಿಸಿದರು. ಅರಣ್ಯಗಳಲ್ಲಿ ಹುಲಿಗಳ ಹೆಜ್ಜೆ ಜಾಡು ಹಿಡಿಯುವುದು ಹೇಗೆ ಎಂಬುದರ ಗುರುವಾದರು. ಹೀಗೆ ರಕ್ಷಿತ್ ಯಾತ್ರೆ ಒಂದೆರಡಲ್ಲ. ಒಂದರ ಹಿಂದೆ ಒಂದು ದಾಖಲೆಯನ್ನು ಮುರಿಯುವುದರಲ್ಲೇ ಅವರಿಗೆ ಖುಷಿ.

ರಕ್ಷಿತ್ ಅವರ ಸಹೋದರ ಋತ್ವಿಕ್ ಅವರನ್ನು ಮಾತಿಗೆಳೆದಾಗ ಸ್ಮೃತಿಪಟಲ ಅಣ್ಣನ ಗಾಥ ನೆನಪಿನತ್ತ ಹೊರಳಿತು.

‘ಚಿಕ್ಕವರಿದ್ದಾಗ ಸಣ್ಣ ಪುಟ್ಟ ಕಿತ್ತಾಟಗಳು ಇದ್ದದ್ದೇ. ಬೆಳೆದಂತೆ ಒಳ್ಳೆಯ ಸ್ನೇಹಿತರಂತೆ ಇದ್ದೆವು. ನನಗೂ ಅಣ್ಣನಿಗೂ ಸುಮಾರು ಮೂರೂವರೆ ವರ್ಷಗಳ ಅಂತರ. ನಮ್ಮಿಬ್ಬರ ಸ್ನೇಹ ವಲಯಗಳು ಒಂದೇ ಆಗಿದ್ದವು. ಒಟ್ಟಿಗೇ ಸೇರುತ್ತಿದ್ದೆವು. ಶಾಲೆಯಲ್ಲಿ ಆತ ಶಿಕ್ಷಕರಿಗೆ ತುಂಬಾ ಹತ್ತಿರವಾಗಿದ್ದ. ಅರಬಿಂದೋ ಶಾಲೆಯ ಪ್ರಾಂಶುಪಾಲರೂ ನಿಸರ್ಗ ಪ್ರೇಮಿ. ಹೀಗೆ ಮೇಷ್ಟ್ರುಗಳ ಜೊತೆ ಅವನ ಪ್ರಕೃತಿ ಯಾನ ಇತ್ತು. ಶಿಕ್ಷಣ ಮುಗಿದ ಮೇಲಂತೂ ಮನೆಯಲ್ಲಿದ್ದದ್ದೇ ಕಡಿಮೆ. ನಾಲ್ಕು ತಿಂಗಳು ಊರಿಗೆ ಬಂದರೂ ಅವನ ತಿರುಗಾಟವೆಲ್ಲ ಪಶ್ಚಿಮ ಘಟ್ಟಗಳ ಸಾಲಿನಲ್ಲಿ ಇರುತ್ತಿತ್ತು. ನನ್ನನ್ನೂ ಹಲವಾರು ಚಾರಣಗಳಿಗೆ ಆತ ಕರೆದೊಯ್ದಿದ್ದ. ಸೆಪ್ಟೆಂಬರ್ 25ರಂದು ನಾನೂ ಅವನೂ ವಿಡಿಯೊ ಕಾಲ್ ಮೂಲಕ ಮಾತನಾಡಿದ್ದೆವು. ಪರಸ್ಪರ ಯೋಗಕ್ಷೇಮ ವಿಚಾರಿಸಿದ್ದೆವು. ಮುಂದೆ ನಡೆದಿದ್ದನ್ನು ಇನ್ನೂ ಅರಗಿಸಿಕೊಳ್ಳಲು ಆಗುತ್ತಿಲ್ಲ. ಎಲ್ಲವೂ ಅನಿರೀಕ್ಷಿತ...’ ಋತ್ವಿಕ್ ಮೌನಕ್ಕೆ ಜಾರಿದರು.

ರಕ್ಷಿತ್ ಅವರ ಆಪ್ತ ಒಡನಾಡಿ ಪುರುಷೋತ್ತಮ್ ಕೂಡಾ ನೆನಪಿನ ಬುತ್ತಿ ತೆರೆದಿಟ್ಟರು. ‘ಹೈಸ್ಕೂಲ್ ದಿನಗಳಿಂದಲೇ ನಾವು ಪರಿಚಿತರು. ಬಳಿಕ ಸಮಾನ ಆಸಕ್ತಿಯ ಕಾರಣದಿಂದ ಆತ್ಮೀಯರಾದೆವು. ದ್ವಿತೀಯ ಪಿಯು ಆದ ಕೂಡಲೇ (2016) ಅವನ ಹೊರಾಂಗಣ ಚಟುವಟಿಕೆಗಳು ಜೋರಾಗಿದ್ದವು. ಸ್ಥಳೀಯ ಪ್ರವಾಸಗಳನ್ನು ಆಯೋಜಿಸುತ್ತಿದ್ದ. ಶಿವಮೊಗ್ಗ, ಚಿಕ್ಕಮಗಳೂರು... ಇಲ್ಲೆಲ್ಲ ಓಡಾಡುತ್ತಲೇ ಇದ್ದ’ ಎಂದು ನೆನಪಿಸಿಕೊಂಡರು.

‘ದೇಶದ ವಿವಿಧೆಡೆ ಜನರನ್ನು ಸೇರಿಸಿದ. ಅದ್ಭುತವಾದ ತಂಡ ಕಟ್ಟಿದ. ಸ್ಪಿಕಿ ಕಣಿವೆ, ಲಡಾಖ್‌ಗೆಲ್ಲ ಪ್ರವಾಸಿಗರನ್ನು ಕರೆದೊಯ್ದ. ನಾನೂ ಅವನ ಜೊತೆ ಎವರೆಸ್ಟ್ ಬೇಸ್ ಕ್ಯಾಂಪ್‌ಗೆ ಸುಮಾರು 200 ಕಿಲೋಮೀಟರ್ ಯಾತ್ರೆ ಮಾಡಿದ್ದೆ. ಎವರೆಸ್ಟ್ ಬೇಸ್ ಅನ್ನು ಅತ್ಯಂತ ಕಡಿಮೆ ಅವಧಿಯಲ್ಲಿ ತಲುಪಿ ಬಂದ ದಾಖಲೆಯನ್ನು ಮುರಿಯಬೇಕಿತ್ತು. ಅದಕ್ಕಾಗಿಯೇ ಪರ್ವತಾರೋಹಣಕ್ಕೆ ಸಂಬಂಧಿಸಿ ಅಡ್ವಾನ್ಸ್ಡ್ ಕೋರ್ಸ್ ಮುಗಿಸಿದ್ದ. ದಾಖಲೆಯನ್ನೂ ಮುರಿದ. 8K ಎಕ್ಸ್‌ಪೆಡಿಷನ್ಸ್ ಅನ್ನುವ ಸಂಸ್ಥೆ ರಕ್ಷಿತ್‌ನ ಚಾರಣ ಸಾಹಸದ ದಾಖಲೆ ಮಾಡಿದೆ. ಮತ್ತೂ ಕಲಿಯಬೇಕು ಎನ್ನುವ ಹಂಬಲವೇ ಅವನನ್ನು ನೆಹರೂ ಪರ್ವತಾರೋಹಣ ಸಂಸ್ಥೆಯನ್ನು ಸೇರುವಂತೆ ಮಾಡಿತು. ತರಬೇತಿಯ ಅಂತ್ಯ ಹೀಗಾಗಿಬಿಟ್ಟಿತು...’ ಎಂದು ಮರುಗಿದರು.

‘ಕಳೆದ ಜುಲೈನಲ್ಲಿ ಪರ್ವತಾರೋಹಣ ಸಂಬಂಧಿಸಿ ಅಲ್ಪಾವಧಿ ಕೋರ್ಸ್‌ಗೆ ಹೋದ. ಇದೇ ಅವಧಿಯಲ್ಲಿ ಕಾಶ್ಮೀರದ ಲಾಲ್ ಚೌಕದಲ್ಲಿ ರಾಷ್ಟ್ರಧ್ವಜ ಹಾರಿಸುವ ಕಾರ್ಯಕ್ರಮದ ಆಯೋಜಕರಲ್ಲಿ ಒಬ್ಬನಾಗಿದ್ದ. ಮಕ್ಕಳ ಶಿಬಿರಗಳನ್ನು ಸಾಕಷ್ಟು ಹಮ್ಮಿಕೊಂಡಿದ್ದ. ಹಾಗೆ ನೋಡಿದರೆ ಮಕ್ಕಳ ಜೊತೆಗೇ ಹೆಚ್ಚು ಬೆರೆಯುತ್ತಿದ್ದ. ಒಟ್ಟಿನಲ್ಲಿ ಅದ್ಯಾಕೋ ಬೆಟ್ಟ, ಗುಡ್ಡ, ಹಿಮಾಲಯ, ನಮ್ಮ ದೇಶದ ಶಿರಭಾಗ ಅವನಿಗೆ ಅತ್ಯಂತ ಪ್ರೀತಿಯ ಜಾಗ... ಅಲ್ಲೇ ಶಾಶ್ವತವಾಗಿ ನೆಲೆಯಾದನೇ... ನಮ್ಮಿಂದ ಇಲ್ಲವಾಗಿ...’ ಪುರುಷೋತ್ತಮ್ ಮಾತು ಮುಗಿಸಿದರು.

ವಿಕ್ರಂ ಎಂ. ಅವರ ಸಹೋದರ ವಿವೇಕ್, ಅಣ್ಣನ ನೆನಪನ್ನು ತೆರೆದಿಟ್ಟರು.

‘ಅಣ್ಣ ಹೆಚ್ಚು ನೋಡುತ್ತಿದ್ದದ್ದು ಡಿಸ್ಕವರಿ, ಆ್ಯನಿಮಲ್ ಪ್ಲಾನೆಟ್, ಟ್ರಾವೆಲ್ ಆ್ಯಂಡ್ ಲಿವಿಂಗ್‌ನಂತಹ ಚಾನೆಲ್‌ಗಳನ್ನು. ಆತ ಓದಿದ್ದು ಮೆಕ್ಯಾನಿಕಲ್ ಎಂಜಿನಿಯರಿಂಗ್. ಮುಂದಿನ ವರ್ಷ ಮದುವೆಗೂ ಸಿದ್ಧತೆ ನಡೆದಿತ್ತು. ಕಂಪನಿಯೊಂದರಲ್ಲಿ ಉದ್ಯೋಗಿಯೂ ಆಗಿದ್ದ. ಜೊತೆಗೆ ಪುಟ್ಟದೊಂದು ಸ್ವಂತ ಉದ್ಯಮವನ್ನೂ ನಡೆಸುತ್ತಿದ್ದ. ಹೂಡಿಕೆ, ಹಣಕಾಸು ಇತ್ಯಾದಿ ಕ್ಷೇತ್ರಗಳಲ್ಲೂ ಜ್ಞಾನ ಇತ್ತು. ಮಾತುಕತೆಗಳೂ ಈ ಕ್ಷೇತ್ರದತ್ತಲೇ ಇರುತ್ತಿದ್ದವು. ನಾವು ಆಗಾಗ ಪುಟ್ಟ ಚಾರಣ ಮಾಡುತ್ತಿದ್ದೆವು. ನಿಸರ್ಗ ಪ್ರದೇಶಗಳಿಗೆ ಭೇಟಿ ಕೊಡುತ್ತಿದ್ದೆವು. ಈಗ ಅವನನ್ನು ಎಷ್ಟು ಕಳೆದುಕೊಂಡಿದ್ದೇವೆ ಎಂದು ಶಬ್ದಗಳಲ್ಲಿ ಹೇಳಲಾಗದು’ ಎಂದು ಬೇಸರಿಸಿದರು.

‘ಲೇಹ್, ಲಡಾಖ್‌ನಂತಹ ಪ್ರದೇಶಗಳಲ್ಲಿ ಅಣ್ಣನ ಯಾನ ಹೆಚ್ಚು ಇರುತ್ತಿತ್ತು. ಬೈಕ್‌ನಲ್ಲೇ ಓಡಾಟ ಹೆಚ್ಚು. ಇಲ್ಲಿಯೂ ತಿಂಗಳಿಗೊಮ್ಮೆ ಅಥವಾ ಮೂರು ತಿಂಗಳಿಗೊಮ್ಮೆ ಬೈಕ್ ರೈಡಿಂಗ್ ಅಥವಾ ಕಾರಿನಲ್ಲಿ ಸಾಹಸ ಯಾತ್ರೆ ಮಾಡುತ್ತಿದ್ದೆವು. ರಿಸ್ಕ್ ತೆಗೆದುಕೊಳ್ಳಲು ಹಿಂಜರಿಯುತ್ತಿರಲಿಲ್ಲ’ ಎಂದು ಹೆಮ್ಮೆಯಿಂದ ಹೇಳಿದರೆ ಅದರ ಹಿಂದೆ ಅಣ್ಣನ ಅಗಲಿಕೆಯ ನೋವೂ ಇತ್ತು.

ಅಪ್ಪ ಖಾಸಗಿ ಕಂಪನಿಯ ನಿವೃತ್ತ ಉದ್ಯೋಗಿ. ಅಮ್ಮ ಸರ್ಕಾರಿ ಶಾಲಾ ಶಿಕ್ಷಕಿ. ಇಬ್ಬರ ಮನಸ್ಸಲ್ಲೂ ನೋವು ಮಡುಗಟ್ಟಿದೆ. ಮಾತು ಹೊರಡದಂತಾಗಿದೆ.

ಅಪಾಯದ ಯಾತ್ರೆ

‘ಚಾರಣ ಯಾವತ್ತೂ ಅಪಾಯವನ್ನು ಎದುರಿಸುತ್ತಲೇ ಹೋಗುವ ಯಾತ್ರೆ. ಇದನ್ನು ತರಬೇತಿ ಹಂತದಲ್ಲೇ ಹೇಳಿಕೊಡುತ್ತೇವೆ. ಆದರೆ ನಿಸರ್ಗದ ಎದುರು ನಾವೇನೂ ಮಾಡಲಾಗದು. ಎಲ್ಲಾ ಸುರಕ್ಷತಾ ಕ್ರಮಗಳಿದ್ದರೂ ಹಿಮದ ಅಗಾಧತೆಯ ಮುಂದೆ ಕೆಲವೊಮ್ಮೆ ಅವುಗಳೇನೂ ರಕ್ಷಿಸಲಾರವು’ ಎಂದು ಕರ್ನಾಟಕ ಪರ್ವತಾರೋಹಣ ಸಂಸ್ಥೆಯ ಉಪಾಧ್ಯಕ್ಷ ಲೋಕೇಶ್ ಹೇಳಿದರು.

‘ಪರ್ವತಾರೋಹಿಗಳನ್ನು ಕಳೆದುಕೊಂಡಾಗ ತುಂಬಾ ನೋವೆನಿಸುತ್ತದೆ. ಇದರಲ್ಲಿ ಯಾರನ್ನೂ ಹೊಣೆಯಾಗಿಸಲು ಅಸಾಧ್ಯ’ ಎಂದು ಅವರು ಬೇಸರಿಸಿದರು.

ಕೋವಿಡ್ ನಂತರದ ಬದಲಾವಣೆ

‘ರಕ್ಷಿತ್ ಅವರ ಪರ್ವತಾರೋಹಣ ಅತ್ಯಂತ ವೃತ್ತಿಪರ ಸಂಸ್ಥೆಯ ನೇತೃತ್ವದಲ್ಲಿ ನಡೆಸಲಾಗಿತ್ತು. ಒಟ್ಟಿನಲ್ಲಿ ಅದೃಷ್ಟ ಕೈಕೊಟ್ಟಿತ್ತು ಎನ್ನಬೇಕೇ... ತಿಳಿಯುತ್ತಿಲ್ಲ’ ಎಂದರು ಮೈಸೂರಿನ ಪರ್ವತಾರೋಹಿ, ಸಾಹಸ ಯಾತ್ರೆಯ ಆಯೋಜಕ ಟೈಗರ್ ಸೋಳಂಕಿ.

ಈ ನಡುವೆ ಕೋವಿಡ್ ನಂತರದ ಕುತೂಹಲಕಾರಿ ಬೆಳವಣಿಗೆಯನ್ನು ಅವರು ತೆರೆದಿಟ್ಟರು.

‘ಕೋವಿಡ್ ಕಾಲದಲ್ಲಿ ಮುಚ್ಚಿಹೋದ ಅನೇಕ ಜಿಮ್ನಾಸ್ಟಿಕ್ ಸಂಸ್ಥೆಗಳು ಸಾಹಸ ಯಾತ್ರೆ/ ಚಾರಣ/ ಪರ್ವತಾರೋಹಣ ಶುರು ಮಾಡಿದವು. ಈಗ ಬೆಂಗಳೂರೊಂದರಲ್ಲೇ ಸುಮಾರು 1,200ಕ್ಕೂ ಹೆಚ್ಚು ಪರ್ವತಾರೋಹಣ ಸಂಸ್ಥೆಗಳಿವೆ. ಒಂದೆರಡು ಬಾರಿ ಪ್ರವಾಸ ಹೋಗಿ ಬಂದವರೂ ಇಂಥ ಏಜೆನ್ಸಿಗಳನ್ನು ನಡೆಸುತ್ತಿದ್ದಾರೆ. ಇವುಗಳಲ್ಲಿ ಬೆರಳೆಣಿಕೆಯಷ್ಟು ಮಾತ್ರ ನೋಂದಾಯಿತ, ವೃತ್ತಿಪರ ಸಂಸ್ಥೆಗಳಿವೆ. ಉಳಿದವು ಅವುಗಳ ಪಾಡಿಗೆ ಇಂಥ ಯಾತ್ರೆ ಹಮ್ಮಿಕೊಳ್ಳುತ್ತಿವೆ. ಏನಾದರೂ ಅನಾಹುತಗಳಾದಾಗಲಷ್ಟೇ ಸಂಸ್ಥೆಯ ವಾಸ್ತವ ಹೊರಬರುತ್ತದೆ’ ಎಂದು ಹೇಳಿದರು.

‘ನೊಂದವರಿಗೆ ಯಾವ ರಕ್ಷಣೆಯೂ ಇಲ್ಲಿರುವುದಿಲ್ಲ. ಹಿಮಪಾತದಿಂದ ಸೈನಿಕರ ಸಾವು ಸಂಭವಿಸುತ್ತಲೇ ಇರುತ್ತದೆ. ಅಷ್ಟಾಗಿ ಸುದ್ದಿಯಾಗುವುದಿಲ್ಲ. ಬೇರೆಯವರು ಹೋದಾಗಲಷ್ಟೇ ಇವು ಸುದ್ದಿಯಾಗಿ ಅಪಾಯದ ಅಗಾಧತೆ ಅರಿವಾಗುತ್ತದೆ. ಪರ್ವತಾರೋಹಣ ಯಾವತ್ತೂ ಆತಂಕಕಾರಿಯೇ. ರಿಸ್ಕ್ ಎಲ್ಲ ಹಂತಗಳಲ್ಲೂ ಇರುತ್ತದೆ. ಹೀಗಾಗಿ ತುಂಬಾ ಲೆಕ್ಕಾಚಾರದ ಹೆಜ್ಜೆ ಇಡಬೇಕಾಗುತ್ತದೆ’ ಎಂದರು ಅವರು.

ಎಲ್ಲಿದೆ ದ್ರೌಪದಿ ಕಾ ಡಾಂಡಾ?

ದ್ರೌಪದಿ ಕಾ ಡಾಂಡಾ ಎಂದು ಕರೆಯಲಾಗುವ ಈ ಪ್ರದೇಶ ಹಿಮಾಲಯ ಸರಣಿಯ ಗಂಗೋತ್ರಿ ಬೆಟ್ಟಗಳ ಸಾಲಿನಲ್ಲಿ ಬರುವ ಪರ್ವತ ಶಿಖರ. ಉತ್ತರಾಖಂಡ ರಾಜ್ಯಕ್ಕೆ ಇದು ಸೇರಿದೆ. ಮಹಾಭಾರತದ ದ್ರೌಪದಿಯಿಂದ ಈ ಸರಣಿಗೆ ದ್ರೌಪದಿಡಾಂಡಾ ಎಂಬ ಹೆಸರು ಬಂದಿದೆ ಎನ್ನಲಾಗುತ್ತದೆ. ಶಿಖರವು 5,670 ಮೀಟರ್‌ಗಳಷ್ಟು ಎತ್ತರವಿದೆ. ಹಿಮ ಪ್ರಮಾಣದ ಮೇಲೆ ಈ ಎತ್ತರದಲ್ಲಿ ವ್ಯತ್ಯಾಸಗಳಾಗುತ್ತವೆ ಎನ್ನುತ್ತಾರೆ ಪರ್ವತಾರೋಹಿಗಳು.



ವಿಕ್ರಂ ಎಂ.

ಬೆನ್ನತ್ತಿದ ಬೆರಳು...

1ನೇ ಪುಟದಿಂದ...

‘ನಿಮ್ಮ ಗುರುಗಳು ಎಲ್ಲಿರ್ತಾರೆ, ನಿಮ್ಮ ಹೃದಯದಲ್ಲಿ ಯಾವಾಗ್ಲೂ ಇರ್ತಾರೆಯೇ’ ಅಂತ ಯಾರೋ ಕೇಳಿದರು. ‘ಹೃದಯದಲ್ಲಿ ಗೊತ್ತಿಲ್ಲರೀ, ನನ್ನ ಈ ಮೂರು ಬೆರಳಿನಲ್ಲಿ ಇರತಾರೆ’ ಅಂದೆ. ನಾ ನುಡಿಸಬೇಕಿದ್ದರೆ ಅವರು ಈ ಮೂರು ಬೆರಳಿನಲ್ಲಿ ಇರತಾರೆ. ನಾ ಛಲೋ ಬಾರಿಸಿದರೆ ಅಲ್ಲೇ ಇರತಾರೆ. ಕೆಟ್ಟು ಹೋಯಿತು ಅಂದರೆ ಎದ್ದು ಹೋಗಿರತಾರೆ, ಅಷ್ಟೆ. ಅಲ್ಲಾ ರಖಾ ಅವರ ಮೂರನೆಯ ಮಗ ಇದೇ ಥರ ಅವರ ಅಪ್ಪನ ನೆನಪಿನಲ್ಲಿ ಬರೆದಿದ್ದ ‘ಮೇರೆ ಉಂಗಲಿಯೋ ಮೇಂ ಖುದ್ ಕೋ ರಖಾ ಹೈ ಅಲ್ಲಾ’ ಅಂತ. ಒಳ್ಳೆಯ ಹಾಡು.

ಒಂದು ನದಿ ಉಗಮವಾಗಬೇಕಿದ್ದರೆ ತುಂಬ ಚಿಕ್ಕದಾಗಿರುತ್ತೆ, ಆದರೆ ಮುಂದೆ ಹರೀತಾ ಹರೀತಾ ದೊಡ್ಡದಾಗುತ್ತದೆ. ಕಾವೇರಿ ಉಗಮ ನೋಡಿ, ಚೊಂಬಿನಷ್ಟು ನೀರು ಇರುತ್ತೆ. ಆದರೆ ಮುಂದೆ ಶ್ರೀರಂಗಂನಲ್ಲಿ ಹ್ಯಾಗೆ ದೊಡ್ಡದಾಗಿದೆ. ಹಾಗೆ ರಾಗ ಸೌಖ್ಯದ ಬೇರೆ ಬೇರೆ ಪಕಳೆಗಳು ಸಿಗುತಾ ಹೋಗುತವೆ. ಇದು ದೇಹವೂ ಬೆರೆತುಕೊಂಡ ನಾನ್‌ವರ್ಬಲ್ ಸೌಖ್ಯ. ರಾಗದ ನಡೆ, ಓಟ, ತಾಳದ ನಡೆ, ಅದರ ಒಕ್ಕಣೆ ಇಂಥವುಗಳಿಂದ ತೃಪ್ತಿ, ಸುಖ ಒದಗುತ್ತದೆ. ಸೂರ್ಯಾಸ್ತ ನೋಡಿದಾಗ ಆಹಾ ಎನ್ನಿಸುವ ಭಾವನೆ ತುಂಬಿಕೊಳ್ಳುತ್ತದೆಯಲ್ಲ, ಹಾಗೆ.

ಒಂದಿಷ್ಟು ರಾಗಗಳ ಗುಚ್ಛ ನನ್ನ ಜೊತೆಗೆ ಇರುತ್ತದೆ. ಬೆಳಗ್ಗೆ ಏಳ್ತಾನೆ ಒಂದು ರಾಗ ಗುನಗುನಿಸ್ತಾ ಇರತೀನಿ. ಏನೋ ಒಂದು ರೀತಿಯಲ್ಲಿ ಭಾವನೆಗಳು ಸ್ಥೂಲ ಕೂಡಿ ಬರೋದು, ಮಕ್ಕಳಿಗೆ ಆಗುವಂತೆ, ವಿವರಿಸಲು ಆಗುವುದಿಲ್ಲ. ಇಂಥದ್ದೇ ಕಾರಣ ಅಂತಿಲ್ಲ. ಯಾವುದೋ ಕಾರಣಕ್ಕೆ ಮನಸ್ಸಿನಲ್ಲಿ ಆ ರಾಗ ಬೆಳಗ್ಗೆಯೇ ಮೂಡಿರುತ್ತೆ, ಅದನ್ನೇ ಮಾಡು ಅಂತ ಮುಂದೆ ತಳ್ತಾ ಇರುತ್ತದೆ. ರಿಯಾಜಿನಲ್ಲಿ ಅದನ್ನೇ ಅಭ್ಯಾಸ ಮಾಡ್ತೀನಿ.

ಒಮ್ಮೊಮ್ಮೆ ಹಾಡಿಕೊಂಡಾಗ ತೃಪ್ತಿಕರವಾಗಿರುತ್ತದೆ, ಅಂದ್ರೆ ಧ್ವನಿಗೆ, ಗಂಟಲಿಗೆ ಬಂದಿದ್ದು ಬೆರಳಿಗೆ ಬರೋದಿಲ್ಲ. ಆವಾಗ ರಾತ್ರಿಯೆಲ್ಲ ಅದೇ ಮನಸ್ಸಿನಲ್ಲಿ ಕೊರೆಯುತ್ತ ಇರುತ್ತದೆ, ಅದೇ ಚರ್ಚೆ ನಡೀತಾ ಇರುತ್ತೆ ಒಳಗೆ. ಬಹಳ ಹಿಂದೆ ಮುಂಬೈಯಲ್ಲಿದ್ದಾಗ ಚರ್ಚ್ ಗೇಟಿನಲ್ಲಿ ನಮ್ಮ ಗುರುಗಳ ಕಛೇರಿ ಕೇಳಿದೆ, ಅವರು ಬಾರಿಸಿದ ಒಂದು ಚಲನ್ ತುಂಬ ಮನಸ್ಸಿನಲ್ಲಿ ನಾಟಿಬಿಟ್ಟಿತು. ನನ್ನ ಜೊತೆಗೊಬ್ಬರು ಇದ್ದರು, ಅವರನ್ನು ಒಂದು ಕಡೆ ತಲುಪಿಸಬೇಕಿತ್ತು, ತಲುಪಿಸಿ ನನ್ನ ರೂಮಿಗೆ ಹೋದವನೇ ಅದನ್ನು ಪ್ರಯತ್ನಿಸಿದೆ. ಆವಾಗ ಅಷ್ಟು ಬರಲಿಲ್ಲ. ಆದರೆ ಈಗ ಆ ಚಲನ್ ಸುಮಾರಾಗಿ ಹಂಗೇ ಬಾರಿಸ್ತೀನಿ, ಈಗ ಅದು ಬೆರಳಿಗೆ ಬರುತ್ತಿದೆ.

ಇತ್ತೀಚೆಗೆ ನಾನು ಸಾಹಿತ್ಯ, ಅದೂ ಇದೂ ಮಾತು ಎಲ್ಲ ಬಿಟ್ಟುಬಿಟ್ಟಿದ್ದೀನಿ. ಸಮಯ ಕಡಿಮೆ ಇದೆ ನನಗೆ. ಹಿಂಗಾಗಿ ನನ್ನ ಎಲ್ಲ ಶಕ್ತಿಯನ್ನು ಸರೋದ್ ಬಾರಿಸೋದಕ್ಕೆ ಹಾಕ್ತಿದೀನಿ. ಪ್ರತಿದಿನ ನಸುಕಿನಲ್ಲಿ ಏಳುವಾಗಲೇ ಇವತ್ತೇನು ಬಾರಿಸಬೇಕು, ಯಾವ ರಾಗ, ಅದರ ಸಾಧ್ಯತೆಗಳು, ಅಸಾಧ್ಯತೆಗಳು, ಮನಸ್ಸೊಳಗೆ ಚರ್ಚೆ ನಡೆದೇ ಇರುತ್ತೆ.

****

ಅರೆ... ಎಲ್ಲಿಯ 1932 ಮತ್ತು 2022... ನಡುವೆ 90 ವರ್ಷಗಳು ಕಳೆದು ಹೋದವೇ? ಇಲ್ಲ ಕಳೆದಿಲ್ಲ... ಇದು ಸಂಗೀತ, ಗುರುಭಕ್ತಿ, ಸಾಹಿತ್ಯ, ಚಿತ್ರಕಲೆ, ಮೋಟರ್ ಬೈಕ್ ರಿಪೇರಿ, ಕೋಳಿ ಸಾಕಾಣಿಕೆ, ಅಡುಗೆ, ಹತ್ತು ಹಲವು ಆಸಕ್ತಿಗಳು ಒಳಚೈತನ್ಯವನ್ನು ಪೊರೆಯುತ್ತ ಕೂಡಿದ, ಕಟ್ಟಿದ ಬದುಕು.

ಈ ಸರೋದ್ ತಂತಿಗಳಿಗೆ ತುಕ್ಕು ಹಿಡಿಯುವುದಿಲ್ಲ. ಸ್ವರಗಳು ಬೇಸುರಾ ಆಗುವುದಿಲ್ಲ. ಬೆರಳುಗಳು ರಾಗವನ್ನು ಮರೆಯುವುದಿಲ್ಲ. ಬೆರಳಿನ ಲಾಸ್ಯದೊಳು ರಾಗಗಳು ದಣಿಯುವುದಿಲ್ಲ. ಪರಿಚಿತ ರಾಗಗಳೊಳಗೆ ಮತ್ತೇನೋ ತಡಕಾಟ, ಹುಡುಕಾಟ ಮುಗಿಯುವುದಿಲ್ಲ. ಸ್ವರಗಳ ಬೆನ್ನತ್ತಿದ ಮನಸ್ಸಿಗೆ ವಯಸ್ಸಿನ ಹಂಗಿಲ್ಲ. ಮಾತುಗಳು ಚೂಪು ಲಯವನ್ನು ಕಳೆದುಕೊಳ್ಳುವುದಿಲ್ಲ. ಎಂದೋ ಕೇಳಿದ ಕರೀಂಖಾನರ ಗಾಯನವೂ ಜೀವಕೊರಳಿನೊಳು ಉಸಿರುಪಡೆವುದು. ಮತ್ತೆ ಇಲ್ಲೀಗ ಸರೋದ್ ನಾದವನ್ನಾಲಿಸುತ್ತ ಕಾಲವೂ ಮೆತ್ತಗೆ ನಡೆಯುತ್ತಿದೆ... ಸರೋದ್ ನಾದ ಹೀಗೆಯೇ ಬೆರಳಂಚಿನಿಂದ ಹೊರಹೊಮ್ಮುತಿರಲಿ ಎಂದು ನುಡಿಯುತ್ತಿದೆ.

ನಾಟ್ಯಶ್ರೀ ಕಲಾ ಸಂಘ @ 25

ವೆಂಕಟೇಶ ಜಿ.ಎಚ್.

ಯಕ್ಷಗಾನವನ್ನು ಪ್ರಯೋಗಗಳಿಗೆ ಒಡ್ಡಿ ಬಡಗು, ತೆಂಕಣದ ಪರಿಸರದ ಕಥನಗಳು, ಪೌರಾಣಿಕ ಪ್ರಸಂಗಗಳ ಆಚೆಗೆ ಕೊಂಡೊಯ್ದ ಶ್ರೇಯ ಹೊಂದಿರುವ ಶಿವಮೊಗ್ಗದ ನಾಟ್ಯಶ್ರೀ ಕಲಾ ಸಂಘಕ್ಕೆ ಈಗ ಬೆಳ್ಳಿಹಬ್ಬದ ಸಂಭ್ರಮ..

ನಾಡಿನ ಸಾಂಸ್ಕೃತಿಕ ವೀರರಾದ ಬಸವಣ್ಣ, ಅಕ್ಕಮಹಾದೇವಿ, ಕಾಲಭೈರವೇಶ್ವರ, ಬೀರಲಿಂಗೇಶ್ವರ, ಕನಕದಾಸರು, ಗವಿಗಂಗಾಧರೇಶ್ವರರ ಕಥನಗಳನ್ನು ಯಕ್ಷಗಾನದ ಪ್ರಸಂಗಗಳಲ್ಲಿ ಅಳವಡಿಸಿಕೊಂಡು, ಅವರ ಆಶಯಗಳನ್ನು ಕರಾವಳಿ, ಮಲೆಸೀಮೆಯ ಮೇರೆ ಮೀರಿಸಿದವರು ನಾಟ್ಯಶ್ರೀ ಕಲಾಸಂಘದ ಸೂತ್ರಧಾರ ವಿದ್ವಾನ್ ದತ್ತಮೂರ್ತಿ ಭಟ್ಟರು.

ಸಾಗರ ಸಮೀಪದ ತಾಳಗುಪ್ಪದ ನಳಂದಾ ಕಾಲೇಜಿನಲ್ಲಿ ಸಂಸ್ಕೃತ ಉಪನ್ಯಾಸಕರಾಗಿದ್ದ ದತ್ತಮೂರ್ತಿ ಭಟ್ಟರಿಗೆ ಯಕ್ಷಗಾನದ ಬಗ್ಗೆ ಅತೀವ ಆಸಕ್ತಿ. ಅದರ ಫಲವಾಗಿ ಹುಟ್ಟಿಕೊಂಡದ್ದು ನಾಟ್ಯಶ್ರೀ ಕಲಾಸಂಘ. ಆರಂಭದ ದಿನಗಳಲ್ಲಿ ಸಾಗರದಲ್ಲಿ ಪೌರಾಣಿಕ ಪ್ರಸಂಗಗಳ ಸಪ್ತಾಹ ಆರಂಭಿಸಿ ಮನೆಮಾತಾಗಿದ್ದ ಈ ಸಂಸ್ಥೆ ನಂತರ ತನ್ನನ್ನು ಪ್ರಯೋಗಗಳಿಗೆ ತೆರೆದುಕೊಂಡಿತು. ಅಂದಿನ ಸೀಮಿತ ವ್ಯಾಪ್ತಿ ಮೀರಿ ಯಕ್ಷಗಾನವನ್ನು ಜಾತ್ಯತೀತವಾಗಿ, ಧರ್ಮಾತೀತವಾಗಿ ಕೊಂಡೊಯ್ಯುವ ಚಿಂತನೆಯ ಫಲವಾಗಿ ಮೊದಲಿಗೆ ಬಸವೇಶ್ವರರ ಚರಿತ್ರೆ ಯಕ್ಷಗಾನದ ಪ್ರಸಂಗ ರೂಪುಗೊಂಡಿತು.

‘ಯಕ್ಷಗಾನದ ಪರಿಸರದ ಬಹಳಷ್ಟು ಜನರಿಗೆ ಬಸವ ತತ್ವಗಳು ಗೊತ್ತಿಲ್ಲ. ಬಸವಾದಿ ಶರಣರ ಸಮಾಜದವರಿಗೆ ಯಕ್ಷಗಾನ ಗೊತ್ತಿಲ್ಲ. ಈ ಉದ್ದೇಶ ಇಟ್ಟುಕೊಂಡು 2004ರಲ್ಲಿ ಬಸವೇಶ್ವರ ಚರಿತ್ರೆಯ ಆಡಲು ಆರಂಭಿಸಿದೆವು. ಆಗ ಶಿವಮೊಗ್ಗದ ಬೆಕ್ಕಿನಕಲ್ಮಠದ ಸ್ವಾಮೀಜಿ ಬೆನ್ನಿಗೆ ನಿಂತರು. ಬಸವೇಶ್ವರರ ಕಥನ ಪ್ರಸಂಗ ರೂಪಿಸುವಾಗ ಸ್ವತಃ ಡಾ.ಎಂ.ಎಂ.ಕಲಬುರ್ಗಿ ಮಾರ್ಗದರ್ಶನ ಮಾಡಿದ್ದರು. ಧಾರವಾಡದ ಅವರ ಮನೆಗೆ ಹಲವು ಬಾರಿ ತೆರಳಿ ಚರ್ಚಿಸಿದ್ದೆ. ಸಾಣೇಹಳ್ಳಿಯ ಪಂಡಿತಾರಾಧ್ಯ ಸ್ವಾಮೀಜಿ, ಏಣಗಿ ಬಾಳಪ್ಪ ಅವರನ್ನು ಭೇಟಿಯಾಗಿ ಸಲಹೆ ಪಡೆದಿದ್ದೆ. ‘ಬಸವಣ್ಣನನ್ನು ದೇವರಾಗಿಸಬೇಡಿ. ಮಾನವತಾವಾದಿ ಮನುಷ್ಯನಾಗಿ ಮಾತ್ರ ಕಾಣಿ’ ಎಂದು ಕಲಬುರ್ಗಿ ಹೇಳುತ್ತಿದ್ದರು. ಆ ಮಾತನ್ನು ಎಚ್ಚರವಾಗಿಸಿಕೊಂಡು ಪ್ರಸಂಗ ಸಿದ್ಧಪಡಿಸಿದ್ದೆವು’ ಎಂದು ಬಸವೇಶ್ವರ ಚರಿತ್ರೆ ಒಡಮೂಡಿದ ದಿನಗಳನ್ನು ದತ್ತಮೂರ್ತಿ ಭಟ್ಟರು ನೆನಪಿಸಿಕೊಳ್ಳುತ್ತಾರೆ.

ಸಹಜವಾಗಿಯೇ ಅಲ್ಪಸ್ವಲ್ಪ ಪ್ರದರ್ಶನ ಆದಾಗಲೇ ತಪ್ಪುಗಳನ್ನು ಸರಿಪಡಿಸಿಕೊಳ್ಳುತ್ತಾ ಇಲ್ಲಿಯವರೆಗೆ ಬಸವೇಶ್ವರ ಚರಿತ್ರೆಯ 317 ಪ್ರಯೋಗಗಳನ್ನು ನಾಟ್ಯ ಸಂಘ ಮಾಡಿದೆ.

‘ಬೀದರ್‌ನ ಭಾಲ್ಕಿಯಿಂದ ಮೊದಲುಗೊಂಡು ರಾಜ್ಯದ ಎಲ್ಲ ಭಾಗದಲ್ಲಿ ಅಲ್ಲಿನ ಮಠಗಳು, ಸಮಾಜ ಹಾಗೂ ಯಕ್ಷಗಾನ ವಲಯದಲ್ಲೂ ಈ ಪ್ರಯೋಗ ಆಗಿದೆ. ಇದೊಂದು ಚಾರಿತ್ರಿಕ ಪ್ರದರ್ಶನ. ಯಕ್ಷಗಾನದ ಹಾಗೂ ಬಸವತತ್ವದ ಸೀಮೋಲ್ಲಂಘನೆಯಲ್ಲಿ ಮೈಲಿಗಲ್ಲು’ ಎಂದು ದತ್ತಮೂರ್ತಿ ಭಟ್ಟರು ಹೇಳುತ್ತಾರೆ. ಮುಂದೆ 2015ರಲ್ಲಿ ಆದಿಚುಂಚನಗಿರಿ ಪ್ರಸನ್ನನಾಥ ಸ್ವಾಮೀಜಿ ಅವರ ಆಶಯದಂತೆ ಕಾಲಭೈರವೇಶ್ವರ ಮಹಾತ್ಮೆಯನ್ನು ಪ್ರಸಂಗಕ್ಕೆ ಅಳವಡಿಸಿದ್ದಾರೆ. ನಾಥ ಪರಂಪರೆ, ಆದಿಚುಂಚನಗಿರಿ ಕ್ಷೇತ್ರ ಮಹಾತ್ಮೆ ಹಾಗೂ ಒಕ್ಕಲಿಗರ ಸಂಸ್ಕೃತಿಯ ರೂಪಕವಾಗಿರುವ ಈ ಪ್ರಸಂಗ ಇಲ್ಲಿಯವರೆಗೆ 91 ಪ್ರಯೋಗಗಳ ಕಂಡಿದೆ.

ಅದೇ ರೀತಿ ಅಕ್ಕಮಹಾದೇವಿ ಚರಿತ್ರೆಯನ್ನು ಯಕ್ಷಗಾನಕ್ಕೆ ಅಳವಡಿಸಿ 13 ಪ್ರಯೋಗಗಳನ್ನು ಮಾಡಿದ್ದಾರೆ. ಈಗ ಕುರುಬ ಸಮುದಾಯದ ಆರಾಧ್ಯದೈವ ಬೀರಲಿಂಗೇಶ್ವರ ಮಹಾತ್ಮೆ ಮತ್ತು ಕನಕದಾಸ ಚರಿತ್ರೆ ಯಕ್ಷಗಾನ ರಂಗ ಪ್ರದರ್ಶನಕ್ಕೆ ಅಣಿಯಾಗಿವೆ. ಇದರೊಂದಿಗೆ ರಾಮಾಯಣ, ಮಹಾಭಾರತ ಸೇರಿದಂತೆ ಪೌರಾಣಿಕ ಪ್ರಸಂಗಗಳ ಸಪ್ತಾಹ ಮುಂದುವರೆದಿದೆ. 2014ರಲ್ಲಿ ಕುವೆಂಪು ರಂಗಮಂದಿರದಲ್ಲಿ ನಾಟ್ಯಶ್ರೀ ಕಲಾ ಸಂಘದಿಂದ ನಿರಂತರ 42 ಗಂಟೆಗಳ ಯಕ್ಷಗಾನ ಪ್ರದರ್ಶನ ನಡೆದಿದ್ದು, ಅದೊಂದು ದಾಖಲೆ. 250 ಕಲಾವಿದರು ಸೇರಿ 13 ಪ್ರಸಂಗಗಳನ್ನು ರಂಗಕ್ಕೆ ತಂದಿದ್ದರು.

ನಾಟ್ಯಶ್ರೀ ಕಲಾ ಸಂಘದಲ್ಲಿ ಈಗ 16 ಮಂದಿ ಕಲಾವಿದರು ಇದ್ದಾರೆ. ವೃತ್ತಿ ತಂಡಗಳನ್ನು ಬಿಟ್ಟು ಹವ್ಯಾಸಿ ರಂಗದಲ್ಲಿ ಕಾಣಿಸಿಕೊಳ್ಳಲು ಇಚ್ಛಿಸುವ ಕಲಾವಿದರನ್ನು ಇಟ್ಟುಕೊಂಡು ಭಟ್ಟರು ಮೇಳ ರೂಪಿಸಿದ್ದಾರೆ. ಅವರ ತಂಡದಲ್ಲಿ ಈಗ ಕೊಳಗಿ ಕೇಶವ ಹೆಗಡೆ, ಅಶೋಕ್ ಭಟ್ ಸಿದ್ದಾಪುರ, ಪ್ರಭಾಕರ ಹೆಗಡೆ, ಸಂಜಯ ಬೆಳೆಯೂರು, ನಾಗೇಂದ್ರ ಮೂರೂರು, ಇಟಗಿ ಮಹಾಬಲೇಶ್ವರಂತಹ ಅನುಭವಿ ಕಲಾವಿದರು ಇದ್ದಾರೆ. ಸ್ವತಃ ದತ್ತಮೂರ್ತಿ ಭಟ್ಟರು ಹನುಮಂತ, ಬಸವಣ್ಣ, ಗವಿಗಂಗಾಧರೇಶ್ವರರ ಪಾತ್ರಗಳಲ್ಲಿ ಛಾಪು ಮೂಡಿಸಿದ್ದಾರೆ.

ಸದ್ಯ ಶಿವಮೊಗ್ಗದ ಡಿವಿಎಸ್ ಸ್ವತಂತ್ರ ಪದವಿಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರಾಗಿರುವ ಭಟ್ಟರು ಬಿಡುವಿನ ವೇಳೆ ಹಾಗೂ ರಜಾ ದಿನಗಳಲ್ಲಿ ನಾಟ್ಯ ಸಂಘ ಮುನ್ನಡೆಸಿದ್ದಾರೆ. ಮಗಳು ನವ್ಯಾ ಭಟ್ ಕೂಡ ಪ್ರಸಂಗಗಳ ಸಾಕಾರದಲ್ಲಿ ಅಪ್ಪನೊಂದಿಗೆ ಕೈಜೋಡಿಸುತ್ತಿದ್ದಾರೆ.

ನಾಟ್ಯಶ್ರೀ ಕಲಾ ಸಂಘದ ಗೆಳೆಯರು ಗೆಜ್ಜೆ ಕಟ್ಟಿದ ಸಮಯದ ಸ್ಮರಣೆಗಾಗಿ ಅಕ್ಟೋಬರ್ 16ರಂದು ಶಿವಮೊಗ್ಗದ ಕುವೆಂಪು ರಂಗಮಂದಿರದಲ್ಲಿ ನಾಟ್ಯಶ್ರೀ ರಜತನೂಪುರ ಕಾರ್ಯಕ್ರಮದ ಮೂಲಕ ನಡೆದುಬಂದ ಹೆಜ್ಜೆ ಸ್ಮರಿಸುತ್ತಿದ್ದಾರೆ.



ಚಿಕ್ಕಮಗಳೂರಿನ ಬಸವ ಮಂದಿರದಲ್ಲಿ ಯಕ್ಷ ಭಾವೈಕ್ಯ ಪ್ರದರ್ಶನ ಯಾತ್ರೆ ಅಂಗವಾಗಿ ಶಿವಮೊಗ್ಗದ ನಾಟ್ಯಶ್ರೀ ಕಲಾ ಸಂಘದ ಕಲಾವಿದರಿಂದ ಯಕ್ಷಗಾನ ಪ್ರದರ್ಶನ



ದತ್ತಮೂರ್ತಿ ಭಟ್

ಮುನ್ನೋಟ 16-10-2022 ರಿಂದ 22-10-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಕಲಾವಿದರಿಗೆ ವಿವಿಧ ಕ್ಷೇತ್ರಗಳಲ್ಲಿ ಅವಕಾಶಗಳು ದೊರೆಯುತ್ತವೆ ಹಾಗೂ ಅವರ ಪ್ರತಿಭಾ ಪ್ರದರ್ಶನಕ್ಕೆ ಸೂಕ್ತ ವೇದಿಕೆಗಳು ಸಿಗುತ್ತವೆ. ಉನ್ನತ ವ್ಯಾಸಂಗ ಮಾಡುವವರು ವ್ಯಾಸಂಗದಲ್ಲಿ ಸೂಕ್ತ ಆಯ್ಕೆಯನ್ನು ಮಾಡಿಕೊಳ್ಳುವುದು ಒಳ್ಳೆಯದು. ಹಣಕಾಸಿನ ಪರಿಸ್ಥಿತಿ ಸಾಧಾರಣವಾಗಿದ್ದು ಮನಸ್ಸಿಗೆ ಆತಂಕವೆನಿಸುತ್ತದೆ. ಯತ್ನಿಸಿದ ಕೆಲವು ಕಾರ್ಯಗಳಲ್ಲಿ ಉತ್ತಮ ಫಲ ಕಾಣಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಸ್ನೇಹಿತರ ಮತ್ತು ಬಂಧುಬಾಂಧವರ ಆರ್ಥಿಕ ಸಹಾಯದಿಂದ ಕೈಗೆತ್ತಿಕೊಂಡ ಕೆಲಸದಲ್ಲಿ ಯಶಸ್ಸನ್ನು ಕಾಣುವಿರಿ. ಬೇರೆಯವರ ತಳುಕಿನ ಮಾತಿಗೆ ಬೆರಗಾಗಿ ಬಂಡವಾಳವನ್ನು ಹೂಡದಿರಿ. ವೃತ್ತಿಯಲ್ಲಿದ್ದ ಕಿರಿಕಿರಿ ದೂರವಾಗುತ್ತದೆ. ಆರ್ಥಿಕ ಸಂಪನ್ಮೂಲ ಒದಗಿಬರುತ್ತದೆ. ಹೊಸ ವ್ಯಾಪಾರವನ್ನು ಆರಂಭಿಸುವ ಮುಂಚೆ ಅದರ ಬಗ್ಗೆ ಸರಿಯಾಗಿ ತಿಳಿಯಿರಿ. ಹಣದ ಒಳಹರಿವು ಚೇತರಿಕೆಯ ಹಾದಿಯಲ್ಲಿ ಇರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಕುಟುಂಬದವರೊಂದಿಗೆ ಸ್ನೇಹ ಮತ್ತು ಸಹನೆಯಿಂದಾಗಿ ಎದುರಾದ ಬಿಕ್ಕಟ್ಟುಗಳು ಮಂಜಿನಂತೆ ಕರಗುತ್ತವೆ. ದೂರದ ಸಂಬಂಧಿಗಳು ನಿಮ್ಮಿಂದ ಸಹಾಯ ಅರಸಿ ಬರುತ್ತಾರೆ. ಕೆಲಸಕಾರ್ಯಗಳಲ್ಲಿ ಸಾಕಷ್ಟು ಪ್ರಗತಿಯನ್ನು ಕಾಣಬಹುದು. ಸಂಗಾತಿಯ ಸಲಹೆಗಳು ಸಮಯೋಚಿತವಾಗಿ ಉಪಯೋಗಕ್ಕೆ ಬರುತ್ತವೆ. ಕ್ಷೀರೋತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಸಾಕಷ್ಟು ಲಾಭವಿರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ನಿಮ್ಮನ್ನು ಅರ್ಥಮಾಡಿಕೊಳ್ಳಲು ಆಗದವರಿಂದ ನಿಮಗೆ ಮುಜುಗರ ಆಗಬಹುದು. ತಂದೆಯಿಂದ ಸಾಕಷ್ಟು ಸಹಾಯ ದೊರೆಯುತ್ತದೆ. ಮಕ್ಕಳಿಂದ ಆರ್ಥಿಕ ಸಹಾಯ ಒದಗಿಬರುತ್ತದೆ. ಈ ರಾಶಿಯ ಹಿರಿಯರು ಸಲಹೆ ಸೂಚನೆಯನ್ನು ಕೊಡುವಾಗ ಯೋಗ್ಯರಿಗೆ ಕೊಡುವುದು ಉತ್ತಮ. ಇಲ್ಲವಾದಲ್ಲಿ ನಿಮಗೆ ಅವಮಾನವಾಗುವ ಸಾಧ್ಯತೆಗಳಿವೆ. ಸರ್ಕಾರಿ ಉದ್ಯೋಗಿಗಳಿಗೆ ಒಳ್ಳೆಯ ವಾರ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಸಮಾಜದ ಒಳಿತಿಗಾಗಿ ಕೆಲವರು ಕೈಗೊಂಡ ಕೆಲಸಗಳನ್ನು ಮಾಡಿಮುಗಿಸುವರು. ಬಂಧುಗಳಲ್ಲಿ ಸ್ನೇಹ ಸಂಬಂಧಗಳು ವೃದ್ಧಿಸುವ ಸಾಧ್ಯತೆಗಳಿವೆ. ವ್ಯವಹಾರಗಳಲ್ಲಿ ಸಂಬಂಧ ಹಳಸದಂತೆ ಎಚ್ಚರವಹಿಸಿ. ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ಖಂಡಿತ ದೊರೆಯುತ್ತದೆ. ಪ್ರಯಾಣ ಕಾಲದಲ್ಲಿ ಕಳ್ಳಕಾಕರ ಬಗ್ಗೆ ಜಾಗೃತರಾಗಿರುವುದು ಒಳ್ಳೆಯದು. ಹೊಸ ಆಸ್ತಿಯನ್ನು ಖರೀದಿ ಮಾಡುವ ಸಂದರ್ಭವಿದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ದೂರ ಪ್ರಯಾಣ ಅಥವಾ ಪ್ರವಾಸಕ್ಕಾಗಿ ನಿರ್ಧಾರ ಮಾಡುವಿರಿ. ವಿದ್ಯಾರ್ಥಿಗಳಿಗೆ ವ್ಯಾಸಂಗದ ಕಡೆ ಹೆಚ್ಚು ಗಮನ ಹರಿಸಬೇಕಾದ ಅಗತ್ಯವಿರುತ್ತದೆ. ಪಾಲುದಾರರಿಂದ ಸ್ವಲ್ಪ ಕಷ್ಟ ಆಗುವ ಸಂದರ್ಭವಿರುವುದರಿಂದ ಸ್ವತಂತ್ರ ವ್ಯವಹಾರ ಒಳ್ಳೆಯದು. ಕುಟುಂಬದವರೊಂದಿಗಿನ ಭಿನ್ನಾಭಿಪ್ರಾಯಗಳಿಂದಾಗಿ ನಿಂತು ಹೋಗಿದ್ದ ಕೆಲಸಗಳು ಈಗ ಆರಂಭವಾಗಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಧನಾದಾಯ ಉತ್ತಮವಾಗಿರುತ್ತದೆ. ಆದರೂ ಖರ್ಚು ಹೆಚ್ಚಿಗೆ ಬರುವುದರಿಂದ ಅದನ್ನು ಸರಿದೂಗಿಸಿಕೊಂಡು ಹೋಗಬೇಕಾದ ಅನಿವಾರ್ಯವಿರುತ್ತದೆ. ಸಂತರು, ಗುರುಗಳಿಗೆ ಮನಸ್ಸಿಗೆ ನೆಮ್ಮದಿ ನೀಡುವ ಹೊಸ ಮಾರ್ಗವೊಂದು ಗೋಚರಿಸುತ್ತದೆ. ದಿನಸಿ ವ್ಯಾಪಾರಿಗಳಿಗೆ ಲಾಭ ಹೆಚ್ಚಾಗುತ್ತದೆ. ಭೂಮಿ ಹಾಗೂ ಸ್ಥಿರಾಸ್ತಿ ವ್ಯಾಪಾರ ಮಾಡುವ ಮಧ್ಯವರ್ತಿಗಳಿಗೆ ಹೆಚ್ಚಿನ ಕಮಿಷನ್ ದೊರೆಯುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ವಾಸ್ತು ವಿನ್ಯಾಸ ಮುಂತಾದ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿರುವವರಿಗೆ ವಿಪುಲವಾದ ಅವಕಾಶಗಳು ದೊರೆತು ಉತ್ತಮ ಆದಾಯದ ದಿನಗಳಾಗಿವೆ. ಸ್ನೇಹದ ವಿಚಾರದಲ್ಲಿ ಎಡವುವ ಸಾಧ್ಯತೆ ಇದೆ. ಹಾಗಾಗಿ ಅಪರಿಚಿತರಲ್ಲಿ ಸ್ನೇಹ ಮಾಡುವ ಮೊದಲು ಎಚ್ಚರ. ಹಣದ ಹರಿವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಹೊಸ ವಾಹನ ಖರೀದಿ ಮಾಡುವ ಯೋಗವಿದೆ. ಸಂಗಾತಿಯ ಕಡೆಗೆ ಹೆಚ್ಚಿನ ಗಮನ ಅಗತ್ಯ.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಅನೇಕ ಯೋಜನೆಗಳನ್ನು ಒಮ್ಮೆಗೆ ಆರಂಭಿಸಬೇಡಿರಿ. ಕೋರ್ಟ್ ಕಚೇರಿ ವ್ಯವಹಾರಗಳಲ್ಲಿ ನಿಮಗೆ ಯಶಸ್ಸು ಇರುತ್ತದೆ. ಕೆಲವೊಂದು ಕೆಲಸಗಳಲ್ಲಿ ನಿಮ್ಮ ನಡೆಯಿಂದ ನಿಧಾನವಾಗಬಹುದು. ದೃಢನಿರ್ಧಾರದಿಂದ ವ್ಯವಹರಿಸಿದಾಗ ಒಳಿತಾಗುತ್ತದೆ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ. ವೈದ್ಯಕೀಯ ಕ್ಷೇತ್ರದಲ್ಲಿ ಕೆಲಸ ಮಾಡುವವರು ಉತ್ತಮ ಆದಾಯವನ್ನು ನಿರೀಕ್ಷಿಸಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ರೈತಾಪಿ ವರ್ಗದವರಿಗೆ ಸೂಕ್ತ ಪರಿಕರಗಳು ದೊರೆತು ಸಂತಸ ಮೂಡುತ್ತದೆ. ಸಿದ್ಧಪಡಿಸಿದ ವಸ್ತ್ರಗಳನ್ನು ಮಾರಾಟ ಮಾಡುವವರಿಗೆ ವ್ಯಾಪಾರ ಹೆಚ್ಚುತ್ತದೆ. ಸಾರಿಗೆ ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತಿರುವವರಿಗೆ ಅಭಿವೃದ್ಧಿ ಇದೆ. ಸ್ಥಿತಪ್ರಜ್ಞರಾಗಿ ಕೆಲಸ ಮಾಡುವುದರಿಂದ ಮೇಲಧಿಕಾರಿಗಳ ಮೆಚ್ಚುಗೆ ದೊರೆಯುತ್ತದೆ. ಆಳವಾಗಿ ಆಲೋಚಿಸಿ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವಿರಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಯುವಕರು ಯೋಚಿಸಿ ಕಾರ್ಯಪ್ರವೃತ್ತರಾಗುವುದು ಒಳಿತು. ದುಡುಕಿನ ನಿರ್ಧಾರಗಳಿಂದ ನಷ್ಟ ಅನುಭವಿಸಬೇಕಾಗಬಹುದು. ವಿದ್ಯಾರ್ಥಿಗಳಿಗೆ ಅತ್ಯಂತ ಶುಭವಾರ. ಯಂತ್ರೋಪಕರಣಗಳನ್ನು ಮಾರಾಟ ಮಾಡುವವರಿಗೆ ಅತ್ಯಂತ ಲಾಭದಾಯಕ ವಾರವಾಗಿರುತ್ತದೆ. ಹಣದ ಒಳಹರಿವು ನಿಮ್ಮ ನಿರೀಕ್ಷೆಯಷ್ಟು ಇರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಆತ್ಮಗೌರವಕ್ಕೆ ಧಕ್ಕೆ ಬರದಂತೆ ಯೋಚಿಸಿ ಸಹವಾಸ ಮಾಡುವುದು ಒಳ್ಳೆಯದು. ಹಣದ ವಿಚಾರದಲ್ಲಿ ಸ್ವಲ್ಪ ಜಾಗರೂಕರಾಗಿರುವುದು ಒಳಿತು. ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು. ಸಂಬಂಧವಿಲ್ಲದ ವಿಷಯಗಳಲ್ಲಿ ಮೂಗು ತೂರಿಸಿ ಮುಜುಗರಕ್ಕೆ ಒಳಗಾಗುವಿರಿ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ಸಂಗಾತಿಯೊಡನೆ ಮನಬಿಚ್ಚಿ ಮಾತನಾಡುವುದು ಬಹಳ ಒಳ್ಳೆಯದು.

ಪದಬಂಧ 2760



ಮೇಲಿನಿಂದ ಕೆಳಕ್ಕೆ

1. ರಾಮಕೃಷ್ಣ ಶ್ರೇಷ್ಠ ಹಕ್ಕಿಯ ಸ್ಥಾನ ಪಡೆದು ವಿವೇಕಾನಂದರ ಗುರುವಾದ 5
2. ಶಿವ ಹಚ್ಚಿದ ಭಸ್ಮ 3
3. ಬಿಡಿಸಿಕೊಳ್ಳಲಾಗದ ಸೆರೆ 2
4. ಹಮ್ಮು ಬಿಮ್ಮಿಲ್ಲದ ನಮ್ಮ ನಿಮ್ಮಂತೆ ಸಾಧಾರಣ ಮಂದಿ 5
6. ಗಡಿ ದಾಟಿರುವ ಶೀತ 3
8. ಏನ ಬಲ್ಲೆನು ನಾನು...ಅವಿವೇಕಿ 4
9. ಭಾಷಾಂತರ ಪ್ರಕ್ರಿಯೆ 3
11. ಕರ್ಣ, ಯಮ, ಶನಿ ಯಾರಾದರೂ ಆಗಬಹುದು ಎಲ್ಲರೂ ಸೂರ್ಯ ಪುತ್ರರೇ 4
12. ನೀರಿನಲ್ಲಿ ಹುಟ್ಟಿದವಳು 3
14. ಹಿರಿಯರಾಡುವ ಒಳ್ಳೆಯ ಮಾತು 5
16. ಸೂರ್ಯನ ಜೊತೆ ಶಿವ ಬೆಸೆದುಕೊಂಡ 5
18. ನಮಸ್ಕಾರ ಮಾಡಿ ವಂದಿಸು 3
19. ಗತಿಯಲ್ಲಿ ಶೀಘ್ರ 3
22. ಮೇ ತಿಂಗಳಲ್ಲಿ ಧಾವಿಸಿ ಬರುವ ಬುದ್ಧಿವಂತ ಹುಡುಗಿ 2

ಎಡದಿಂದ ಬಲಕ್ಕೆ

1. ವಿಶ್ವವಿದ್ಯಾಲಯಗಳು ಕೊಡುವ ಮೇಲಂತಸ್ಥಿನ ಪಟ್ಟ 3
4. ನಿಜವಾಗಿ ಆಕಾರ ಪಡೆದದ್ದು 3
5. ಕಾಲದಲ್ಲಿ ಕಳೆದುಹೋದ ದೈವದ ಪೂಜೆ ಕರಾವಳಿಯಲ್ಲಿ ಪ್ರಚಲಿತ 5
7. ಆಶ್ಚರ್ಯ ಅನಿರೀಕ್ಷಿತ ಸ್ಥಿತಿಯಲ್ಲಿ ಹೀಗೆ ದಶರಥಾತ್ಮಜನನ್ನು ಕರೆಯುತ್ತೀರಲ್ಲವೆ? 2
8. ಎಲ್ಲವನ್ನೂ ತಿಳಿದಿರುವ ದೊಡ್ಡ ವಿದ್ವಾಂಸ 5
10. ಜ್ಞಾನದ ರಸಧಾರೆ ಹರಿಸುವ ವಿದ್ಯಾಮಾತೆ 4
12. ಜನರಿಗೆ ಜನ್ಮಕೊಡುವ ಮಾತೆ 3
13. ಭಗವಂತನ ಪವಾಡ 3
15. ಭೂಲೋಕದ ಮಾನವ 4
17. ಮಂದಿ ಮಂದಿಯಲ್ಲಿ ಪ್ರಚಲಿತವಾದದ್ದು 5
20. ಇದು ಜಡವಲ್ಲ ನಡೆಯುವಂತದ್ದು 2
21. ಎತ್ತರಕ್ಕೆ ಸಾದೃಶವಾದ ಚಿನ್ನದ ಬೆಟ್ಟ 5
23. ವನದಲ್ಲಿ ಕೊನೆಗೊಳ್ಳುವ ಪದಸೃಷ್ಟಿ 3
24. ಪಿಂಚಣಿಗಾಗಿ ಅಲೆದ ತೇಜಸ್ವಿಯವರ ಕಥಾನಾಯಕ 3

ಪದಬಂಧ ಉತ್ತರ -2759

ಮೇಲಿಂದ ಕೆಳಕ್ಕೆ

1.ಜರುಗು 2.ನಗಣಿತ 3.ಪಂಡಿತ 4.ಬಿಗಿತ 7.ಕಮಲನಾಭ 9.ದಿನ 10.ಬಾಜಾಭಜಂತ್ರಿ 11.ಕೆರಿಗ 13.ಭೋಜನ 15.ರನ 18.ಬನಾರಸಿ 20.ಪುಳಕ 21.ಬೆನಕ 23.ಡಮರು

ಎಡದಿಂದ ಬಲಕ್ಕೆ

1.ಜನಾರ್ಧನ 3.ಪಂಜಾಬಿ 5.ಗುರುವಾಣಿ 6.ತಕತಕ 8.ತಗಾದಿ 10.ಬಾಯಾರಿಕೆ 12.ನಭೋಮಂಡಲ 14.ಭವಸಾಗರ 16.ನವಾರಂಭ 17.ನವಾಬ 19.ತ್ರಿಪುರಾಂಬೆ 22.ನಾಡಗೌಡ 24.ಕನಕ 25.ಸಿರಿಗುರು

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಜೇನುಹುಳ ಮತ್ತು ಕರಡಿ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಒಂದು ತೋಟದಲ್ಲಿ ಜೇನುಹುಳ ಹೂವಿನಿಂದ ಹೂವಿಗೆ ಹಾರಿ ಮಕರಂದ ಹೀರುತ್ತಿತ್ತು. ಆ ಮಕರಂದವನ್ನು ಗೂಡಿಗೆ ತಂದು ತುಪ್ಪವಾಗಿಸುತ್ತಿತ್ತು. ಜೇನು ಗೂಡಿನ ತುಂಬಾ ಸವಿಯಾದ ಜೇನು ತುಪ್ಪ ಸಂಗ್ರಹವಾಗುತ್ತಿತ್ತು.



ಆದರೇನು ಮಾಡುವುದು? ತೋಟದ ಪಕ್ಕದ ಕಾಡಿನಿಂದ ಕರಡಿಗಳು, ಬೇರೆ ಪ್ರಾಣಿಗಳು ಬಂದು ಗೂಡಿನಿಂದ ಜೇನು ತುಪ್ಪವನ್ನೆಲ್ಲಾ ಕದ್ದು ತಿಂದುಬಿಡುತ್ತಿದ್ದವು. ಎಷ್ಟೇ ಕಷ್ಟಪಟ್ಟರೂ ಜೇನುತುಪ್ಪ ಕರಡಿ ಅಥವಾ ಮನುಷ್ಯರ ಪಾಲಾಗುತ್ತಿತ್ತು.



ಕರಡಿಗಳು ಬಂದರಂತೂ ಜೇನು ತುಪ್ಪ ತಿನ್ನುವುದಷ್ಟೇ ಅಲ್ಲ. ಗೂಡನ್ನೆಲ್ಲಾ ಕೆಡವಿ ಹಾಳು ಮಾಡುತ್ತಿದ್ದವು. ಜೇನುಹುಳಗಳು ವಾಸಿಸಲೂ ಆಗುತ್ತಿರಲಿಲ್ಲ. ಜೇನು ಹುಳಗಳಿಗೆ ತುಂಬಾ ದುಃಖವಾಗುತ್ತಿತ್ತು. ಆದರೂ ಗೂಡು ಕಟ್ಟಿ ತುಪ್ಪ ಮಾಡುವುದನ್ನು ನಿಲ್ಲಿಸಲಿಲ್ಲ.



ಒಮ್ಮೆ ಮರದಲ್ಲಿದ್ದ ಹಕ್ಕಿಯೊಂದು ಜೇನು ಹುಳವನ್ನು ಕೇಳಿತು. 'ಇಷ್ಟೆಲ್ಲಾ ಜೇನನ್ನು ಕರಡಿಗಳು ತಿಂದು ಹಾಳುಗೆಡವಿದರೂ ಮತ್ತೆ ಸಂಗ್ರಹಿಸುತ್ತೀರಲ್ಲಾ...?' 'ಅವರು ತುಪ್ಪ ತಿಂದು ಗೂಡು ಕೆಡವಬಹುದು. ಆದರೆ, ತುಪ್ಪ ಮಾಡುವ, ಗೂಡು ಕಟ್ಟುವ ಕೌಶಲ ಕದಿಯಲಾರರು' ಎಂದಿತು ಜೇನು ಹುಳ.

ಪದ-ಬದಲಾಟ

1) ಪಾಟಿ ಕವಚ =......................
2) ಹಿಟ್ಟುಪಡಿ =......................
3) ನೀಲುಪಾರು =......................
4) ಮಗುಹಾರು =......................

ಅಕ್ಷರ ಆಟ

ಇಲ್ಲಿ ಕೊಟ್ಟಿರುವ 'ವರು' ಅಕ್ಷರಗಳ ಹಿಂದೆ ಒಂದು ಅಕ್ಷರ ಸೇರಿಸಿ ಮೂರು ಅಕ್ಷರದ ಒಂದು ಪದ ಮಾಡಿ.

1) ......ವರು
2) ......ವರು
3) ......ವರು
4) ......ವರು
5) ......ವರು
6) ......ವರು
7) ......ವರು
8) ......ವರು

ಟ್ವೆಂಟಿ – 20 ಮ್ಯಾಚ್

ಬಿಟ್ಟ ಪದ ಹೊಂದಿಸಿ

1)	ಕಾ _ಲು	A	ಡಾ
2)	ಸೇ _ವೆ	B	ಣಿ
3)	ಕು _ಣಿ	C	ಮ್ಮ
4)	ಗು _ಣಿ	D	ಹಿ
5)	ಅ _ವು	E	ತು
6)	ಮ _ನ	F	ಸ
7)	ಉ _ರ	G	ವ
8)	ಬೆ _ಲೆ	H	ನ
9)	ಕಾ _ಸು	I	ರಾ
10)	ಗ _ಡಿ	J	ಲ್ಯಾ
11)	ಹ _ಸ	K	ಮಾ
12)	ಮಾ _ವ	L	ವ್ಯಾ
13)	ಗ _ತ್ತು	M	ತ್ತು
14)	ಗ _ತ	N	ಮ
15)	ಉಂ _ಡಿ	O	ನ
16)	ಮ _ಳೆ	P	ರಿ
17)	ಹ _ಳೆ	Q	ಸು
18)	ಮೊ _ಳೆ	R	ಡಿ
19)	ಕು _ರ	S	ತ್ರ
20)	ಸ _ರ	T	ರ



ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲ ಅಕ್ಷರಗಳನ್ನು ಬಳಸಿ ಪಕ್ಕದಲ್ಲಿರುವ ಸುಳಿವು ಆಧರಿಸಿ ಹೊಸ ಪದ ರಚಿಸಿ

	ತ	ಡ	ಸುಳಿವು
1			ಒಂದು ಆಭರಣ
2			ಸ್ಪಂದಿಸು
3			ಹೊಟ್ಟು
4			ಗುಂಪು
5			ನಿರ್ಬಂಧಿಸು

ತಿದ್ದುಪಡಿ: ಕಳೆದ ಸಂಚಿಕೆಯ ಗೊಂದಲದ ಗಣಿತದ ಪ್ರಶ್ನೆ– 20 ಬಿಸ್ಕತ್‌ಗಳ ಸಮಾನ ಹಂಚಿಕೆಯ ಉತ್ತರ

1 ಗಂಡು X 3 ಬಿಸ್ಕತ್	=	3 ಬಿಸ್ಕತ್‌ಗಳು
5 ಹೆಣ್ಣು X 2 ಬಿಸ್ಕತ್	=	10 ಬಿಸ್ಕತ್‌ಗಳು
14 ಮಕ್ಕಳು X 1/2 ಬಿಸ್ಕತ್	=	7 ಬಿಸ್ಕತ್‌ಗಳು
ಒಟ್ಟು 20 ಜನ	=	20 ಬಿಸ್ಕತ್‌ಗಳು

ಗಣಿತದಲ್ಲಿ ಗರ್ದಿಗಮ್ಮತ್ತು

ಲೆಕ್ಕ ಮಾಡು ಮೋಜು ನೋಡು

1) 493827 X 7

2) 1569664903 X 7

3) 1122334455667789 X 9

4) 86432 X 9

5) 367913832 X 9



ಕಳೆದ ಸಂಚಿಕೆಯ ಸರಿ ಉತ್ತರಗಳು

ಟ್ವೆಂಟಿ –20 ಉತ್ತರಗಳು
1–J, 2-M, 3-K, 4-L, 5-O, 6-Q, 7-T, 8-H, 9-C, 10-F, 11-P, 12-S, 13-R, 14-G, 15-I, 16-N, 17-D, 18-E, 19-B, 20-A

ಜಾಣಪದ ಆಟ: 1 ಬಾಡು 2 ಬೇಡು 3 ಬಿಡು 4 ಬುಡ 5 ಬೇಡ

ಅದಲು ಬದಲು : 1 ಯಮಕೆಲಸ 2 ನಯಾಗರ 3 ಎಲ್ಲರ ಚಾವಿ 4 ಇಡಿಗವನ

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು



ಕೃತಿ ಭಂಡಿವಾಡ, ಬೆಂಗಳೂರು



ಹರ್ಷವರ್ಧನ ಕೆ.ಎಂ., ಜಗಳೂರು (ದಾವಣಗೆರೆ)



ಅಮೋಘ ನಾಯಕರ, ಗಜೇಂದ್ರಗಡ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in